
ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ-ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 17
ಸಂಚಿಕೆ 26

ಐಕ್ಯರಂಗ

ರೂ. 2.00
25 ಜೂನ್ 1995



ರೇಶನ್ ಪದಾರ್ಥಗಳ ಬೆಲೆಯಲ್ಲಿ ಇಳಿಕೆಯಾಗಲೇ ಬೇಕು

ಪ್ಯಾರಿಸ್‌ನಲ್ಲೊಂದು ಅಸತ್ಯ ಪ್ರಯೋಗ

ದೇಶದಲ್ಲಿ ತನ್ನ ನೇತೃತ್ವದಲ್ಲಿ ನಡೆಯುತ್ತಿರುವ ಆರ್ಥಿಕ "ಸುಧಾರಣಾ" ಪ್ರಕ್ರಿಯೆಯ ಬಗ್ಗೆ ಸರ್ವಸಮ್ಮತಿ ಇದೆ ಎಂದು ನರಸಿಂಹರಾಯರು ಮತ್ತೊಮ್ಮೆ ಹೇಳಿದ್ದಾರೆ. ಈ ಬಾರಿ ಫ್ರಾನ್ಸಿನ ರಾಜಧಾನಿ ಪ್ಯಾರಿಸ್ಸಿನಲ್ಲಿ. ಜತೆಗೆ ಕರೆದುಕೊಂಡು ಹೋದ ಭಾರತದ ಗುತ್ತೇದಾರಿ ಬಂಡವಾಳಶಾಹಿಗಳ(ಪ್ಯಾರಿಸ್ಸಿಗೆ ನರಸಿಂಹರಾಯರು ಹಾಗೂ ಈ ಬಂಡವಾಳಶಾಹಿಗಳ ತಂಡ ಇವರಲ್ಲಿ ಯಾರು ಯಾರನ್ನು ಪ್ಯಾರಿಸ್ಸಿಗೆ ಜತೆಗೆ ಕರೆದೊಯ್ದಿದ್ದಾರೆ ಎಂದು ಪತ್ರಿಕೆಯೊಂದರ ವ್ಯಂಗ್ಯಚಿತ್ರಕಾರರು ವ್ಯಂಗ್ಯವಾಡಿದ್ದಾರೆ) ಎದುರು ಹಾಗೂ ಫ್ರಾನ್ಸಿನ ಗುತ್ತೇದಾರಿ ಬಂಡವಾಳಶಾಹಿಗಳ ಎದುರು. ಬಹುಶಃ ಗುತ್ತೇದಾರಿಗಳಲ್ಲಿ ತನ್ನ ಆರ್ಥಿಕ ನೀತಿಗಳ ಬಗ್ಗೆ ವಿಶಾಲ ಒಮ್ಮತ ಇದೆ ಎಂದು ಅವರ ಇಂಗಿತವಿರಬಹುದು. ಏಕೆಂದರೆ ಜನಸಾಮಾನ್ಯರು ಅವರ ಲೆಕ್ಕಾಚಾರದಲ್ಲಿ ಇಲ್ಲ ಎಂದು ಈಗೀಗ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆಯಲ್ಲ!

ಆದರೆ ಈ ಬಾರಿಯ ಪ್ಯಾರಿಸ್ ಬಡಾಯಿಯಲ್ಲಿ ಒಂದು ವ್ಯತ್ಯಾಸವಿದೆ. ಹಿಂದೆ ತನ್ನ ಸರಕಾರ ಐದು ವರ್ಷ ಖಂಡಿತಾ ಮುಗಿಸುತ್ತದೆ ಎನ್ನುತ್ತಿದ್ದರು. ಈ ಬಾರಿ ತನ್ನ ಸರಕಾರವಿಲ್ಲದಿದ್ದರೂ ಈ ನೀತಿಗಳು ಮುಂದುವರಿಯುತ್ತದೆ ಎಂದು ಫ್ರೆಂಚ್ ಬಂಡವಾಳಶಾಹಿಗಳು ಒಪ್ಪಿಕೊಳ್ಳುವಂತೆ ಮಾಡಲು ಹೆಣಗಿದ್ದಾರೆ.

ಆದರೆ ಈ ಹೆಣಗಾಟವೇ ಅವರ ಆರ್ಥಿಕ ನೀತಿಗಳಿಗೆ ಸರ್ವಸಮ್ಮತಿಯಿಲ್ಲವೆಂಬುದಕ್ಕೆ ಸಾಕ್ಷಿಯಲ್ಲವೇ? ಇತ್ತೀಚೆಗೆ ಕಾಂಗ್ರೆ ರಾಜ್ಯ ಸರಕಾರಗಳೊಂದಿಗೆ ನರಸಿಂಹರಾಯರ ನೀತಿಗೆ "ಸರ್ವಸಮ್ಮತಿ" ವ್ಯಕ್ತಪಡಿಸಿದ್ದ ಬಿಜು ಪಟ್ನಾಯಕ್ ಜನತಾದಳ ಸರಕಾರವನ್ನೂ ಜನತೆ ತಿರಸ್ಕರಿಸಿದ್ದು, ಅಷ್ಟೇ ಏಕೆ ಈ ಆರ್ಥಿಕ ನೀತಿಗಳ ಬಗ್ಗೆ ಕಾಂಗ್ರೆಸ್ಸಿನಲ್ಲೇ, ಕಾಂಗ್ರೆಸ್ ಸಂಸತ್ ಸದಸ್ಯರಲ್ಲೇ ಅಸಂತೃಪ್ತಿ ಉಂಟಾದುದರಿಂದ ಕಾಂಗ್ರೆಸ್ಸಿನ ಬಿಕ್ಕಟ್ಟು ಒಡಕಿನವರೆಗೂ ಮುಟ್ಟಿದ್ದು, ಕಾಂಗ್ರೆಸ್ ಸಂಸತ್ ಸದಸ್ಯರೇ ಒಬ್ಬ(ಇವರು ಮಾಜಿ ಮಂತ್ರಿಗಳು ಕೂಡಾ) ಲೋಕಸಭೆಯಲ್ಲಿ 9 ಕಡಿತ ನಿಲುವಳಿಗಳನ್ನು ಮಂಡಿಸಿದ್ದು, ಪ್ರತಿಪಕ್ಷಗಳೆಲ್ಲಾ ಅದನ್ನು ಬೆಂಬಲಿಸಿದ್ದು, ಲೋಕಸಭಾಧ್ಯಕ್ಷರ ಕೃಪೆಯಿಂದಷ್ಟೇ ನರಸಿಂಹರಾಯರ ಸರಕಾರ ಬದುಕುಳಿದಿದ್ದು ಇವೆಲ್ಲಾ ಫ್ರೆಂಚ್ ಬಂಡವಾಳಶಾಹಿಗಳಿಗೆ ಗೊತ್ತಿರಲಿಕ್ಕಿಲ್ಲವೇ? ಕಳೆದ ನಾಲ್ಕು ವರ್ಷಗಳಿಂದ ಎಡಪಕ್ಷಗಳ, ಸಂಘಟಿತ ಕಾರ್ಮಿಕ ವರ್ಗದ ಸತತ ಪ್ರತಿಭಟನೆಗಳಿಂದಾಗಿಯೇ ಕಾಂಗ್ರೆ ಎಂ.ಪಿ.ಗಳೂ ತಮ್ಮ ಅಸಮಾಧಾನವನ್ನು ನೇರವಾಗಿ ವ್ಯಕ್ತಪಡಿಸಲಾರಂಭಿಸಿದ್ದಾರೆ ಎಂದು ಅವರಿಗೆ ತಿಳಿದಿರಬಹುದಲ್ಲವೇ? ಹಾಗಿದ್ದರೆ "ಸರ್ವಸಮ್ಮತಿ" ಎಂಬ ಪದಕ್ಕೆ ಬಹುಭಾಷಾ ಪಂಡಿತರೆನಿಸಿಕೊಂಡ ನರಸಿಂಹರಾಯರ ಅರ್ಥಕೋಶದಲ್ಲಿ ಏನರ್ಥವಿದೆಯೋ!!

ಪ್ರಸ್ತುತ ಆರ್ಥಿಕ ನೀತಿಗಳನ್ನು ಸಾರಾಸಗಟಾಗಿ ಬದಲಿಸಬೇಕು ಎಂಬ ಸಿಪಿಐ(ಎಂ) ನಿಲುವನ್ನು ಪೊಲಿಟ್ ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್ ಈ ಸಂದರ್ಭದಲ್ಲಿ 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯ ವರದಿಗಾರರ ಪ್ರಶ್ನೆಗೆ ಉತ್ತರಿಸುತ್ತಾ ಮತ್ತೊಮ್ಮೆ ಸ್ಪಷ್ಟಪಡಿಸಿದ್ದಾರೆ.ಜನಗಳ ನಡುವೆ ಈ ನೀತಿಗಳಿಗೆ ಏನೇನೂ ಬೆಂಬಲ ಸಿಕ್ಕಿಲ್ಲ. ಮುಂದಿನ ಚುನಾವಣೆಗಳಲ್ಲಿ ಕೇಂದ್ರದಲ್ಲಿ ಯಾವುದೇ ಒಂದು ಪಕ್ಷ ಅಧಿಕಾರಕ್ಕೆ ಬರುವ ಸಂಭವವಿಲ್ಲ. ಸಿಪಿಐ(ಎಂ) ಪ್ರಸ್ತುತ ನೀತಿಗಳನ್ನು ಆಮೂಲಾಗ್ರವಾಗಿ ಮರುವಿಮರ್ಶಿಸುವ ಹಾಗೂ ಪರ್ಯಾಯ ಆರ್ಥಿಕ ನೀತಿಗಳನ್ನು ಅನುಷ್ಠಾನಕ್ಕೆ ತರುವ ಪಕ್ಷವನ್ನು ಮತ್ತು ರಂಗವನ್ನು ಬೆಂಬಲಿಸುತ್ತದೆ ಎಂದೂ ಕಾಂ. ಪ್ರಕಾಶ್ ಕಾರಟ್ ಸ್ಪಷ್ಟಪಡಿಸಿದ್ದಾರೆ.

ಜನತಾದಳದ ಮುಖಂಡರು ಕೂಡಾ ಬೆಂಗಳೂರಿನಲ್ಲಿ ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಈಗ ನಡೆಯುತ್ತಿದ್ದ ಶಿಬಿರದಲ್ಲಿ ಕೇಂದ್ರ ಸರಕಾರ ಜ್ಯಾರಿಗೆ ತಂದಿರುವ ಹೊಸ ಆರ್ಥಿಕ ನೀತಿ, ಉದಾರೀಕರಣ ಮತ್ತು ಖಾಸಗೀಕರಣದ ಭ್ರಮೆಯಲ್ಲಿ ದೇಶದ ಸಾರ್ವಭೌಮತೆಯನ್ನೇ ಒತ್ತೆ ಇಡುವ ಧೋರಣೆಯಿಂದಾಗಿ ರಾಷ್ಟ್ರ ಇಂದು ದಿವಾಳಿಯ ಹಂತಕ್ಕೆ ಬಂದು ನಿಂತಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ತನ್ನ ಜೀವನ "ಸತ್ಯದೊಂದಿಗೆ ಪ್ರಯೋಗ" ಎಂದಿದ್ದ ಗಾಂಧೀಜಿಯ 125ನೇ ಜನ್ಮ ದಿನಾಚರಣೆಯ ಯುನೆಸ್ಕೋ ಸಮಾರಂಭದಲ್ಲಿ ಮಾತನಾಡುತ್ತಾ ಅದೇ ಪ್ಯಾರಿಸ್‌ನಲ್ಲಿ ಪ್ರಧಾನಮಂತ್ರಿ ನರಸಿಂಹರಾಯರು ಯಥಾಪ್ರಕಾರ ಗಾಂಧೀಜಿಯ ಸತ್ಯ, ಅಹಿಂಸೆ ಇತ್ಯಾದಿಗಳನ್ನು ಹಾಡಿಹೊಗಳಿದರಂತೆ. ನಂತರ ಬಹುಶಃ ತನ್ನ "ಅಸತ್ಯದೊಂದಿಗೆ ಪ್ರಯೋಗ" ನಡೆಸಿರಬೇಕು. ಇದೊಂದು ವಿಪರ್ಯಾಸ ಎಂದೂ ಗುರುತಿಸದಷ್ಟು ಈಗ ಸಾಮಾನ್ಯವಾಗಿ ಬಿಟ್ಟಿರುವ ಸಂಗತಿ ಭಾರತೀಯರಿಗೆ.

ರಾಜ್ಯ ಸರಕಾರಗಳ ಬೇಡಿಕೆಗೆ ಸಿಪಿಐ(ಎಂ) ಬೆಂಬಲ

-ಎನ್.ಕೆ. ಉಪಾಧ್ಯಾಯ

ಪಡಿತರ ಅಂಗಡಿಗಳಲ್ಲಿ ಮಾರಾಟವಾಗುತ್ತಿರುವ ಆಹಾರ ಧಾನ್ಯಗಳ ಬೆಲೆಯಲ್ಲಿ ಶೇ. 25ರಷ್ಟು ಬೆಲೆ ಇಳಿಕೆಯಾಗಬೇಕೆಂದು ಎಲ್ಲಾ ರಾಜ್ಯ ಸರಕಾರಗಳೂ ಕೇಂದ್ರ ಸರಕಾರವನ್ನು ಒತ್ತಾಯಿಸುತ್ತಿವೆ. ಬಹಿರಂಗ ಮಾರುಕಟ್ಟೆಯಲ್ಲಿ ವ್ಯಾಪಾರಸ್ಥರು ಅತ್ಯಾವಶ್ಯಕ ವಸ್ತುಗಳ ಬೆಲೆಯನ್ನು ಮನಬಂದಂತೆ ಹೆಚ್ಚಿಸುತ್ತಿರುವಾಗ ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಪಡಿತರ ಅಂಗಡಿಗಳ ಮೂಲಕ ಆಹಾರ ಧಾನ್ಯ ಮತ್ತು ವಿಂಬೆಣ್ಣೆ ಮಾರಾಟ ಮಾಡುವ ವ್ಯವಸ್ಥೆ ಮಾಡಲಾಗಿದೆ. ಆದರೆ ಬಂಡವಾಳಶಾಹಿ ಕಾಂಗ್ರೆಸ್ ಸರಕಾರ ಪಡಿತರ ಅಂಗಡಿಗಳ ಮೂಲಕ ಆಹಾರ ಧಾನ್ಯ ವಿತರಿಸಬೇಕಾಗಿ ಬಂದ ಉದ್ದೇಶವನ್ನೇ ಮರೆತು ಪ್ರತಿ ವರ್ಷ ಸಕ್ಕರೆ ಹಾಗೂ ಆಹಾರ ಧಾನ್ಯಗಳ ಬೆಲೆಗಳನ್ನು ಆಡಳಿತಾತ್ಮಕವಾಗಿ ಹೆಚ್ಚಿಸುತ್ತಲೇ ಬಂದಿದೆ. ಬಡ ಜನರ ಕಿಸೆ ಕತ್ತರಿಸುತ್ತಲೇ ಬಂದಿದೆ. ಸಕ್ಕರೆ ಉತ್ಪಾದಕರಿಗೆ ದೊಡ್ಡ ಭೂಮಾಲಕರಿಗೆ ಲಾಭ ಮಾಡಿಕೊಡುತ್ತಲೇ ಬಂದಿದೆ.

1991ರಿಂದ 1994ರವರೆಗೆ ಆಹಾರ ಧಾನ್ಯಗಳ ಬೆಲೆಗಳು ಶೇ. 55ರಷ್ಟು ಹೆಚ್ಚಿವೆ. ಒಂದು ದೇಶ ಅಭಿವೃದ್ಧಿಗೊಳ್ಳುತ್ತಿರುವಾಗ ಜನ ಸಾಮಾನ್ಯರಿಗೆ ಮೂಲಭೂತವಾಗಿ ಬೇಕಾಗಿರುವ ಆಹಾರ ಧಾನ್ಯಗಳ ಬೆಲೆಗಳನ್ನು ಸರಕಾರವೇ ಮುಂದಾಗಿ ಆಡಳಿತಾತ್ಮಕವಾಗಿ ಹೆಚ್ಚಿಸುತ್ತಿರುವುದು ಅಭಿವೃದ್ಧಿಗೆ ಮಾರಕವಾಗಿದೆ. ಬೆಲೆ ಹೆಚ್ಚಳದಿಂದಾಗಿ ಜನಸಾಮಾನ್ಯರಿಗೆ ಅತ್ಯಾವಶ್ಯಕವಾಗಿ ಬೇಕಾದಷ್ಟು ಆಹಾರ ಧಾನ್ಯವನ್ನು ಕೊಂಡುಕೊಳ್ಳಲು ಸಾಧ್ಯವಾಗುತ್ತಿಲ್ಲ. ಅದು ಅವರ ಆರೋಗ್ಯಕ್ಕೆ ಮಾರಕವಾಗುತ್ತಿದೆ.

ಗೋದಾಮುಗಳಲ್ಲಿದೆ ಜನರ ಹೊಟ್ಟೆಗಿಲ್ಲ

ಕೇಂದ್ರ ಸರಕಾರದ ಗೋದಾಮುಗಳಲ್ಲಿ ಸರಕಾರ ಲೆವಿ ಮೂಲಕ ಕೊಂಡುಕೊಂಡ 36 ಮಿಲಿಯ ಟನ್ ಆಹಾರ ಧಾನ್ಯ ಶೇಖರಣೆ ಇದೆ. ಆದರೆ ದೇಶಾದ್ಯಂತ ಪಡಿತರ ಅಂಗಡಿಗಳಲ್ಲಿ ವಿತರಣೆ ಮಾಡಬೇಕಾದ ಆಹಾರ ಧಾನ್ಯದ ಎತ್ತುವಳಿ ಕಡಿಮೆಯಾಗುತ್ತಿದೆ. 1993ರಲ್ಲಿ 14.52 ಮಿಲಿಯ ಟನ್ ಎತ್ತುವಳಿಯಾಗಿದ್ದರೆ, 1994ರಲ್ಲಿ 13.09 ಮಿಲಿಯ ಟನ್ ಮಾತ್ರ ಎತ್ತುವಳಿಯಾಗಿದೆ. ಅಂದರೆ ಜನರ ಹೊಟ್ಟೆಗೆ ಹಸಿವೆ ನೀಗಿಸಲು ಅನ್ನ ಬೇಕು. ಸರಕಾರೀ ಗೋದಾಮುಗಳಲ್ಲಿ ಸಾಕಷ್ಟು ಅನ್ನ ಇದೆ. ಆದರೆ ಅದು ಬಡವರ ಹೊಟ್ಟೆಗೆ ಬೀಳುತ್ತಿಲ್ಲ. ಹಸಿವೆಯನ್ನು ಇಂಗಿಸುತ್ತಿಲ್ಲ. ಕಾಂಗ್ರೆಸ್ ಸರಕಾರದ ಆಹಾರ ನೀತಿಯಲ್ಲಿ ಆರ್ಥಿಕ ನೀತಿಯಲ್ಲಿ ಈ ದ್ವಂದ್ವಾತ್ಮಕ ಸಮಸ್ಯೆಗೆ ಉತ್ತರವಿಲ್ಲ. ಮತ ಗಿಟ್ಟಿಸಲು ಮಾತ್ರ ಅಗ್ಗದ ಮಾತುಗಳ ಮಳೆ ಸುರಿಸಲಾಗುತ್ತಿದೆಯಷ್ಟೇ.

1977ರಲ್ಲಿ ಜನತಾಪಕ್ಷದ ಮೊರಾರ್ಜಿ ದೇಸಾಯಿ ಸರಕಾರ ಒಂದು ಕೆ.ಜಿ. ಸಕ್ಕರೆಯನ್ನು ಒಂದು ರೂಪಾಯಿಗೆ ಮಾರಾಟ ಮಾಡಿತ್ತು. ಈಗ ಆಂಧ್ರದ ಎನ್.ಟಿ.ರಾಮರಾವ್ ಸರಕಾರಒಂದು ಕೆ.ಜಿ. ಅಕ್ಕಿಯನ್ನು ರೂ. 3.50ಕ್ಕೆ ಮಾರಾಟ ಮಾಡುತ್ತಿದೆ. ದೇವೇಗೌಡ ಸರಕಾರಒಂದು ಕೆಜಿ ಅಕ್ಕಿಯನ್ನು ರೂ. 3.20 ಮಾರಾಟ ಮಾಡುವ ನಿರ್ಣಯ ಕೈಗೊಂಡಿದೆ. ತಮಿಳುನಾಡು ಸರಕಾರ ಉತ್ತಮ ಅಕ್ಕಿಯನ್ನು ಕೆಜಿಗೆ ರೂ. 3.75ರಂತೆಯೂ ಸಾದಾ ಅಕ್ಕಿಯನ್ನು ರೂ. 2.50ರಂತೆಯೂ ಮಾರಾಟ ಮಾಡುತ್ತಿದ್ದು, ಜುಲೈ ಒಂದರಿಂದ ಅದನ್ನು ರೂ. 2ರಂತೆ ಮಾರಾಟ ಮಾಡುವ ನಿರ್ಣಯ ಕೈಗೊಂಡಿದೆ. ಕಡಿಮೆ ದರದಲ್ಲಿ ಅಕ್ಕಿ ಮಾರಾಟ ಮಾಡಲು ಎನ್.ಟಿ. ರಾಮರಾವ್ ಸರಕಾರ ಪ್ರತಿ ವರ್ಷ ರೂ. 1,250 ಕೋಟಿ ಸಬ್ಸಿಡಿ ಕೊಡಬೇಕಾಗುತ್ತದೆ. ತಮಿಳುನಾಡು ಸರಕಾರ ಪ್ರತಿ ವರ್ಷ ರೂ. 600 ಕೋಟಿ, ದೇವೇಗೌಡರ ಸರಕಾರ ರೂ. 300 ಕೋಟಿ ಸಬ್ಸಿಡಿಗಾಗಿ ವ್ಯಯ ಮಾಡಬೇಕಾಗುತ್ತದೆ.

ಪಡಿತರ ಅಂಗಡಿಗಳ ಮೂಲಕ ಮಾರಾಟ ಮಾಡಲು ರಾಜ್ಯ ಸರಕಾರಗಳಿಗೆ ಕೇಂದ್ರ ಸರಕಾರ ಕೊಡ ಮಾಡುವ ಆಹಾರ ಧಾನ್ಯಗಳಿಗೆ ಈಗ ಕೇಂದ್ರ ಸರಕಾರ ರೂ. 5250 ಕೋಟಿ ಸಬ್ಸಿಡಿ ಕೊಡುತ್ತಿದೆ. ರಾಜ್ಯ ಸರಕಾರಗಳ ಒತ್ತಾಯದಂತೆ ಆಹಾರ ಧಾನ್ಯಗಳ ಬೆಲೆ ಇಳಿಸಿದರೆ ರೂ. 800 ಕೋಟಿ ಹೆಚ್ಚಿಗೆ ಆಹಾರ ಸಬ್ಸಿಡಿಗಾಗಿ ಖರ್ಚು ಮಾಡಬೇಕಾಗುತ್ತದೆ.


ದೊರೆಮಾತು ಮೀರುವುದೇ?

ಕೇಂದ್ರ ಸರಕಾರ ನೀಡುತ್ತಿರುವ ಸಬ್ಸಿಡಿ ಪ್ರಮಾಣದಲ್ಲಿ ಕಡಿತ ಮಾಡುವ ಉದ್ದೇಶದಿಂದ ಮತ್ತು ವ್ಯಾಪಾರಸ್ಥರಿಗೆ ಅನುಕೂಲವಾಗುವ ದೃಷ್ಟಿಯಿಂದ ರೈತರ-ಕಬ್ಬು ಬೆಳೆಗಾರರ ಹೆಸರಿನಲ್ಲಿ ಕೇಂದ್ರ ಸರಕಾರ ಆಡಳಿತಾತ್ಮಕವಾಗಿ ರೇಶನ್ ಅಂಗಡಿಗಳಲ್ಲಿ ಮಾರಾಟ ಮಾಡುವ ಆಹಾರ ಧಾನ್ಯ ಮತ್ತು ಸಕ್ಕರೆಯ ಬೆಲೆಯನ್ನು ಹೆಚ್ಚಿಸುತ್ತಲೇ ಬಂದಿದೆ. ಕೇಂದ್ರ ಆರ್ಥ ಮಂತ್ರಿ ಮನಮೋಹನ ಸಿಂಗ್ ಅವರ ದೃಷ್ಟಿಯಲ್ಲಿ ಸಬ್ಸಿಡಿಯನ್ನು ಜಾಸ್ತಿ ಮಾಡಿದರೆ ಅದು ದೇಶದ ಅರ್ಥ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಬೀರುತ್ತದೆಯಂತೆ. ಆದರೆ ಶೇರು ಹಗರಣದಲ್ಲಿ ಹರ್ಷದ್ ಮೆಹ್ತಾನಂತಹ ಭಾರಿ ತಿಮಿಂಗಲಗಳು ಸಹಸ್ರಾರು ಕೋಟಿ ನುಂಗಿ ಹಾಕಿದ್ದಾಗಲೀ, ರಾಷ್ಟ್ರೀಕೃತ ಬ್ಯಾಂಕುಗಳು ದೊಡ್ಡ ದೊಡ್ಡ ಉದ್ಯೋಗಪತಿಗಳಿಗೆ ನೀಡಿದ ಕೋಟ್ಯಾವಧಿ ಸಾಲಗಳನ್ನು ಮನ್ನಾ ಮಾಡುವುದಾಗಲೀ, ಕೇಂದ್ರ ಸರಕಾರ ಯಾವುದೇ ಜಮಾ-ಖರ್ಚುಗಳಿಲ್ಲದೆ ಪ್ರತಿದಿವಸ ಅಭಿವೃದ್ಧಿಯೇತರ ಕ್ಷೇತ್ರಗಳಲ್ಲಿ ಖರ್ಚು ಮಾಡುವ ನೀತಿಯಾಗಲೀ ದೇಶದ ಆರ್ಥಿಕತೆಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲವೇ? ದೇಶವನ್ನು ವಿದೇಶೀ ಸಾಲಗಾರರ ಬಲೆಯೊಳಗೆ ಸಿಗಿಸುವುದರಿಂದ ದೇಶದ ಆರ್ಥಿಕತೆಯ ಮೇಲೆ ಕೆಟ್ಟ ಪರಿಣಾಮವಾಗುವುದಿಲ್ಲವೇ?

ನಮ್ಮ ಕಾಂಗ್ರೆ ಸರಕಾರ ನಡೆಯುವುದು ಮಹಾತ್ಮಾ ಗಾಂಧಿಯವರ ಮಾರ್ಗದರ್ಶನದಲ್ಲಿ ಎಂದು ನರಸಿಂಹರಾಯರು ಫ್ರಾನ್ಸಿನಲ್ಲಿ ಹೇಳಿದ್ದಾರೆ. ಆದರೆ ನರಸಿಂಹರಾಯರ ಗುರುಗಳು ಐ.ಎಂ.ಎಫ್ ಮತ್ತು ವಿಶ್ವಬ್ಯಾಂಕಿನ ದೊರೆಗಳು ಎಂಬುದನ್ನು ಗುರುತಿಸಬೇಕು. ರಾಜ್ಯ ಸರಕಾರಗಳು - ಅವು ಕಾಂಗ್ರೆ ಪಕ್ಷದ್ದೇ ಇರಲಿ ಅಥವಾ ವಿರೋಧ ಪಕ್ಷಗಳದ್ದೇ ಇರಲಿ, ಪಡಿತರ ಅಂಗಡಿಗಳಲ್ಲಿ ವಿತರಣೆ ಮಾಡುವ ಆಹಾರ ಧಾನ್ಯಗಳ, ಸಕ್ಕರೆಯ ಬೆಲೆಯನ್ನು ಇಳಿಸಬೇಕು ಹಾಗೆಯೇ

ಪುಟ 8 ನೋಡಿ

ವಾರದ ವ್ಯಂಗ್ಯ ಚಿತ್ರ 'ಟೈಂಸ್ ಆಫ್ ಇಂಡಿಯಾ'ದಲ್ಲಿ ಆರ್.ಕೆ. ಲಕ್ಷ್ಮಣ್



4 ದಿಕ್ಕು ಕಾಣದಾಗಿರುವ ರಾವ್ ಸರಕಾರ -ಸುರ್ಜಿತ್

4 ಸಿಐಟಿಯು ದಾರಿಯಲ್ಲಿ ಸಾಗುವುದು ಹೇಗೆ? -ವಿ.ಜೆ.ಕೆ. ನಾಯರ್

5 ಎನ್ರೋನ್ ಬಗ್ಗೆ ಉಸಿರೆತ್ತೀರಾ ಹುಷಾರ್!

2 ◆ ಅಮೇರಿಕಾದ ಸೊಕ್ಕು ◆ ಎಂತಹ ಸಂದೇಶ ನೀಡಬೇಕು?

6 ಭೂ ಹೋರಾಟಕ್ಕೆ ಮಹಿಳೆಯರ ಬೆಂಬಲ

7 ಪಾಕಿಸ್ತಾನದ ಮೊಹಜಿರ್ ಸಮಸ್ಯೆ

ವರ್ತಮಾನ

ಅಮೇರಿಕನ್ ಸರಕಾರದ ಬೆದರಿಕೆಗೆ ತಕ್ಕ ಉತ್ತರ ನೀಡಬೇಕು

-ಪೊಲಿಟ್ ಬ್ಯೂರೋ

ದಭೋಲ್ ವಿದ್ಯುತ್ ಯೋಜನೆಯನ್ನು ರದ್ದು ಮಾಡಿದರೆ ವಿದೇಶೀ ಬಂಡವಾಳ ಹೂಡಿಕೆಯ ಎಲ್ಲಾ ವಿದ್ಯುತ್ ಯೋಜನೆಗಳಿಗೆ ಕುತ್ತು ಬರಬಹುದು ಎಂಬ ಅಮೇರಿಕನ್ ಸರಕಾರದ ಎಚ್ಚರಿಕೆಯ ಬಗ್ಗೆ ಪ್ರತಿಕ್ರಿಯಿಸುತ್ತಾ ಸಿಪಿಐ(ಎಂ) ಪೊಲಿಟ್ ಬ್ಯೂರೋ ಅಮೇರಿಕಾ ಸರಕಾರದ ವಿದ್ಯುತ್ ವಿಲಾಖೆಯ ಈ ಹೇಳಿಕೆ ನಮ್ಮ ವ್ಯವಹಾರಗಳಲ್ಲಿ ಮೂಗು ತೂರಿಸುವ, ಬೆದರಿಸುವ ನಗ್ನ ಪ್ರಯತ್ನ ಎಂದು ಬಲವಾಗಿ ಖಂಡಿಸಿದೆ. ಮಹಾರಾಷ್ಟ್ರ ಸರಕಾರದ ದಭೋಲ್‌ನಲ್ಲಿನ ಎನ್ರೋನ್ ವಿದ್ಯುತ್ ಯೋಜನೆಯ ಮರುವಿಮರ್ಶೆಯ ಪ್ರಕ್ರಿಯೆಯಲ್ಲಿ ಮೂಗು ತೂರಿಸುವ ಪ್ರಯತ್ನಕ್ಕೆ ಅವಕಾಶ ನೀಡಬಾರದು ಎಂದು ಪೊಲಿಟ್ ಬ್ಯೂರೋ ಹೇಳಿದೆ.

ವಾಶಿಂಗ್‌ಟನ್‌ನಲ್ಲಿ ಭಾರತದ ರಾಯಭಾರಿ ಕಚೇರಿ ಎನ್ರೋನ್ ಪ್ರಶ್ನೆಯನ್ನು ತೃಪ್ತಿಕರವಾಗಿ ಪರಿಹರಿಸಲಾಗುವುದು ಎಂದು ಹೇಳಿಕೆ ನೀಡಿರುವುದನ್ನು ನೋಡಿದರೆ ಇಂತಹ ನಗ್ನ ಬೆದರಿಕೆಗಳಿಗೆ ತಕ್ಕ ಉತ್ತರ ನೀಡುವ ಸ್ಥಿತಿಯಲ್ಲಿ ಕೇಂದ್ರ ಸರಕಾರ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ ಎಂದಿರುವ ಪೊಲಿಟ್ ಬ್ಯೂರೋ ಬಿಜೆಪಿ ಉಪ ಮುಖ್ಯಮಂತ್ರಿ ನೇತೃತ್ವದ ಮರುವಿಮರ್ಶೆ ಸಮಿತಿ ಕಟ್ಟುನಿಟ್ಟಾಗಿ ಜನಗಳ ಹಾಗೂ ರಾಜ್ಯದ ಹಿತಾಸಕ್ತಿಗಳನ್ನೇ ಗಮನದಲ್ಲಿಟ್ಟುಕೊಂಡು ವಿಮರ್ಶೆ ನಡೆಸಿ ಎನ್ರೋನ್‌ನೊಂದಿಗೆ ಆಗಿರುವ ಒಪ್ಪಂದವನ್ನು ರದ್ದು ಮಾಡಬೇಕು, ಇದಕ್ಕಿಂತ ಕಮ್ಮಿಯಾದದೇನನ್ನಾದರೂ ಮಾಡಿದರೆ ಅದು ದೇಶದ ಹಿತಾಸಕ್ತಿಗಳಿಗೆ ಮಾಡುವ ವಿಶ್ವಾಸಘಾತವಾಗುತ್ತದೆ ಎಂದಿದೆ.



ಮುಂಬೈನಲ್ಲಿ ಎನ್ರೋನ್ ಒಪ್ಪಂದದ ವಿರುದ್ಧ ನಡೆದ ಪ್ರತಿಭಟನೆಯಲ್ಲಿ

ಎನ್ರೋನ್ ಒಪ್ಪಂದದ ಮರುವಿಮರ್ಶೆ ನಿಲ್ಲಿಸಲು ಬೆದರಿಕೆ! ಅಮೇರಿಕಾದ ಸೊಕ್ಕಿನ ಪ್ರದರ್ಶನ

ಭಾರತ ಸರಕಾರ ಈ ಅವಮಾನ ನುಂಗಿಕೊಳ್ಳಲು ಪ್ರಯತ್ನಿಸುತ್ತಿದೆಯೇಕೆ, ದೇಶದ ಆರ್ಥಿಕ ಸಾರ್ವಭೌಮತೆಗೆ ಬೆದರಿಕೆಯೆಂಬುದು ಕೇವಲ ಕಪೋಲಕಲ್ಪನೆಯೆನ್ನುವವರು ಈಗೇನು ಹೇಳುತ್ತಾರೆ ಎಂದು ಪ್ರಶ್ನಿಸಿರುವ ಸಿಪಿಐ(ಎಂ) ಕೇಂದ್ರ ಸಮಿತಿಯ ವಾರಪತ್ರಿಕೆ "ಪೀಪಲ್ಸ್ ಡೆಮಾಕ್ರಸಿ"ಯ ಸಂಪಾದಕೀಯ

ಪತ್ರಿಕೆಗಳಲ್ಲಿ ಪ್ರಕಟವಾಗಿರುವಂತೆ ಅಮೇರಿಕನ್ ಸರಕಾರದ ವಿದ್ಯುತ್ ಇಲಾಖೆ ಭಾರತ ಸರಕಾರದ ಎನ್ರೋನ್ ದಭೋಲ್ ವಿದ್ಯುತ್ ಯೋಜನೆಯನ್ನು ಒಪ್ಪಂದದ ಪ್ರಕಾರ ಅನುಷ್ಠಾನಗೊಳಿಸದಿದ್ದರೆ ವಿದ್ಯುತ್ ವಲಯದಲ್ಲಿನ ಎಲ್ಲಾ ವಿದೇಶೀ ಬಂಡವಾಳ ಹೂಡಿಕೆಗಳನ್ನು ನಿಲ್ಲಿಸಲಾಗುವುದು ಎಂದು ಬೆದರಿಕೆ ಹಾಕಿದೆ. ಈ ಬೆದರಿಕೆಯನ್ನು ಬೆಂಬಲಿಸುತ್ತಾ ಬ್ರಿಟಿಶ್ ಮತ್ತು ಫ್ರೆಂಚ್ ಸರಕಾರಗಳ ವಕ್ತಾರರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಎನ್ರೋನ್ ಯೋಜನೆಯನ್ನು ಜ್ಯಾರಿಗೊಳಿಸದಿದ್ದರೆ ಮುಂದೆ ಎಲ್ಲಾ ವಿದೇಶೀ ಬಂಡವಾಳ ಹೂಡಿಕೆಗಳು ಭಾರತಕ್ಕೆ ಬರಲು ಹಿಂಜರಿಯಬಹುದು ಎಂದು ಸಾರಿದ್ದಾರೆ. ಇದು ಕೊನೆಯೆಚ್ಚರಿಕೆಯಲ್ಲದೆ ಮತ್ತೇನೂ ಅಲ್ಲ.

ಕಳೆದ ವರ್ಷದ ವರೆಗೆ ವಿದೇಶೀ ಸಂಸ್ಥೆಗಳಿಂದ ದೇಶದೊಳಗೆ 60 ಸಾವಿರ ಕೋಟಿ ರೂ.ಗಳಷ್ಟು ಬಂಡವಾಳ ಹೂಡಿಕೆಯಾಗಿದೆ. ಆದರೆ ಇದರಲ್ಲಿ ಉತ್ಪಾದಕ ವಲಯಕ್ಕೆ ಬಂದದ್ದು ಕೇವಲ 3000 ಕೋಟಿ ರೂ. ಉಳಿದದ್ದೆಲ್ಲಾ ಹೋದದ್ದು ಶೇರು ಮಾರ್ಕೆಟ್ಟಿಗೆ. ಸಾಧ್ಯವಾದಷ್ಟು ಬೇಗನೇ ಲಾಭ ಬಾಚಿಕೊಳ್ಳಲು. ಹಣಕಾಸು ಮಂತ್ರಿಗಳಾಗಲಿ, ಪ್ರಧಾನ ಮಂತ್ರಿಗಳಾಗಲಿ ಈ ವಿದೇಶೀ ಬಂಡವಾಳ ಹೂಡಿಕೆಯ ನಿಜವಾದ ಮಹತ್ವವನ್ನು ಎಂದೂ ವಿವರಿಸಿಲ್ಲ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ವಿದೇಶೀ ಬಂಡವಾಳ ಶೇರು ಮಾರುಕಟ್ಟೆಗೆ ಬಂದರೆ ಅದು ಇಡೀ ಆರ್ಥಿಕವನ್ನೇ ಚಂಚಲಗೊಳಿಸುವಂತದ್ದು. ಇದು ನಿಜವಾದ ಅರ್ಥದಲ್ಲಿಯೂ 'ಬಿಸಿದುಡ್ಡು' -ಎಷ್ಟು ಸುಲಭವಾಗಿ, ತ್ವರಿತವಾಗಿ ಒಳಬರುತ್ತದೋ ಅಷ್ಟೇ ಸುಲಭವಾಗಿ ಹಾಗೂ ವೇಗದಲ್ಲಿ ಹೊರಹರಿದು ಹೋಗುವಂತದ್ದು. ಹೀಗಿರುವಾಗ ಇದು ವರೆಗೆ ಹಾಕಿರುವ ಇಂತಹ ಗಾಳವನ್ನು ಹಿಂತೆಗೆದುಕೊಂಡರೆ ಅದರಿಂದ ವ್ಯತ್ಯಾಸವೇನೂ ಆಗದು.

ಆದರೂ ಕೂಡಾ ಅಮೇರಿಕನ್ನರು ಭಾರತವನ್ನು ಬೆದರಿಸುವ ಸೊಕ್ಕು ತೋರಿರುವುದೇ ಗ್ಯಾಟ್ ಒಪ್ಪಂದದ ಸ್ವರೂಪವೇನೆಂಬುದರ ಬಗ್ಗೆ ಬಹಳಷ್ಟು ಹೇಳುತ್ತದೆ. ದೇಶ ತನ್ನ ಆರ್ಥಿಕ ಸಾರ್ವಭೌಮತೆ ಕಳಕೊಳ್ಳುತ್ತಿದೆ ಎಂಬ ಆಪಾದನೆಗಳೆಲ್ಲಾ ಕಪೋಲ ಕಲ್ಪನೆ ಎಂದು ಬೀಗುತ್ತಾ ಭಾರತ ಸರಕಾರದ ವಕ್ತಾರರು ಹೇಳುತ್ತಾ ಬಂದಿದ್ದಾರೆ. ಈಗ ಈ ವಕ್ತಾರರನ್ನೇ ಕೇಳೋಣ -ಸ್ವಾಮೀ, ಒಂದು ಒಪ್ಪಂದವನ್ನು ಮತ್ತೆ ತೆರೆಯಬಾರದು, ಅದರ ಪರೀಕ್ಷಣೆ ಕೂಡಾ ಮಾಡಕೊಡದು ಎಂದು ಯಾರಾದರೂ ಬೆದರಿಸಬಹುದಾದರೆ, ರಾವ್ ಸರಕಾರಕ್ಕೆ ಇದೆಯೆನ್ನುವ ಸಾರ್ವಭೌಮತೆಯಾದರೂ ಎಂತಹದು? ಅರವತ್ತು, ಎಪ್ಪತ್ತರ ದಶಕದಲ್ಲಿ ಮಧ್ಯ ಪೂರ್ವ ಪ್ರದೇಶದ ದೇಶಗಳನ್ನು ಕುರಿತಂತೆ ಅಮೇರಿಕಾ ನೀತಿಯನ್ನು ನಿರ್ದೇಶಿಸುತ್ತಿದ್ದವರು "ಏಳು ಸೋದರಿಯರು" ಅಂದರೆ ಏಳು ದೈತ್ಯ ಬಹುರಾಷ್ಟ್ರೀಯ ತೈಲ ಕಂಪೆನಿಗಳು ಎಂದು ಹೇಳಲಾಗುತ್ತಿತ್ತು. ಈಗ ಸಮಯ ಬದಲಾಗಿದೆ. ಈಗ ಅಮೇರಿಕನ್ ಧೋರಣೆಗಳನ್ನು ನಿರ್ಧರಿಸುವವರು ಬಹುರಾಷ್ಟ್ರೀಯ ಕಂಪೆನಿಗಳ ಒಂದು ಗುಂಪು. ಮೂರನೇ ಜಗತ್ತಿಗೆ ಸಂಬಂಧಪಟ್ಟ ವಿಷಯಗಳಲ್ಲಂತೂ ಎಲ್ಲಾ ಸುಲಿಗೆಕೋರ ಸಾಮ್ರಾಜ್ಯಶಾಹಿ ಶಕ್ತಿಗಳು ತೋಳಗಳಂತೆ ಮುತ್ತಿಕೊಂಡಿವೆ.

ಭಾರತ ಸರಕಾರ ಈ ಅವಮಾನವನ್ನು ಯಾವುದೇ ದುಗುಡವಿಲ್ಲದೆ ಸಾಧ್ಯವಾದಷ್ಟು ಸದ್ದಿಲ್ಲದೆ ನುಂಗಿಕೊಳ್ಳಲು ಪ್ರಯತ್ನಿಸುತ್ತಿದೆ. ಇದೇನು ಅನಿರೀಕ್ಷಿತವೂ ಅಲ್ಲ, ಏಕೆ ದೇಶದ ಸಾರ್ವಭೌಮತೆಯನ್ನು ಚೂರು ಚೂರಾಗಿ ಕುಗ್ಗಿಸುತ್ತಾ ಹೋಗುತ್ತಿದೆ ಈ ಸರಕಾರ ಎಂದು ತಿಳಿಯುವ ಹಕ್ಕು ದೇಶಕ್ಕಿದೆ: ನಿಜ. ಸರಕಾರಕ್ಕೆ ಆಡಳಿತ ನಡೆಸುವ ಹಕ್ಕು ಇದೆ, ಆದರೆ ನಮ್ಮ ಆರ್ಥಿಕ ಸಾರ್ವಭೌಮತೆಯನ್ನು ಮಾರಾಟ ಮಾಡುವ ಹಕ್ಕು ಅದಕ್ಕಿಲ್ಲ.



ಟೈಮ್ಸ್ ಆಫ್ ಇಂಡಿಯಾದಲ್ಲಿ ಆರ್.ಕೆ. ಲಕ್ಷ್ಮಣ್ ವ್ಯಂಗ್ಯ ಚಿತ್ರ

ವಿದೇಶೀ ಬಂಡವಾಳ ಹೂಡಿಕೆದಾರರಿಗೆ ಎಂತಹ ಸಂದೇಶ ತಲುಪಿಸಬೇಕಾಗಿದೆ?

ಎನ್ರೋನ್ ಒಪ್ಪಂದವನ್ನು ರದ್ದು ಮಾಡಿದರೆ ಭಾರತ ಮಾತಿಗೆ ತಪ್ಪುವ ದೇಶ ಎಂಬ ಕಳಂಕ ಬರುತ್ತದೆ ಎಂದು ಪ್ರಧಾನ ಮಂತ್ರಿಯಾದಿಯಾಗಿ ಮಾಡುತ್ತಿರುವ ವಾದ ಶುದ್ಧ ಸುಳ್ಳು. ತದ್ವಿರುದ್ಧವಾಗಿ ಒಪ್ಪಂದವನ್ನು ರದ್ದು ಮಾಡದಿದ್ದರೆ ಭಾರತವನ್ನು ಯಾರೂ ಬೇಕಾದರೂ ಹೇಗೆ ಬೇಕಾದರೂ ಕುಣಿಸಬಹುದು, ಬೆದರಿಸಬಹುದು ಎಂಬ ಕಳಂಕ ಅಂಟಿಸಿಕೊಂಡಂತಾಗುತ್ತದೆ ಎಂದಿದ್ದಾರೆ ಒಬ್ಬ ವಿಶ್ಲೇಷಕರು. ಮೇ 29, 1995ರ 'ಇಂಡಿಯನ್ ಎಕ್ಸ್ ಪ್ರೆಸ್'ನಲ್ಲಿ ಆರ್.ಎಸ್. ಭಾಸ್ಕರ್ ಎಂಬುವವರ ಲೇಖನ ಒಂದು ಅಂಶ ಇಲ್ಲಿದೆ.

ಎನ್ರೋನ್‌ನ ವಕ್ತಾರರು ಸಮರೋತ್ಸಾಹದಿಂದಿದ್ದಾರೆ. ಅವರು ಸದಾ ಹಾಗೆಯೇ ಇರುವವರೆನ್ನಿ. ಮಹಾರಾಷ್ಟ್ರ ಸರಕಾರ ದಭೋಲ್ ವಿದ್ಯುತ್ ಯೋಜನೆಯ ತಪಾಸಣೆ ಮಾಡಬಾರದೆಂದು ಬಯಸುತ್ತಿರುವ ಅವರು ಈ ಒಪ್ಪಂದವನ್ನು ಏಕೆ ರದ್ದು ಮಾಡಬಾರದು ಎಂಬುದಕ್ಕೆ ಮೂರು ಬಲವಾದದ್ದೆಂದು ಅನ್ನಿಸುವಂತಹ ವಾದಗಳನ್ನು ಮಂಡಿಸುತ್ತಿದ್ದಾರೆ.

....ಎನ್ರೋನ್ ಯೋಜನೆಯನ್ನು ರದ್ದು ಮಾಡಿದರೆ ಜಗತ್ತಿಗೆ ತಪ್ಪು ಸಂದೇಶ ನೀಡಿದಂತಾಗುತ್ತದೆ. ಇದು ವಿದೇಶೀ ಬಂಡವಾಳ ಹೂಡಿಕೆ ಹರಿದು ಬರಲು ಒಂದು ಒಳ್ಳೆಯ ಜಾಗ ಎಂಬ ಕೀರ್ತಿಗೆ ಮಸಿ ಬಳಿಯುತ್ತಿದೆ ಎಂದು ಎನ್ರೋನ್ ನವರು ಮತ್ತು ಕೆಲವು ಮೇಲಿನ ಹಂತಗಳಲ್ಲಿ ಒಳ್ಳೆಯ ಸಂಪರ್ಕ ಇರುವ ವ್ಯಕ್ತಿಗಳು ಹೇಳುತ್ತಿದ್ದಾರೆ. ದೇಶಕ್ಕೆ ಇದು ಒಳ್ಳೆಯದಲ್ಲ ಎಂದು ಅವರ ವಾದ.

ಆದರೆ ಈ ವಾದ ಹೂಡುವವರು ಇದರಲ್ಲಿರುವ ಒಂದು ಮೂಲಭೂತ ಹುಳುಕುಗಳನ್ನು ಮರೆಯುತ್ತಾರೆ. ಈ ಯೋಜನೆಯ ಭಾರತಕ್ಕೆ ಅಥವಾ ಮಹಾರಾಷ್ಟ್ರಕ್ಕೆ ಪ್ರಯೋಜನವಾಗುವುದಿಲ್ಲವೆಂದಾದರೆ, ವಿದೇಶೀ ಬಂಡವಾಳ ಹೂಡಿಕೆಯನ್ನು ನಿರುತ್ತೇಜಿತಗೊಳಿಸ ಬಹುದೆಂಬ ಭಯ ಒಂದು ತರ್ಕಬದ್ಧ ವಿಚಾರಣೆಯನ್ನು ವಿಫಲಗೊಳಿಸಲು ಬಿಟ್ಟರೆ ಆಗ ಭಾರತ ಇನ್ನೂ ಹೆಚ್ಚು ಅನಿಷ್ಟಕಾರಿ ಸಂದೇಶವನ್ನು ಕಳಿಸಿದಂತಾಗುತ್ತದೆ. ಒಮ್ಮೆ ಅಧಿಕಾರದಲ್ಲಿರುವ ಯಾವುದೇ ಪಕ್ಷ ಒಂದು ಯೋಜನೆಗೆ ಅನುಮೋದನೆ ನೀಡಿದ ಮೇಲೆ, ಅದು ಎಷ್ಟೇ ವಿನಾಶಕಾರಿಯಾಗಿದ್ದರೂ ಅದನ್ನೆಂದೂ ರದ್ದು ಮಾಡಲು ಸಾಧ್ಯವಿಲ್ಲವೆಂಬ ಇನ್ನೊಂದು ಹೆಚ್ಚು ಅನಿಷ್ಟಕಾರೀ ಸಂದೇಶ ನೀಡಿದಂತಾಗುತ್ತದೆ..................

..........ಎನ್ರೋನ್ ಈ ವ್ಯವಹಾರದ ಬಗ್ಗೆ ಮರು ಮಾತುಕತೆ ನಡೆಸಲು ಒಪ್ಪದಿದ್ದರೆ ಭಾರತ ಕೂಡಾ ಅಂತರ್ರಾಷ್ಟ್ರೀಯ ಬಂಡವಾಳ ಹೂಡಿಕೆ ಸಮುದಾಯಕ್ಕೆ ತಪ್ಪು ಸಂದೇಶ ಹೋಗದಂತೆ ನೋಡಿಕೊಳ್ಳಬೇಕಾಗುತ್ತದೆ. ಈ ದೇಶ ಯಾವುದೇ ವ್ಯವಹಾರವನ್ನು ಕುದುರಿಸಿಕೊಳ್ಳಬಹುದಾದ, ಒಮ್ಮೆ ಇಂತಹ ವ್ಯವಹಾರ ಕುದುರಿಸಿದ ಮೇಲೆ ಅದನ್ನು ರದ್ದು ಮಾಡುವ ಅವಕಾಶವೇ ಇಲ್ಲದಂತಹ ಒಂದು 'ಬಾಳೆ ಹಣ್ಣು ಗಣತಂತ್ರ'ವಲ್ಲ ಎಂಬುದನ್ನು ಭಾರತ ಮತ್ತು ಮಹಾರಾಷ್ಟ್ರ ಸ್ಪಷ್ಟಗೊಳಿಸಬೇಕಾಗಿದೆ"

ಏನಿದು "ಕಾರ್ಷಿಕ"?

"ಕಾಮ್ರೇಡ್ ನಮ್ಮ ಪಾರ್ಟಿ ಸಮಿತಿ ಸುತ್ತೋಲೆ ಸಿಕ್ಕಿತು. ನಮ್ಮ ಶಾಖೆಯಲ್ಲಿ ಚರ್ಚೆ ಮಾಡಿದೆವು. ಅದರಲ್ಲಿ ನಮಗೆ ಒಂದು ಶಬ್ದ ಅರ್ಥ ಸರಿಯಾಗಿ ತಿಳಿಯಲಿಲ್ಲ. ಕಾರ್ಷಿಕ ರಂಗದ ಜವಾಬ್ದಾರಿ ಎಂದು ತೀರ್ಮಾನ ಮಾಡಿದ್ದೀರಿ. ಕಾರ್ಷಿಕ ರಂಗದ ಬದಲು 'ಕೃಷಿ ರಂಗ' ಎಂದರೇ ಸರಳ ಬಳಕೆಯಲ್ಲವೆ? ಕಾರ್ಷಿಕ ಎಂಬ ಶಬ್ದ ಎಲ್ಲೂ ನಾವು ಕೇಳಿಲಿಲ್ಲವಲ್ಲ, ಈ ಶಬ್ದದ ಅರ್ಥ ವೇನು? ಕಾರ್ಷಿಕ ಮತ್ತು ಕೃಷಿ ಶಬ್ದಗಳಿಗೆ ವ್ಯತ್ಯಾಸವೇನು?

ಇದು ಬಳ್ಳಾರಿ ಜಿಲ್ಲೆಯ ಹಲವು ಶಾಖಾ ಮುಖಂಡರು ಅದರಲ್ಲೂ ಕೃಷಿ ವಿಷಯದ ವಿಶೇಷ ವಿದ್ಯಾರ್ಹತೆ ಇರುವ ಸಂಗಾತಿಗಳು ಸೇರಿದಂತೆ ಕೇಳಿದ ಪ್ರಶ್ನೆ.

'ಕೃಷಿ' ಎಂದರೆ ವ್ಯವಸಾಯದ ಉತ್ಪಾದನೆ ಎಂದು ಅರ್ಥ. ವ್ಯವಸಾಯದ ಉತ್ಪತ್ತಿ ಮಾಡುವ ಪ್ರಕ್ರಿಯೆಯಲ್ಲಿ ಮಾಡುವ ಚಟುವಟಿಕೆಯನ್ನು ಕೃಷಿ ಚಟುವಟಿಕೆ ಎನ್ನುತ್ತಾರೆ.

"ಕಾರ್ಷಿಕ" ಅಂದರೆ ಕೃಷಿ ಚಟುವಟಿಕೆಗಳ ಪ್ರಕ್ರಿಯೆಯಲ್ಲಿ ಒಳಗೊಂಡಿರುವ ಮನುಷ್ಯರ ನಡುವಿನ ಸಂಬಂಧಗಳು ಎಂದು ಅರ್ಥ. ಅಂದರೆ ಉತ್ಪಾದನಾ ಸಂಬಂಧ ಎಂದು ಅರ್ಥ. ಭೂಮಿಯ ಮಾಲಿಕ ಅಥವಾ ವಿಭಿನ್ನ ಹಿಡುವಳಿ ಹೊಂದಿರುವ ಭೂಮಿಯ ಮಾಲಿಕರು ಅವರವರ ನಡುವೆ ಇರುವ ಸಂಬಂಧ ಮತ್ತು ಸ್ಥಾನಮಾನ ಹಾಗೂ ಭೂ ಹಿಡುವಳಿದಾರ ಮತ್ತು ಹಿಡುವಳಿ ಏನೂ ಇಲ್ಲದೇ ತನ್ನ ಶ್ರಮವನ್ನು ಕೃಷಿ ಚಟುವಟಿಕೆಯಲ್ಲಿ ತೊಡಗಿಸುವ ಕೂಲಿ ಆಳುಗಳ ನಡುವಿನ ಸಂಬಂಧ. ಒಟ್ಟಾರೆಯಾಗಿ ಕೃಷಿ ರಂಗದಲ್ಲಿ ತೊಡಗಿರುವ ಮನುಷ್ಯ ಸಂಬಂಧಗಳು.

'ಕೃಷಿ' ಎಂದರೆ ಆಂಗ್ಲ ಭಾಷೆಯಲ್ಲಿ 'ಅಗ್ರಿಕಲ್ಚರ್' ಶಬ್ದಕ್ಕೆ ಸಮಾನ. 'ಕಾರ್ಷಿಕ' ಎಂದರೆ ಆಂಗ್ಲ ಭಾಷೆಯ 'ಅಗ್ರೇರಿಯನ್' ಶಬ್ದಕ್ಕೆ ಸಮಾನ. 'ಕಾರ್ಷಿಕ' ಎಂಬ ಪದ ಬಂಡವಾಳಶಾಹಿ ಬುದ್ಧಿ ಜೀವಿಗಳು ಬಳಸುವುದಿಲ್ಲ. ಅಥವಾ ಸಾಧಾರಣ ಬಳಕೆಯಲ್ಲಿ ಇಲ್ಲ. ಈ ಶಬ್ದ 'ಮಾರ್ಕ್ಸ್‌ವಾದಿಗಳಲ್ಲಿ ಮಾತ್ರ ಪ್ರಚಲಿತ. 'ಕಾರ್ಷಿಕ' ಶಬ್ದಕ್ಕೆ ಪ್ರತ್ಯೇಕ ನಿರ್ದಿಷ್ಟ ಅರ್ಥವಿದೆ (ವರ್ಗ ದೃಷ್ಟಿಯಲ್ಲಿ) ಎಂದು ವಿವರಣೆ ನೀಡಿದರು ಕಾಂ. ಜಿ.ಎನ್. ನಾಗರಾಜ್ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು.

ಸಾದರ ಸ್ವೀಕಾರ

ದರ್ಶನ -ದೇವಿಪ್ರಸಾದ್ ಚಟ್ಟೋಪಾಧ್ಯಾಯ	ಬೆಲೆ. ರೂ. 35
ಜನಸಾಮಾನ್ಯರಿಗೆ ಎಂಥ ವಿಜ್ಞಾನ ಬೇಕು? -ಜೆ.ಆರ್. ಲಕ್ಷ್ಮಣರಾವ್	ಬೆಲೆ. ರೂ. 35
ಮಹಾಚೈತ್ರ -ಹೆಚ್.ಎಸ್. ಶಿವಪ್ರಕಾಶ್	ಬೆಲೆ ರೂ. 16
ಶಬ್ದಲೋಕ -ಗಾಯತ್ರಿ ಮೂರ್ತಿ	ಬೆಲೆ. ರೂ. 28
ತಾರಾಂತರಂಗ -ಬಿಮಾನ್ ಬಸು	ಬೆಲೆ. ರೂ. 25
ಆಟೋರಿಕ್ಷಾ ಮೆಕಾನಿಸಂ ಮತ್ತು ದುರಸ್ತಿ -ಎಸ್. ಶ್ರೀನಿವಾಸನ್	ಬೆಲೆ. ರೂ. 50
ಸಂಪನ್ಮೂಲಗಳಿಗಾಗಿ ಸಮುದ್ರ ಮಥನ -ಟಿ.ಕೆ.ಎಸ್. ಮೂರ್ತಿ	ಬೆಲೆ. ರೂ. 28
ಸ್ಯಾಟಲೈಟ್ ಟಿ.ವಿ. -ಜಿ.ಎನ್. ಮೋಹನ್	ಬೆಲೆ ರೂ. 20

ಪ್ರಕಾಶಕರು
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು -5600 61

ಕರ್ನಾಟಕ ಸುದ್ದಿ ಸಮಾಚಾರ

ಗಾರ್ಮೆಂಟ್ ಕಾರ್ಖಾನೆಗಳಲ್ಲಿ ಅಕ್ರಮ ಬೀಗಮುದ್ರೆ: ವ್ಯಾಪಕ ಪ್ರತಿಭಟನೆ

ಅಶೋಕ್ ಸಾಮ್ರಾಟ್ ಕಾರ್ಖಾನೆಯ ಅಕ್ರಮ ಬೀಗ ಮುದ್ರೆಯನ್ನು (ಮೌರ್ಯ) ಬೆಂಗಳೂರು ಜಿಲ್ಲಾ ಗಾರ್ಮೆಂಟ್ಸ್ ಕೆಲಸ ಕಾರರ ಸಂಘ ತೀವ್ರವಾಗಿ ಖಂಡಿಸುತ್ತಾ ನಗರದಲ್ಲಿ ಸಾಮ್ರಾಟ್ ಅಶೋಕ್, ಅಶೋಕ್ ಸಾಮ್ರಾಟ್ ಮೌರ್ಯ ಎಕ್ಸ್ ಪೋರ್ಟ್ ಹೌಸ್ ಡೆವಲಪ್ ಗಾರ್ಮೆಂಟ್ಸ್ - ಈ ರೀತಿಯ ಹಲವಾರು ಕಂಪನಿಗಳಿದ್ದು ಈ ಕಂಪನಿಗಳನ್ನು ಇ.ಕೆ. ಕುಮಾರ್ ಎಂಬುವ ಮಾಲಿಕರು ನಡೆಸುತ್ತಿದ್ದಾರೆ. ಈ ಎಲ್ಲಾ ಕಂಪನಿಗಳಲ್ಲೂ ಸುಮಾರು 6-7 ಸಾವಿರ ಕಾರ್ಮಿಕರು ಕೆಲಸ ಮಾಡುತ್ತಿದ್ದು ಇದರಲ್ಲಿ ಶೇಕಡಾ 95 ರಷ್ಟು ಮಹಿಳಾ ಕಾರ್ಮಿಕರು ದುಡಿಯುತ್ತಿದ್ದಾರೆ. ಆದರೆ ಆಡಳಿತ ವರ್ಗ ಕಾನೂನು ರೀತಿಯ ಯಾವುದೇ ಸೌಲಭ್ಯವನ್ನು ಕೊಡುತ್ತಿಲ್ಲ. ಸರ್ಕಾರ ನಿಗಧಿ ಮಾಡಿದ ಕನಿಷ್ಠ ಕೂಲಿಯನ್ನು ಜಾರಿ ಮಾಡಿಲ್ಲ. ತಿಂಗಳಿಗೆ 350-700 ರೂ. ಸಂಬಳ ನೀಡುತ್ತಾರೆ. ಬಹಳ ವರ್ಷ ಕೆಲಸ ಮಾಡಿದವರಿಗೆ 1000 ರೂಪಾಯಿ ಸಿಗುತ್ತಿದೆ. ಕಾರ್ಖಾನೆಗಳ ಕಾನೂನು ರೀತಿಯ ಹಕ್ಕಿನ ರಜೆ ಮತ್ತಿತರ ಸೌಲಭ್ಯಗಳನ್ನು ನೀಡುತ್ತಲೇ ಇಲ್ಲ. ಈ ರೀತಿಯ ತೀವ್ರತರ ಶೋಷಣೆಗೆ ಕಾರ್ಮಿಕರು ಒಳಗಾಗಿದ್ದಾರೆ.

ಕಾರ್ಮಿಕರು ಕಾನೂನು ರೀತಿಯ ಸೌಲಭ್ಯಗಳನ್ನು ನೀಡಬೇಕೆಂದು ಕೇಳಿದ್ದಕ್ಕಾಗಿ ಮತ್ತು ಕಾರ್ಮಿಕರು ಸಂಘಟಿತರಾಗಿರುವುದನ್ನು ಸಹಿಸದ ಮಾಲಿಕರು ಜೂನ್ 6 ರಂದು ಅಕ್ರಮವಾಗಿ ಬೀಗಮುದ್ರೆಯನ್ನು ಮೌರ್ಯ ಎಕ್ಸ್ ಪೋರ್ಟ್ ಹೌಸ್‌ನಲ್ಲಿ ಘೋಷಿಸಿದ್ದಾರೆ.

ಕಾರ್ಮಿಕ ಆಯುಕ್ತರು ಮಧ್ಯ ಪ್ರವೇಶ ಮಾಡಿ ಲಾಕ್ ಔಟ್‌ನ್ನು ಕೂಡಲೇ ತೆರವು ಮಾಡಬೇಕೆಂದು ನಿರ್ದೇಶಿಸಿದ್ದರೂ ಸಹ ಆಡಳಿತ ವರ್ಗ ಬೀಗ ಮುದ್ರೆಯನ್ನು ಅಕ್ರಮವಾಗಿ ಮುಂದುವರಿಸುತ್ತಿದ್ದಾರೆ. ಸರ್ಕಾರ ಇವರ ಮೇಲೆ ತೀವ್ರವಾದ ಕ್ರಮವಹಿಸಬೇಕೆಂದು ಸಂಘಟನೆಯು ಸರ್ಕಾರವನ್ನು ಒತ್ತಾಯಿಸಿದೆ.

ಕನಿಷ್ಠ ಕೂಲಿಗೆ ಒತ್ತಾಯಿಸಿ: ಬೀಡಿ ಕಾರ್ಮಿಕರ ಸಮಾವೇಶ


ಮಂಗಳೂರು: ಜೂನ್ 13 ಮಂಗಳೂರಿನ ಪುರಭವನದಲ್ಲಿ ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಷನ್ (ಸಿಐಟಿಯು) ನೇತೃತ್ವದಲ್ಲಿ ಬೀಡಿ ಕಾರ್ಮಿಕರ ಸಮಾವೇಶ ನಡೆಯಿತು. ಜಿಲ್ಲೆಯ ಎಲ್ಲಾ ತಾಲೂಕುಗಳಿಂದ 1500 ಕ್ಕೂ ಹೆಚ್ಚು ಹೆಚ್ಚಿನ ಸಂಖ್ಯೆಯಲ್ಲಿ ಬೀಡಿ ಕಾರ್ಮಿಕರು ಹೆಚ್ಚಿನ ಭಾಗವಹಿಸಿದ್ದರು.

ಆರಂಭದಲ್ಲಿ ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಷನ್ ನ ಕಾರ್ಯದರ್ಶಿಯವರಾದ ಕಾಂ. ಜೆ. ಬಾಲಕೃಷ್ಣ ಶೆಟ್ಟಿಯವರು ಬೀಡಿ ಕಾರ್ಮಿಕರ ಹೋರಾಟದ ವರದಿಯನ್ನು ನೀಡಿ ಎಲ್ಲರನ್ನು ಸ್ವಾಗತಿಸಿದರು. ಸಿಐಟಿಯುವಿನ ಜಿಲ್ಲಾ ಕಾರ್ಯದರ್ಶಿ ಹಾಗೂ ಫೆಡರೇಷನ್ ಅಧ್ಯಕ್ಷರಾದ ಕೆ. ಮುಸಬ್ಬನವರು ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು.

ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿಯವರಾದ ಕಾಂ. ಕೆ. ಶಂಕರ್ ರವರು ಸಭೆಯನ್ನುದ್ದೇಶಿಸಿ ಮಾತನಾಡಿ, ಬೀಡಿ ಕಾರ್ಮಿಕರು ರಾಜ್ಯ ಮಟ್ಟದ ಹೋರಾಟವನ್ನು ಮಾಡಿ, ಸಂಘಟಿತ ಕಾರ್ಮಿಕರ ಬೆಂಬಲ ಪಡೆದು ಸಿಐಟಿಯು ನೇತೃತ್ವದಲ್ಲಿ ಕನಿಷ್ಠ ಕೂಲಿಯ ಕರಡು ಪ್ರಕಟಣೆ ಸರಕಾರದಿಂದ ಹೊರಡಿಸುವಂತೆ ಮಾಡಿದ್ದು ಮಹತ್ವದ ವಿಷಯ ಎಂದರು. ಸಮಾವೇಶಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಸಿಐಟಿಯು ವಿನ ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಹಾಗೂ ಬೀಡಿ ಫೆಡರೇಷನ್ ಅಧ್ಯಕ್ಷರಾದ ಕಾಂ. ವಿ.ಜೆ.ಕೆ. ನಾಯರ್ ರವರು ಸಮಾವೇಶವನ್ನುದ್ದೇಶಿಸಿ ಮಾತನಾಡಿ ಬೀಡಿ ಕಾರ್ಮಿಕರ ರಾಜ್ಯ ಮಟ್ಟದ ಹೋರಾಟವು ಅಸಂಘಟಿತ ವಲಯ ಇತರ ವಿಭಾಗದ ಕಾರ್ಮಿಕರನ್ನು ಎಚ್ಚರಿಸಿ, ಕನಿಷ್ಠಕೂಲಿಗಾಗಿ ಐಕ್ಯ ಚಳುವಳಿಯನ್ನು ತೀವ್ರ ಗೊಳಿಸಲು ಸಹಾಯಕವಾಗಿದೆ ಎಂದರು.ಸರಕಾರ ತಂದ ಕರಡು ಪ್ರಕಟಣೆಯಂತೆ ರೂ. 36.85ರಲ್ಲಿ ಒಂದು ಪೈಸೆ ಕಡಿಮೆ ಮಾಡಿದರೆ ಕಾರ್ಮಿಕರು ತೀವ್ರ ಹೋರಾಟ ಮಾಡಲಿದ್ದಾರೆ ಹಾಗೂ ಮಾಲಕರು ಕೈಗಾರಿಕೆಯನ್ನು ಇನ್ನೊಂದು ರಾಜ್ಯಕ್ಕೆ ಕೊಂಡು ಹೋಗುವುದನ್ನು ಕಾರ್ಮಿಕರು ಬಿಡುವುದಿಲ್ಲವೆಂದು ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಕಾಂ. ಮಾಧವ ಎಚ್ಚರಿಕೆ ನೀಡಿದರು.

ಜಿಲ್ಲೆಯ ರೈತ ಕಾರ್ಮಿಕ ಮುಂದಾಳು ಕಾಂ. ಕೆ.ಆರ್. ಶ್ರೀಯಾನ್ ಜಿಲ್ಲೆಯ ಬೀಡಿ ಕಾರ್ಮಿಕರ ಹೋರಾಟವು ರಾಜ್ಯ ವ್ಯಾಪಿ ಹೋರಾಟವಾಗಿ ಮಾರ್ಪಟ್ಟು ರಾಜ್ಯದ ಇತರ ಭಾಗಗಳಲ್ಲಿ ಸಂಘಟನೆ ಮತ್ತು ಹೋರಾಟ ಬೆಳೆದು ಬರಲು ಸಾಧ್ಯವಾಗಿದೆ ಎಂದು ಹೇಳಿದರು.ಕೊನೆಯಲ್ಲಿ ಕಾಂ. ಸುಕುಮಾರ್ ರವರು ಸಮಾವೇಶಕ್ಕೆ ಬಂದಂತಹ ಕಾರ್ಮಿಕರನ್ನು ಹಾಗೂ ಇತರರನ್ನು ಅಭಿನಂದಿಸಿದರು.

ರೈತ ಮುಖಂಡ ಕಾಂ. ಭುಜಂಗ ಕೋಟ್ಯಾನ್ ನಿಧನ



ಮಂಗಳೂರು: ಕರ್ನಾಟಕ ಪ್ರಾಂತ ರೈತ ಸಂಘದ ಮಂಗಳೂರು ತಾಲೂಕು ಘಟಕದ ಯುವ ಮುಂದಾಳು ಹಾಗೂ ಪಾವರೂ ಗ್ರಾಮ ಪಂಚಾಯತಿನ ಸದಸ್ಯರು ಆದ ಕಾಂ. ಭುಜಂಗ ಕೋಟ್ಯಾನ್ ಕಿಲ್ಲೂರು. ಇತ್ತೀಚೆಗೆ ದೋಣಿ ದುರಂತದಲ್ಲಿ ಮೃತಪಟ್ಟರು. ಇವರು ತಾಯಿ ಪತ್ನಿ ಮತ್ತು ಐವರು ಮಕ್ಕಳನ್ನು ಅಗಲಿದ್ದಾರೆ.

ಸಂತಾಪ: ಭುಜಂಗ ಕೋಟ್ಯಾನ್ ಅವರ ನಿಧನಕ್ಕೆ ಮಂಗಳೂರು ತಾಲೂಕು ರೈತ ಸಂಘ, ಉಳ್ಳಾಲು ಸಿಪಿಐ(ಎಂ) ವಲಯ ಸಮಿತಿ, ಡಿ.ವೈ.ಎಫ್.. ಹರೇಕಳ ಘಟಕ, ಪಾವೂರು ಗ್ರಾಮ ಪಂಚಾಯತಿ ಸಂತಾಪ ಸೂಚಿಸಿದೆ.

ಭೂಮಿ ಸಕ್ರಮಕ್ಕೆ ರೈತ ಸಂಘ ಒತ್ತಾಯ

ಮಂಗಳೂರು: ಅಕ್ರಮ ಭೂಮಿಯನ್ನು ಸಕ್ರಮಗೊಳಿಸಲು ಒತ್ತಾಯಿಸಿ ರೈತ ಸಂಘವು ಹಲವು ಬಾರಿ ಹೋರಾಟಗಳನ್ನು ನಡೆಸಿವೆ. ಇದೀಗ ಮತ್ತೊಮ್ಮೆ ಮೇ 31 ರಂದು ಕೆ.ಆರ್. ಶ್ರೀಯಾನ್ ಅವರ ಅಧ್ಯಕ್ಷತೆಯಲ್ಲಿ ನಡೆದ ದ.ಕ. ಜಿಲ್ಲಾ ರೈತ ಸಂಘದ ಸಮಿತಿ ಸಭೆಯು ಅಕ್ರಮ ಭೂಮಿಯ ಸಕ್ರಮಕ್ಕೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಸಮಿತಿ ಸಭೆಯನ್ನು ಸ್ವಾಗತಿಸಿದ ಮತ್ತು ಜಿಲ್ಲಾ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಅಬ್ರಹಾಂ ಕರ್ಕಡರು ರೈತರನ್ನು ಬಾಧಿಸುತ್ತಿರುವ ಸಮಸ್ಯೆಗಳ ವಿರುದ್ಧ ದೀರ್ಘವಾದ ಹೋರಾಟ ನಡೆಸಲು ಅಗತ್ಯತೆಯನ್ನು ಒತ್ತಿ ಹೇಳಿದರು.

ಈ ಜಿಲ್ಲೆಯಲ್ಲಿ ಸುಮಾರು 40 ಎಕ್ರೆಗಳು ಹಿಂದಿನಿಂದಲೂ ಸರಕಾರಿ ಜಮೀನಿನಲ್ಲಿ ಸಾವಿರಾರು ಬಡ ಕುಟುಂಬಗಳು ಮನೆ ಕಟ್ಟಿಕೊಂಡು ಕೃಷಿ ಮಾಡುತ್ತಾ ಬಂದಿರುತ್ತವೆ. ಹಿಂದಿನ ಕಾಂಗ್ರೆಸ ಸರ್ಕಾರ ಅಕ್ರಮ ಭೂಮಿಯನ್ನು ಸಕ್ರಮಗೊಳಿಸಲು ಹೊಸ ಕಾನೂನನ್ನು ತಂದು ಅವರ ಪ್ರಕಾರ 0-5 ಸೆಂಟ್ಸ್ ಭೂಮಿಯನ್ನು ಮಾತ್ರ ಸಕ್ರಮಗೊಳಿಸಲು ತನಿಖಾ ಸಮಿತಿ ರಚಿಸಿತು. ಇದರಿಂದ ಅನೇಕ ಬಡಜನರಿಗೆ ಅನ್ಯಾಯವಾಗಿದೆ. ಕಳೆದ 4-5 ವರ್ಷಗಳಿಂದ ಎಕರೆಯೊಂದಕ್ಕೆ ರೂ. 200 ರ ತನಕ ದಂಡನಾ ತೀರ್ವೆಯನ್ನು ಸರಕಾರ ವಸೂಲು ಮಾಡುತ್ತಿದ್ದರೂ ಸಹ ಜನರ ಬೇಡಿಕೆಯನ್ನು ಈಡೇರಿಸಲು ಕ್ರಮ ಕೈಗೊಂಡಿಲ್ಲ.

ಈ ಹಿನ್ನಲೆಯಲ್ಲಿ ಕರ್ನಾಟಕ ಸರ್ಕಾರ ಅಕ್ರಮ ಭೂಮಿಯನ್ನು ಹೊಂದಿರುವ ಬಡ ಕುಟುಂಬದವರಿಗೆ ರಕ್ಷಣೆ ನೀಡಲು ಕಾಯಿದೆಗೆ ತಿದ್ದುಪಡಿ ತಂದು ಅಕ್ರಮ ಭೂಮಿಯನ್ನು ಸಕ್ರಮಗೊಳಿಸಲು ಕ್ರಮಕ್ಕೆ ಗೊಳ್ಳಬೇಕೆಂದು ದ.ಕ. ಜಿಲ್ಲಾ ರೈತ ಸಂಘದ ಸಭೆಯು ಒತ್ತಾಯಿಸಿದೆ.

ಕಾರ್ಮಿಕರಿಗೆ ಕೆಲಸ ನಿರಾಕರಣೆ: ಧರಣಿ ಸತ್ಯಾಗ್ರಹ

ಸುಮಾರು 6-7 ವರ್ಷದಿಂದ ಕೆನರಾ ವರ್ಕಷಾಪ್‌ನ ಮರೋಳಿಯಲ್ಲಿ ಕೆಲಸ ಮಾಡಿಕೊಂಡು ಬಂದಿದ್ದ ಕ್ಯಾಂಟೀನ್ ಕಾರ್ಮಿಕರನ್ನು ಮೇ 31 ರಿಂದ ಯಾವೊಂದು ಸೂಚನೆ ಕೊಡದೆ ಕಾನೂನುಬಾಹಿರವಾಗಿ ಕೆಲಸದಿಂದ ಹೊರದಬ್ಬಿರುವ ಕ್ರಮವನ್ನು ಪ್ರತಿಭಟಿಸಿ ಕ್ಯಾಂಟೀನ್ ಕಾರ್ಮಿಕರು ಮೋಟಾರ್ ಟ್ರಾನ್ಸ್ ಪೋರ್ಟ್ ಎಂಡ್ ಇಂಜಿನಿಯರಿಂಗ್ ವರ್ಕರ್ಸ್(ಸಿಐಟಿಯು)ನ ನೇತೃತ್ವದಲ್ಲಿ ಕೆನರಾ ವರ್ಕ ಶಾಪ್‌ನ ಮುಂದೆ ಜೂನ್ 1 ರಿಂದ ಧರಣಿ ಸತ್ಯಾಗ್ರಹ ನಡೆಸುತ್ತಿದ್ದಾರೆ. ಕಂಟ್ರಾಕ್ಟ್ ಬದಲಾವಣೆಯ ನೆಪ ಮಾಡಿ ಕೆಲವು ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿದ್ದ ಕಾರ್ಮಿಕರನ್ನು ಅನ್ಯಾಯವಾಗಿ ಹೊರದಬ್ಬಿರುವುದರಿಂದ ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ಇದನ್ನು ಪ್ರತಿಭಟಿಸಿ ಸತ್ಯಾಗ್ರಹ ಮಾಡದೆ ಅನ್ಯದಾರಿ ಇಲ್ಲವಾಗಿದೆ. ಕ್ಯಾಂಟೀನ್ ಕಾರ್ಮಿಕರಿಗೆ ಶೀಘ್ರದಲ್ಲಿಯೇ ಕೆಲಸ ಕೊಡಬೇಕೆಂದು ಯೂನಿಯನ್ ಒತ್ತಾಯಿಸುತ್ತಾ ಇಲ್ಲದಿದ್ದರೆ ಉಗ್ರ ಪ್ರತಿಭಟನೆಯನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದೆ.

ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶಗಳು ಏನನ್ನು ಹೇಳುತ್ತಿವೆ?

- 1995ರಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕಟ್ಟಿದ ಬಾಲಕರ ಸಂಖ್ಯೆ 2.66.383 ಬಾಲಕಿಯರ ಸಂಖ್ಯೆ 174205.ಅಂದರೆ 60.64ಶೇ. ಬಾಲಕರು, ಬಾಲಕಿಯರ ಪ್ರಮಾಣ ಕೇವಲ 39.53ಶೇ.
- ಇವರಲ್ಲಿ ತೇರ್ಗಡೆಯಾದ ಬಾಲಕರು 113124, ಬಾಲಕಿಯರು 85076 ಅಂದರೆ ತೇರ್ಗಡೆಯಾದವರಲ್ಲಿ 57.08 ಶೇ. ಬಾಲಕರು, 41.92 ಶೇ. ಬಾಲಕಿಯರು.
- ಪರೀಕ್ಷೆಗೆ ಕಟ್ಟಿದ ಬಾಲಕರಲ್ಲಿ 42.46ಶೇ. ತೇರ್ಗಡೆಯಾದರೆ, ಪರೀಕ್ಷೆ ಕಟ್ಟಿದ ಬಾಲಕಿಯರಲ್ಲಿ 48.83 ಶೇ. ಪಾಸಾಗಿದ್ದಾರೆ.
- ಒಟ್ಟು ತೇರ್ಗಡೆಯಾದವರ ಶೇ. 44.98 ಹಿಂದಿನ ವರ್ಷ ಅದು 52.08 ಇತ್ತು.
- ಮೊದಲ 20 ರ್‍ಯಾಂಕ್ ಪಡೆದ 92 ವಿದ್ಯಾರ್ಥಿಗಳಲ್ಲಿ 87ಮಂದಿ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಓದಿದವರು.
- ಈ 92ರಲ್ಲಿ 88 ವಿದ್ಯಾರ್ಥಿಗಳು ಸಂಸ್ಕೃತವನ್ನು ಮೊದಲ ಭಾಷೆಯಾಗಿ ತೆಗೆದುಕೊಂಡವರು! ಕನ್ನಡ ಮೊದಲ ಭಾಷೆಯಾಗಿ ತೆಗೆದುಕೊಂಡವರು ಕೇವಲ 3 ವಿದ್ಯಾರ್ಥಿಗಳು!

ಇವೆಲ್ಲಾ, ನಮ್ಮ ಬಾಲಕ-ಬಾಲಕಿಯರ, ನಮ್ಮ ಭಾಷೆಯ ಸಾಮರ್ಥ್ಯ-ಅಸಾಮರ್ಥ್ಯದ ಬಿಂಬವೇ ಅಥವಾ ನಮ್ಮ ಸಮಾಜದ ವಿಪರ್ಯಾಸಗಳ, ಅಸಮಾನತೆಗಳ.........?

ಜನರ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಬೇಕು

ಬಳ್ಳಾರಿ ಜಿಲ್ಲಾ ಪತ್ರ

ಭಾರತದ ರಾಜಕೀಯದಲ್ಲಿ ಕಾಂಗ್ರೆ ತನ್ನ ಜನವಿರೋಧಿ ಹೊಸ ಆರ್ಥಿಕ ನೀತಿ, ಮತೀಯ ಮೂಲಭೂತವಾದಿ ಶಕ್ತಿಗಳ ಬಗ್ಗೆ ಸೌಮ್ಯ ಧೋರಣೆ ಹಾಗೂ ತೀವ್ರ ಭ್ರಷ್ಟಾಚಾರಗಳಿಂದಾಗಿ ವರ್ಚಸ್ಸನ್ನು ಹಾಗೂ ರಾಜಕೀಯ ಅಧಿಕಾರವನ್ನು ಕಳೆದುಕೊಳ್ಳುತ್ತಿದೆ. ಅದರ ಭಾಗವಾಗಿ ಕರ್ನಾಟಕದಲ್ಲೂ ಕಾಂಗ್ರೆ ಅಧಿಕಾರ ಕಳೆದು ಕೊಂಡು, ವಿರೋಧ ಪಕ್ಷವಾಗಿದ್ದಾಗ ಕ್ರಿಯಾಶೀಲವಾಗದೇ ಇದ್ದರೂ ಜನತಾದಳ ಅಧಿಕಾರಕ್ಕೆ ಬಂದಿದೆ. ಇತ್ತೀಚೆಗೆ ನಡೆದ ಪಂಚಾಯತಿ ಚುನಾವಣೆಗಳಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಸಂಡೂರು ತಾಲೂಕು ಹೊರತು ಪಡಿಸಿ ಇನ್ನಿತರೇ 7 ತಾಲೂಕುಗಳಲ್ಲಿ ಜನತಾದಳ ಬಹುಮತ ಪಡೆದು ಅಧಿಕಾರಕ್ಕೆ ಬಂದಿದೆ. ಇದೇ ಹಿನ್ನೆಲೆಯಲ್ಲಿ ಬಳ್ಳಾರಿ ಮತ್ತು ಹರಪನ ಹಳ್ಳಿ ಶಾಸಕರು ಜನತಾದಳ ಸಹ ಸದಸ್ಯರಾಗಿದ್ದಾರೆ. ಕಾಂಗ್ರೆಸ ರಾಷ್ಟ್ರೀಯ ವಿಭಜನೆಯು ಜಿಲ್ಲೆಯಲ್ಲೇನು ಪ್ರಭಾವ ಕಂಡು ಬಂದಿಲ್ಲ.

ಜನತಾದಳದ ಬಗ್ಗೆ ತೀವ್ರವಾದ ಅಸಮಾಧಾನ ಜನರಲ್ಲಿ ಇನ್ನೂ ಕೂಡಾ ಕಂಡು ಬಂದಿಲ್ಲ. ಇನ್ನೂ ಕಾದು ನೋಡುವ ಭಾವನೆ ಜನರಲ್ಲಿದೆ. ಜಿಲ್ಲೆಯಲ್ಲಿ ಇಬ್ಬರು ಕ್ಯಾಬಿನೆಟ್ ದರ್ಜೆಯ ಮಂತ್ರಿಗಳಿದ್ದಾರೆ. ಪಶ್ಚಿಮ ತಾಲೂಕಿನವರಾಗಿದ್ದಾರೆ. ಹೊಸಪೇಟೆಯ ಮಾಜಿ ಶಾಸಕ ಶ್ರೀ. ಬಿ. ಕೊಂಡಯ್ಯನವರ ಬೆಂಬಲಿತ ಅಭ್ಯರ್ಥಿ ಶ್ರೀಮತಿ ಜಿ. ಈಶ್ವರಮ್ಮ ಜಿಲ್ಲಾ ಪಂಚಾಯತಿ ಅಧ್ಯಕ್ಷ ಸ್ಥಾನ ಪಡೆದಿದ್ದಾರೆ. ಹಾಗೂ ಉಪಾಧ್ಯಕ್ಷ ಸ್ಥಾನವನ್ನು ಹರಪನ ಹಳ್ಳಿ ತಾಲೂಕಿನ ಅರಸಿಕೇರಿ ಎಸ್.ಟಿ. ಕ್ಷೇತ್ರದಿಂದ ಆಯ್ಕೆ ಆದ ದೇವೇಂದ್ರಪ್ಪ ಆಯ್ಕೆಯಾಗಿದ್ದಾರೆ.

ಜಿಲ್ಲೆಯ ಮಂತ್ರಿಗಳಲ್ಲಿ ಅಧಿಕಾರಿಗಳ ಮೇಲೆ ಹಿಡಿತ ಸಾಧಿಸಲು ಪ್ರಯತ್ನ, ಅಂತರಿಕ ಪೈಪೋಟಿ ನಡೆದಿದೆ. ಎನ್.ಎಂ. ನಬಿ ಇವರ ಗತ್ತುಗಾರಿಕೆ ಎದ್ದು ಕಾಣುವಂತೆಯೂ ಆಗುತ್ತಿದೆ. ಶ್ರೀ ಎಂ.ಪಿ.ಪ್ರಕಾಶ್ ಇವರು ಇತ್ತೀಚೆಗೆ ಜಿಂದಾಲ್ ವಿಜಯನಗರ ಕಾರ್ಖಾನೆ ಬಗ್ಗೆ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆ ಕರೆದಿದ್ದು ಆ ಸಭೆಯಲ್ಲಿ ತನಗೆ ಬೇಕಾದವರ ನೇಮಕಾತಿಗಳ ಬಗ್ಗೆ ಮಾತ್ರ ಜಿಂದಾಲ್ ಆಡಳಿತ ವರ್ಗದ ಶ್ರೀ ಮೆಹತಾ ಇವರಿಗೆ ಅರ್ಜಿಗಳ ಬಂಡಲ್ ತಲುಪಿಸಿ ತಪ್ಪದೇ ನೇಮಕಾತಿ ಮಾಡುವಂತೆ ಆದೇಶ ಮಾಡುವುದೊಂದೇ ಸಭೆಯ ಕಲಾಪವೆಂದು ಮಾಡಿ ಮುಗಿಸಿದ್ದಾರೆ. ಜಿಂದಾಲ್ ವಿಷಯದಲ್ಲಿ ಎಂ.ಪ್ಯೆ. ಘೋರ್ಪಡೆಯವರು ತೀವ್ರ ಆಸಕ್ತಿ ವಹಿಸುತ್ತಿದ್ದಾರೆ. ವಿಜಯನಗರ ಉಕ್ಕಿನ ಕಾರ್ಖಾನೆಗಳ ಪ್ರಾರಂಭಕ್ಕಾಗಿ ಹಲವು ಹೋರಾಟಗಳನ್ನು ನಡೆಸಿದ್ದು ಈಗ ಗಂಭೀರ ಮಧ್ಯಪ್ರವೇಶ ಮಾಡುವುದು ಭೂಮಿ ಕಳೆದು ಕೊಂಡವರಿಗೆ ಉದ್ಯೋಗ ಮತ್ತಿತರ ಜನರ ಬೇಡಿಕೆಗಳಿಗಾಗಿ ಹೋರಾಟ ನಡೆಸುವ ತುರ್ತು ಅಗತ್ಯವಾಗಿದೆ. ರೈತರ ಸಹಕಾರಿ ಸಾಲದ ಬಡ್ಡಿ ಮನ್ನಾ ಹಾಗೂ ಹಸಿರು ಕಾರ್ಡುದಾರರಿಗೆ ರೂ. 3.20 ಕ್ಕೆ ಅಕ್ಕಿ ಜನಪ್ರಿಯ ಗಳಿಸಿವೆ. ಇನ್ನೂ ಹಲವಾರು ಅರ್ಹ ಜನರಿಗೆ ಹಸಿರು ಕಾರ್ಡು ದೊರೆತಿರುವುದಿಲ್ಲ.

ಈ ಬಗ್ಗೆ ಮಧ್ಯ ಪ್ರವೇಶ ಮತ್ತು ಹೋರಾಟ ಅವಶ್ಯಕವಾಗಿದೆ. ಜನರ ಸಮಸ್ಯೆಗಳಿಗೆ ಕೂಡಲೇ ಸ್ಪಂದಿಸಿದಲ್ಲಿ ಜನ ಸಹಕರಿಸುತ್ತಾರೆಂಬುದಕ್ಕೆ ಹಗರಿ ಬೊಮ್ಮನಹಳ್ಳಿಯಲ್ಲಿ ಡಿವೈಎಫ್ಐ, ಜನವಾದಿ ಮಹಿಳಾ ಸಂಘಟನೆಗಳಿಂದ ನೀರಿನ ಸಮಸ್ಯೆ ಬಗ್ಗೆ ಮಂತ್ರಿಗಳಿಬ್ಬರು ಭಾಗವಹಿಸಿದ ಸಭೆಯಲ್ಲಿ ಗಮನ ಸೆಳೆಯುವಂತೆ ಮಾಡಿರುವುದು ಉತ್ತಮ ಉದಾಹರಣೆ: ಜನತಾದಳ ಸರ್ಕಾರ ಜನರ ಮೂಲಭೂತ ಸಮಸ್ಯೆಗಳಿಗೆ ಗಮನ ನೀಡುತ್ತಿಲ್ಲ, ವಿದ್ಯುತ್ ಕಡಿತ ಪ್ರಶ್ನೆ ಗಂಭೀರವಾಗುತ್ತಿದೆ. ಇನ್ನೂ ಹಲವು ಅಂಶಗಳಿಗೆ ಸಂಬಂಧಿಸಿ ಕೇಂದ್ರದ ಹೊಸ ಆರ್ಥಿಕ ನೀತಿ ಅನುಕರಿಸುವಂತೆ ಜನತಾದಳ ಮುಂದುವರೆದಿದೆ. ಬಳ್ಳಾರಿ ನಗರದಲ್ಲಿ ಸಾರಾಯಿ ಯುದ್ಧ ನಡೆದಿದೆ. ಮುಂಡ್ಲೂರು ನವರು ಅನಧಿಕೃತ ಸಾರಾಯಿ ಮಾರಾಟ ಬಹಿರಂಗವಾಗಿಯೇ ನಡೆಸಿದ್ದಾರೆ. ಕೆ.ಸಿ.ಪಿಯ ಬಂಗಾರಪ್ಪನವರು ಬಳ್ಳಾರಿಯಲ್ಲಿ ಪಕ್ಷದ ಪುನಃಶ್ಚೇತನಗೊಳಿಸುವ ಸಭೆ ನಡೆಸಿದ್ದಾರೆ.

ಹೊಸಪೇಟೆಯಲ್ಲಿ ಬಿಜೆಪಿಯ ಶಾಸಕ ಶಂಕರಗೌಡ ಮತ್ತು ಅವರ ಕೈಗೊಂಬೆಯಂತಿರಲು ಒತ್ತಾಯ ಮತ್ತು ಕಿರುಕುಳ ಹೆಚ್ಚಾಗಿದೆ. ಇತ್ತೀಚೆಗೆ ಹಂಪಿ ವಿಶ್ವ ವಿದ್ಯಾಲಯದ ಆಡಳಿತ ವರ್ಗದ ಮೇಲೆ ಗುಂಪು ದಾಳಿ ಮಾಡಲು ಎಂ.ಎಲ್.ಎ. ಮಗ ಪ್ರಯತ್ನಿಸಿ ಪೋಲೀಸ್ ಮೇಲಾಧಿಕಾರಿಗಳಿಂದ ಛೀಮಾರಿಗೆ ಗುರಿಯಾಗಿದ್ದಾರೆ. ಕೊಳಾಯಿ ಉದ್ಘಾಟನೆಯನ್ನು ಎಂ.ಎಲ್.ಎ.ರವರು ಇಲ್ಲದೇ ಮಾಡಬಾರದೆಂದು ನಿಲ್ಲಿಸುವುದು, ಇಂಜಿನೀಯರಿಂಗ್ ಕೆಲಸ ರಸ್ತೆ, ದುರಸ್ತಿಗಳಲ್ಲಿ ಕೈವಾಡ ಜನರು ಬೇಸತ್ತು ಆಗಿದೆ. ಹೊಸಪೇಟೆಯಲ್ಲಿ ಇತ್ತೀಚೆಗೆ ಗುಡಿಸಲುಗಳಿಗೆ ಬೆಂಕಿ ಹತ್ತಿದಾಗ ಮಂತ್ರಿಗಳು ಬಂದು ಹೋದ ಮೇಲೆ ಅಲ್ಲಿಗೆ ಹೋಗಿದ್ದರಲ್ಲದೇ ಗುಡಿಸಲು ಸುಟ್ಟ ಜಾಗದಿಂದ ಗುಡಿಸಲುವಾಸಿಗಳನ್ನು ಎತ್ತಂಗಡಿ ಮಾಡಿ ಸ್ವಾರ್ಥಪರ ಶಕ್ತಿಗಳಿಗೆ ಭೂಮಿ ಪರಾಧೀನ ಮಾಡುವ ತಂತ್ರ ನಡೆಸಿ ಜನರಲ್ಲಿ ಜಗಳವಾಗುವಂತೆ ಮಾಡಿದ್ದೂ ಬಯಲಾಗಿದೆ. ಸರಕಾರಿ ನೌಕರರ ವರ್ಗಾವಣೆಗಳ ವಿಷಯದಲ್ಲಿ ಭ್ರಷ್ಟಾಚಾರಕ್ಕೆ ಬಿಜೆಪಿ ಶಾಸಕರೂ ಹೊರತಾಗಿಲ್ಲ. ಇತ್ತೀಚೆಗೆ ವಿಭಾಗ ಮಟ್ಟದ ಆರ್.ಎಸ್.ಎಸ್. ಶಿಬಿರ ನಡೆಸಲಾಗಿದೆ.

ಬಳ್ಳಾರಿ ಮತ್ತು ಹೊಸಪೇಟೆ ನಡುವೆ ಕೈಗಾರಿಕಾ ಕೇಂದ್ರವಾಗಿ ಬೆಳೆಯುತ್ತಿದೆ. ಜಿಂದಾಲ್ ವಿಜಯನಗರ ಸ್ಟೀಲ್ಸ್ ಅಲ್ಲದೇ ಪಾಪಿನಾಯಕನ ಹಳ್ಳಿ ಹತ್ತಿರ ಕಲ್ಯಾಣಿ ಸ್ಟೀಲ್ಸ್, ಗಿಣಿಗೇರ ಹತ್ತಿರ ಸಿಮೆಂಟ್ ಕಾರ್ಖಾನೆ, ಹಲವು ಕೈಗಾರಿಕೆಗಳು ಪ್ರಾರಂಭವಾಗುತ್ತಿವೆ. ಮುಂದಿನ ದಿನಗಳಲ್ಲಿ ಪ್ರಮುಖ ಕೈಗಾರಿಕಾ ಕೇಂದ್ರವಾಗಲಿದೆ.

ಪ್ರಚಾರಾಂದೋಲನ

ಈ ಎಲ್ಲಾ ಹಿನ್ನೆಲೆಯಲ್ಲಿ ಹೊಸದಾಗಿ ಆಯ್ಕೆಯಾದ ಜಿಲ್ಲಾ ಮತ್ತು ತಾಲೂಕು ಪಂಚಾಯತ್ ಅಧ್ಯಕ್ಷರು ಉಪಾಧ್ಯಕ್ಷರನ್ನು ಕಂಡು ಜಿಲ್ಲೆಯ ಮತ್ತು ಆಯಾ ತಾಲೂಕಿನ ಸಮಸ್ಯೆಗಳ ಬೇಡಿಕೆಗಳ ಪಟ್ಟಿ ಮಾಡಿ ನಮ್ಮ ಪಕ್ಷದಿಂದ ಮನವಿ ಸಲ್ಲಿಸುವ ಮೂಲಕ ಗಮನ ಸೆಳೆಯಬೇಕು.

ಜುಲೈ ತಿಂಗಳಲ್ಲಿ ನಡೆಯುವ ಜಿಲ್ಲಾ ಪಂಚಾಯತಿ ಸಭೆಯ ಸಮಯಕ್ಕೆ ವಿದ್ಯಾರ್ಥಿ ಯುವ ಜನರಿಂದ ಬೃಹತ್ ಪ್ರದರ್ಶನ ಸಂಘಟಿಸುವುದು ಅಗತ್ಯವಾಗಿದೆ.

ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿ ರಾಜಕೀಯ ಪ್ರಚಾರಾಂದೋಲನ ನಡೆಸಲು ಮೇ 27 ರಂದು ಸಭೆ ಸೇರಿದ ಸಿಪಿಐ(ಎಂ) ಬಳ್ಳಾರಿ ಜಿಲ್ಲಾ ಸಮಿತಿ ನಿರ್ಣಯಿಸಿದೆ.

ವಿಶೇಷ ಲೇಖನಗಳು

ಸರಕಾರದ ಧೋರಣೆಗಳ ಬಗ್ಗೆ ಚರ್ಚೆ ನಡೆಯುವ ದೃಷ್ಟಿಯಿಂದ ಪ್ರಮುಖ ಅಧಿವೇಶನವೆನಿಸಿಕೊಳ್ಳುವ ಬಜೆಟ್ ಅಧಿವೇಶನ ಈ ಬಾರಿ ಆಳುವ ಪಕ್ಷ ಎಷ್ಟೊಂದು ದಿವಾಳಿಯೆದ್ದಿದೆ ಎಂದು ಬಯಲಿಗೆಳೆದ ಅಧಿವೇಶನ ಎನ್ನುತ್ತಾರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಹರ್ಕಿಶನ್ ಸಿಂಗ್ ಸುರ್ಜಿತ್

ದಿಕ್ಕುಗಾಣದ ಸರಕಾರ ಇದು ಎಂದು ತೋರಿಸಿಕೊಟ್ಟ ಸಂಸತ್ ಅಧಿವೇಶನ

-ಸುರ್ಜಿತ್

ಈ ಅಧಿವೇಶನದಲ್ಲಿ 1995-96ರ ಬಜೆಟ್ ಸಹಜವಾಗಿಯೇ ಕೇಂದ್ರ ವಿಷಯವಾಗಿತ್ತು. ಐ.ಎಂ.ಎಫ್.-ವಿಶ್ವ ಬ್ಯಾಂಕ್ ಹೇರಿದ ಸರಕಾರದ ನೀತಿಗಳ ಬಗ್ಗೆ ಎಲ್ಲಾ ಪಕ್ಷಗಳು ಒಂದಿಲ್ಲೊಂದು ನಿಲುವು ತಳೆದವು. ಇದೆಲ್ಲಾ ವಾಸ್ತವವಾಗಿ ತನ್ನದೇ ನೀತಿಗಳು, ಕಾಂಗ್ರೆಸ್ ಅದನ್ನು ಕಿತ್ತುಕೊಂಡಿವೆ ಎಂದು ಸಾರುತ್ತಿದ್ದ ಬಿಜೆಪಿ ಕೂಡಾ ಜನಗಳಲ್ಲಿ ಹೆಚ್ಚುತ್ತಿರುವ ಅಸಂತೃಪ್ತಿಯನ್ನು ಕಂಡು ಆಳುವ ಪಕ್ಷದ ನಿಲುವುಗಳಿಂದ ತನ್ನನ್ನು ಪ್ರತ್ಯೇಕಿಸಿಕೊಳ್ಳಲು ಪ್ರಯತ್ನಿಸಿತು.

ಆಳುವ ಪಕ್ಷದ ಸದಸ್ಯ ಪಿ.ಆರ್. ಕುಮಾರಮಂಗಳಂ ಮಂಡಿಸಿದ ಕಡಿತ ನಿಲುವಳಿ ಸೂಚನೆಗಳು ಸಂಸತ್ತಿನ ಒಳಗೆ ಹಾಗೂ ಹೊರಗೆ ಚರ್ಚೆಯ ವಿಷಯವಾಗಿ ಬಿಟ್ಟವು. ಅದು ಆಳುವ ಪಕ್ಷದಲ್ಲಿನ ಬಿಕ್ಕಟ್ಟನ್ನೂ ತೀವ್ರಗೊಳಿಸಿತು. ಸಿಪಿಐ(ಎಂ) ಮತ್ತು ಎಡಪಕ್ಷಗಳು ಕಳೆದ ಕೆಲವು ವರ್ಷಗಳಿಂದ ಎತ್ತುತ್ತಾ ಬಂದಿರುವ ಪ್ರಶ್ನೆಗಳೇ ಈಗ ಕಾಂಗ್ರೆ ಸದಸ್ಯರ ಅಸಂತೃಪ್ತಿಗೆ, ಆ ಮೂಲಕ ಕಾಂಗ್ರೆಸ್(ಐ)ನ ಆಂತರಿಕ ಬಿಕ್ಕಟ್ಟಿಗೆ ಕಾರಣವಾಗಿದೆ.

ಎಲ್ಲಾ ವಿರೋಧ ಪಕ್ಷಗಳು ಕುಮಾರ ಮಂಗಳಂರವರ ಕಡಿತ ನಿಲುವಳಿ ಸೂಚನೆಗಳಿಗೆ ಬೆಂಬಲ ಘೋಷಿಸಿದ್ದರಿಂದ ಕಾಂಗ್ರೆಸ್(ಐ)ನೊಳಗಿನ ಬಿಕ್ಕಟ್ಟು ಇನ್ನಷ್ಟು ತೀವ್ರಗೊಂಡಿತು. ಆದರೆ ಈ ಸವಾಲಿಗೆ ಎದೆಗೊಟ್ಟು ನಿಲ್ಲುವ ಬದಲು ಪಿ.ವಿ. ನರಸಿಂಹರಾವ್ ಸರಕಾರ ಭಯಭೀತವಾಗಿ ಹೊಲಸು, ಪ್ರಜಾಪ್ರಭುತ್ವ-ವಿರೋಧಿ ಕಸರತ್ತಿಗಿಳಿಯಿತು. ಆರು ಇಲಾಖೆಗಳು ಮತ್ತು ಸಚಿವಾಲಯಗಳಿಗೆ ಸಂಬಂಧಪಟ್ಟ ಈ ಒಂಭತ್ತು ಕಡಿತ ನಿಲುವಳಿಗಳನ್ನು ಮತಕ್ಕೆ ಹಾಕದಂತೆ ನೋಡಿಕೊಂಡಿತು. ಲೋಕಸಭಾಧ್ಯಕ್ಷರು ಸಮಯದ ಅಭಾವವನ್ನು ಮುಂದೆ ಮಾಡಿ ಈ ನಿಲುವಳಿಗಳ ಚರ್ಚೆಗೆ ಅಧಿವೇಶನದ ಅವಧಿಯನ್ನು ಒಂದು ದಿನ ವಿಸ್ತರಿಸಬೇಕೆಂಬ ಪ್ರತಿಪಕ್ಷಗಳ ಒತ್ತಾಯವನ್ನು ಒಪ್ಪದೆ ಸರಕಾರದ ಜೀವವುಳಿಸಿದರು.

ಸರಕಾರದ ಮರಣಭಯ

ಆದರೆ ಈ ಎಲ್ಲಾ ಕಸರತ್ತು ಸರಕಾರಕ್ಕೆ ಸಂಸತ್ತನ್ನು ಅಂದರೆ ಜನತೆಯ ಪ್ರತಿನಿಧಿಗಳನ್ನು ಎದುರಿಸಲು ಎಂತಹ ಮರಣಭಯವಿದೆ ಎಂಬುದನ್ನು ಮತ್ತೊಮ್ಮೆ ಎತ್ತಿ ತೋರಿತು. ಆರ್ಥಿಕ ಆರೋಗ್ಯ ಚೆನ್ನಾಗಿದೆಯೆಂಬ ಸರಕಾರದ ಹೇಳಿಕೆಗಳೆಲ್ಲಾ ಎಷ್ಟು ಟೊಳ್ಳು ಎಂದು ಮತ್ತೊಮ್ಮೆ ಸಾಬೀತಾಯಿತು. ಇಲ್ಲವಾದರೆ ಪ್ರತಿಪಕ್ಷಗಳನ್ನು ಎದುರಿಸಲು ಅದಕ್ಕೇಕೆ ಭಯ? ರಾಷ್ಟ್ರಪತಿ ಭಾಷಣದ ಮೇಲಿನ ಚರ್ಚೆಯಲ್ಲೂ ಸರ್ಕಾರ ಇದೇ ರೀತಿ ವರ್ತಿಸಿತ್ತು.

ಸರಕಾರದ ಮೇಲೆ ಇಂತಹ ಭಾರೀ ಒತ್ತಡ ತರುವಲ್ಲಿ ಕಳೆದ ನಾಲ್ಕು ವರ್ಷಗಳಿಂದ ಹೊಸ ಆರ್ಥಿಕ ನೀತಿಗಳ ವಿರುದ್ಧ ನಿರಂತರ ಸಮರ ನಡೆಸಿದ ಎಡಪಕ್ಷಗಳ ಪಾಲು ದೊಡ್ಡದು ಎಂದು ಖಂಡಿತಾ ಹೇಳಿಕೊಳ್ಳಬಹುದು. ಇದರಿಂದ ಉಂಟಾದ ಹೊಸ ಸನ್ನಿವೇಶದಲ್ಲಿ ಬಿಜೆಪಿ ಕೂಡಾ ಹೊಸ ಆರ್ಥಿಕ ನೀತಿಗಳಿಗೆ ತನ್ನ ಬೆಂಬಲವನ್ನು ಇಳಿಸದಿದ್ದರೆ ತನಗೂ ಜನಗಳು ಕಾಂಗ್ರೆಗೆ ವಿಧಾನಸಭಾ ಚುನಾವಣೆಗಳಲ್ಲಿ ಕಲಿಸಿದಂತಹ ಪಾಠ ಕಲಿಸಬಹುದು ಎಂದು ಯೋಚಿಸುವಂತಾಯಿತು.

ಇವೆಲ್ಲಾ ಸಹಜವಾಗಿಯೇ ಪ್ರತಿಪಕ್ಷಗಳಿಗೆ ಸರಕಾರದ ಶರಣಾಗತಿಯ ಆರ್ಥಿಕ ನೀತಿಗಳ ಎಂದರೂ ಹಾಗೂ ಕೋಮುವಾದದೊಂದಿಗೆ ರಾಜಿಗಿಳಿಯುವ ನೀತಿಗಳ ವಿರುದ್ಧ ಧಾಳಿ ನಡೆಸಲು ಉತ್ತೇಜನ ನೀಡಿದವು.

ಈ ಅಧಿವೇಶನದಲ್ಲಿ ನಮ್ಮ ರಾಷ್ಟ್ರೀಯ ಜೀವನವನ್ನು ಕೊರೆಯುತ್ತಿರುವ ಭ್ರಷ್ಟಾಚಾರ ಒಂದು ಮುಖ್ಯ ಚರ್ಚೆಯ ವಿಷಯವಾಗಿತ್ತು. ಈ ಅಧಿವೇಶನದಲ್ಲಿ ಸಿಪಿಐ(ಎಂ) ಸಂಸತ್ ಸದಸ್ಯ ನಿರ್ಮಲ್ ಕಾಂತಿ ಚಟರ್ಜಿ ಬ್ಯಾಂಕ್ ಸಾಲದಲ್ಲಿ ವ್ಯಾಪಕ ಮೋಸ ನಡೆದುದನ್ನು ದಸ್ತಾವೇಜುಗಳ ಸಹಿತ ಸಂಸತ್ತಿನ ಮುಂದೆ ತಂದರು. ಒಂದು ರಿಝರ್ವ್ ಬ್ಯಾಂಕ್ ಪಟ್ಟಿ ಪ್ರಕಾರ 5700 ವ್ಯಕ್ತಿಗಳು ಹಾಗೂ ಕಂಪೆನಿಗಳು ಭಾರೀ ಸಾಲ ಪಡೆದು ಅದನ್ನು ಮರುಪಾವತಿ ಮಾಡದೆ ಮೋಸ ಮಾಡಿದ್ದಾರೆ. ಇದರಿಂದ ಬ್ಯಾಂಕುಗಳಿಗೆ ಕನಿಷ್ಠ 30,000ಕೋಟಿ ರೂ. ನಷ್ಟವಾಗಿದೆಯೆಂದು ತಿಳಿದು ಬಂದಿದೆ. ಖಾಸಗೀವಾಲಾಗಳನ್ನು ಹಾಡಿ ಹೊಗಳುವ ರಾವ್-ಸಿಂಗ್ ಆಳ್ವಿಕೆಯಲ್ಲಿ ಖಾಸಗಿ ಮಂದಿ ಜನಸಾಮಾನ್ಯರನ್ನು ಹಿಂಡಿ ದೇಶದ ಖಜಾನೆಯನ್ನು ಹೇಗೆ ಬರಿದು ಮಾಡುತ್ತಿದ್ದಾರೆ ಎಂಬುದಕ್ಕೆ ಇದು ಒಂದು ಉದಾಹರಣೆ. ಸಾರ್ವಜನಿಕ ಹಣದ ಲೂಟಿ ಈ ಆಡಳಿತದಲ್ಲಿ ಶಿಖರಕ್ಕೇರಿದೆ ಎಂದು ಬೇರೆ ಹೇಳ... ಗಿಲ್ಲ.

ಬಿಜೆಪಿ ಗೋಸುಂಬೆತನ

ಈ ಬಜೆಟ್ ಅಧಿವೇಶನದಲ್ಲಿ ಬಿಜೆಪಿಯ ಗೋ... ತನವೂ ಬಯಲಾಯಿತು... ರರ ಪರಿಹಾರಕ್ಕೆ ಸಂಬ... ಟ್ಟಂತೆ ಒಂದು ತಿದ್ದು... ಎಡಪಕ್ಷಗಳು ಬೆಂಬಲ... ದವು. ಆದರೆ ಸಾರ್ವ... ವಲಯದ ಶೇರುಗಳಿಗೆ... ಧಪಟ್ಟ ಎಡಪಕ್ಷಗಳ... ಪಡಿ ಚರ್ಚೆಗೆ ಬ... ಬಿಜೆಪಿ ಕಾಂಗ್ರೆಸ್(ಐ)ನ ಪಕ್ಷ ವಹಿಸಿತು!

ಚಳಿಗಾಲದ ಅಧಿವೇಶನದಲ್ಲಿ ಕಾಂಗ್ರೆಸ್(ಐ) ಸದ... ಶಿಸ್ತು ಕ್ರಮದ ಬೆದರಿಕೆಯೊಡ್ಡಿ ಲೋಕಸಭೆಯಲ್ಲಿ ಮಾಡಿಸಿಕೊಂಡ ಪೇಟೆಂಟ್ ತಿದ್ದುಪಡಿ ಮಸೂದೆಗೆ ... ಸಭೆ ಅನುಮೋದನೆ ನೀಡಿರಲಿಲ್ಲ. ಈ ಬಾರಿ ... ಅಧಿವೇಶನದಲ್ಲೂ ಸರಕಾರ ಭಾರೀ ಪ್ರಯತ್ನ ಮಾಡಿ... ವಿಫಲಗೊಂಡಿತು. ಈಗ ಆ ಮಸೂದೆ ತ್ರಿಶಂಕು ಸ್ಥಿ... ಲ್ಲಿದೆ. ಈ ಸಂದರ್ಭದಲ್ಲಿ ಸರಕಾರದ ಇನ್ನೊಂದು ... ಕೂಡಾ ಬಯಲಿಗೆ ಬಂತು. ಬೇರೆಲ್ಲಾ ದೇಶಗಳು ಪೇಟೆಂಟ್ ವ್ಯವಸ್ಥೆಯನ್ನು ಸೇರಿಕೊಂಡಿವೆ, ಭಾರತ ಇದರಲ್ಲಿ ಕೊ... ದೇಶ ಎಂದೆಲ್ಲಾ ಸರಕಾ ಹೇಳಿಕೊಳ್ಳುತ್ತಿತ್ತು. ಆದರೆ ... ವ್ಯಾಪಾರ ಸಂಘಟನೆಯ ಮಹಾ ನಿರ್ದೇಶಕನೇ ಸ್ವತಃ ... ಪೇಟೆಂಟ್ ವ್ಯವಸ್ಥೆಗೆ ಸೇರುವ ಮೊದಲ ದೇಶ ಎಂದ...

ನಾಚಿಕೆಗೇಡಿ ಪ್ರದರ್ಶನ

ಪೇಟೆಂಟ್ ಪ್ರಶ್ನೆಯ ಮೇಲೆ ಸಾಮ್ರಾಜ್ಯಶಾಹಿಗೆ ಸಂಪೂ... ಶರಣಾಗುವ ನೀತಿಗೆ ಸಂಸತ್ತಿನ ಅನುಮೋದನೆ ಪಡೆ... ವಿಫಲಗೊಂಡ ಸರಕಾರ ಅತ್ಯಂತ ನಾಚಿಕೆಗೇಡಿತನ... ನಮ್ಮ ಸಂಸತ್ತಿನ ಇತಿಹಾಸದಲ್ಲೇ ಕಾಣದ ಹೊಲಸು ... ಕೈಹಾಕಿತು. ಮೊದಲು ಈ ಮಸೂದೆಯನ್ನು ಸಂಬಂ... ಸ್ಥಾಯೀ ಸಮಿತಿಗೆ ಒಪ್ಪಿಸಲು ಒಪ್ಪಿತು. ನಂತರ ... ಚ್ಛೆಯಾಗಿ ನಾಲ್ಕು ಹೊಸ ಸದಸ್ಯರನ್ನು ಸಮಿತಿಗೆ ... ಕಾಂಗ್ರೆಸ್(ಐ)ಗೆ ಸಮಿತಿಯ ಬಹುಮತವಿರುವಂತೆ ... ಲಾಯಿತು. ರಾಜ್ಯಸಭೆಯ ಉಪಾಧ್ಯಕ್ಷರೂ ಕೂಡಾ ...

ಸಿಐಟಿಯುಗೆ 25 ವರ್ಷ:

ಲೇಖನ ಮಾಲೆ : 4

ಅಖಿಲ ಭಾರತ ಮಟ್ಟದಲಿ ಹಾಗೂ ರಾಜ್ಯದಲಿ ಸಿಐಟಿಯುನ ಬೆಳವಣಿಗೆಯ ಇತಿಹಾಸದ ಮೇಲೆ ಒಂದು ಇಣುಕುನೋಟವ... ಈ ಲೇಖನಮಾಲೆಯು ಹಿಂದಿನ ಮೂರು ಲೇಖನಗಳು ನೀಡಿವೆ. ಇತಿಹಾಸವನ್ನು ನೋಡುವುದು ಹಿಂದಿನ ಅನುಭವಗಳ... ಈಗಿನ ನಮ್ಮ ಶಕ್ತಿ ಹಾಗೂ ದೌರ್ಬಲ್ಯಗಳನ್ನು ವಿಶ್ಲೇಷಿಸಲಿಕ್ಕಾಗಿ, ಆ ಮೂಲಕ ನಮ್ಮ ಭವಿಷ್ಯದ ದಾರಿ ರೂಪಿಸಿಕೊಳ... ನೆರವಾಗುವುದಕ್ಕಾಗಿ ಎನ್ನುವ ಲೇಖಕರು ಸರಿಯಾದ ಮಾರ್ಗದ ಸರಿಯಾದ ಆಚರಣೆ, ಸರಿಯಾದ ನಿಲುವಿನ ಜೊತ... ಸರಿಯಾದ ಕಾರ್ಯವಿಧಾನವೂ ಏಕೆ ಅಗತ್ಯ ಎಂದು ಲೇಖನಮಾಲೆಯ ಈ ಕೊನೆಯ ಲೇಖನದಲ್ಲಿ ವಿವರಿಸಿದ್ದಾರೆ.

ಐಕ್ಯತೆ ಮತ್ತು ಹೋರಾಟದ ಸಿಐಟಿಯು ಮಾರ್ಗದಲ್ಲಿ ಸಾಗುವುದು ಹೇಗೆ?

-ವಿ.ಜೆ.ಕೆ. ನಾಯರ್

ಭವಿಷ್ಯದ ದಾರಿಯನ್ನು ರೂಪಿಸಲು ಈಗ, ಇಂದು ನಾವೇನು ಮಾಡಬೇಕು ಎಂಬುದನ್ನು ಪರಿಶೀಲಿಸುವಾಗ ಈಗಾಗಲೇ ಹಿಂದಿನ ಲೇಖನದ ಕೊನೆಯಲ್ಲಿ ಹೇಳಿದ ಅಂಶವನ್ನು ಮತ್ತೊಮ್ಮೆ ನೆನಪಿಸಿಕೊಳ್ಳೋಣ. ದುಡಿಯುವ ಜನರ ಹಿತಾಸಕ್ತಿಗಳಿಗಾಗಿ ದುಡಿಯುವ ಜನರು ಹೋರಾಟ ನಡೆಸಿದಾಗ ಮಾತ್ರವೇ ಅದು ಯಶಸ್ವಿಯಾಗಬಲ್ಲದು. ಕಾರ್ಮಿಕ ಆಂದೋಲನವನ್ನು ತಮ್ಮ ಹಿತಾಸಕ್ತಿಗಳಿಗೆ ಸೀಮಿತಗೊಳಿಸುವ ಆಳುವ ವರ್ಗಗಳ ಪ್ರಯತ್ನವನ್ನು ಮೀರಿ ನಿಲ್ಲಬೇಕಾದರೆ ಹೋರಾಟಗಳನ್ನು ದುಡಿಯುವ ಜನಗಳ ವಿಶಾಲ ವಿಭಾಗಗಳ ಹಿತಾಸಕ್ತಿಗಳೊಂದಿಗೆ ಬೆಸೆದು ಅವರನ್ನು ಅಣಿನೆರೆಸುವುದು ಅತ್ಯಗತ್ಯ. ಇದಿಲ್ಲದೆ ಮುಖಂಡರ ಯಾವ ಪ್ರಯತ್ನವೂ ಸಫಲವಾಗದು. 1960ರ ದಶಕದ ಉತ್ತರಾರ್ಧ ಹಾಗೂ 1970ರ ದಶಕದ ಆದಿ ಭಾಗದಲ್ಲಿ WBPTUC(ಅವಿಭಜಿತ ಎಐಟಿಯುಸಿಯ ಪಶ್ಚಿಮ ಬಂಗಾಳ ಘಟಕ)ಯ ಅನುಭವಗಳಿಂದ ಕಲಿತ ಪಾಠದಿಂದ ಸಿಐಟಿಯು ಸ್ಥಾಪನೆ ಸಾಧ್ಯವಾಯಿತು. ಅದೇ ರೀತಿ ತುರ್ತು ಪರಿಸ್ಥಿತಿಯ ನಂತರದ ಅವಧಿಯಲ್ಲಿ ನಮ್ಮ ಸ್ವಂತ ಅನುಭವದಿಂದ ಪಾಠ ಕಲಿತು ಸಿಐಟಿಯು ಈಗ ಒಂದು ಶಕ್ತಿಯಾಗಿ ಬೆಳೆಯಲು ಸಾಧ್ಯವಾಗಿದೆ.

ಸಿಐಟಿಯು ಹಿಡಿದ ದಾರಿಯ ಅಂದರೆ "ಐಕ್ಯತೆ ಮತ್ತು ಹೋರಾಟ"ದ ದಾರಿಯ ಆಧಾರವೇ ಈ ತೀರ್ಮಾನಗಳು. ಇವೆರಡರಲ್ಲಿ ಯಾವುದಾದರೂ ಒಂದು ಇರದಿದ್ದರೆ ಮತ್ತೊಂದನ್ನು ಸಾಧಿಸುವುದು ಅಸಾಧ್ಯ ಎಂಬುದನ್ನು ಈಗಾಗಲೇ ನೋಡಿದ್ದೇವೆ. ಇದರ ಒಟ್ಟು ಸಾರಾಂಶವೆಂದರೆ ಜನಗಳ ವಿಶಾಲ ವಿಭಾಗಗಳನ್ನು ತೊಡಗಿಸಿಕೊಂಡ, ಜನಗಳೇ ಸ್ವತಃ ಸಕ್ರಿಯರಾಗಿ ತಮ್ಮ ಅನುಭವದಿಂದ ಪಾಠ ಕಲಿಯುವ ಹೋರಾಟದ ದಾರಿ ಅದಾಗಿರಬೇಕು.

ಈಗಲೇ ಆಚರಣೆಗೆ ತರಬೇಕು

ಪ್ರಸ್ತುತ ಕಾರ್ಖಾನೆ ಮಟ್ಟದಲ್ಲಿ ಆಚರಣೆಯಲ್ಲಿರುವ ಆಂದೋಲನದ ಸ್ವರೂಪ ಕಾರ್ಖಾನೆಯ ಮಟ್ಟದ ಪ್ರಜ್ಞೆಯನ್ನಷ್ಟೇ ಬೆಳೆಸುತ್ತದೆ. ಅದು ಮೇಲಟ್ಟದ ಪ್ರಶ್ನೆಯತ್ತ ಸಾಗುವುದಿಲ್ಲ. ಆದ್ದರಿಂದ ಈಗ ನಮ್ಮ ಆಚರಣೆಯಲ್ಲಿ ಹಿಂದೆ ಬಿದ್ದಿರುವುದು ಕಂಡುಬರುತ್ತದೆ. ಇದನ್ನು ಸರಿಪಡಿಸಬೇಕಾದರೆ ಮುಖಂಡತ್ವ ಹೋರಾಟ ವಿಧಾನಗಳನ್ನು ವ್ಯಾಪಕಗೊಳಿಸಲು ಮುಂದಾಗಬೇಕು, ಈ ಉದ್ದೇಶಕ್ಕಾಗಿ ಐಕ್ಯತೆ ಸಾಧಿಸಲು ಹಾಗೂ ಎಲ್ಲಕ್ಕೂ ಮಿಗಿಲಾಗಿ ನಿರ್ಣಯ ತಗೊಳ್ಳುವಲ್ಲಿ ಮತ್ತು ಚಟುವಟಿಕೆಗಳಲ್ಲಿ ಪ್ರಜಾಪ್ರಭುತ್ವ ವಿಧಿ-ವಿಧಾನಗಳನ್ನು ಆಚರಣೆಯಲ್ಲಿ ತರಬೇಕು. ವರ್ಷಗಳಿಂದ ಅಖಿಲ ಭಾರತ ಮಟ್ಟದಲ್ಲಿ ವಿಕಾಸಗೊಂಡಿರುವ ಸಿಐಟಿಯು ಮಾರ್ಗವನ್ನು ಇಲ್ಲಿ ಈಗಲೇ ಆಚರಣೆಗೆ ತರಬೇಕು.

ನಾವಿಲ್ಲಿ ಎರಡು ಅಂಶಗಳನ್ನಷ್ಟೇ ಪರಿಶೀಲಿಸೋಣ. ಕಾರ್ಮಿಕ ಆಂದೋಲನದ ಐಕ್ಯತೆ ಮತ್ತು ಪ್ರಜಾಸತ್ತಾತ್ಮಕ ಕಾರ್ಯ ವಿಧಾನ. ಇದು ನಿಜವಾಗಿಯೂ ಸಾಧ್ಯವಾಗುವುದು ಶಾಮೀಲುವಾದಿ ಮಾರ್ಗವನ್ನು ಸೋಲಿಸಿದಾಗ ಮಾತ್ರವೇ. ನಾವೀಗ ಅಖಿಲ ಭಾರತ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲೂ ವಿಶಾಲ ಐಕ್ಯತೆ ಸಾಧಿಸುವ ಸನ್ನಿವೇಶದಲ್ಲಿದ್ದೇವೆ. ಹೊಸ ಆರ್ಥಿಕ ನೀತಿಗಳು ಮತ್ತು ಕೋಮುವಾದದ ವಿರುದ್ಧ ಹೋರಾಟಗಳು ಈಗಾಗಲೇ ಕಾರ್ಮಿಕ ಆಂದೋಲನ ಪ್ರತಿಯೊಂದು ವಿಭಾಗವನ್ನೂ ಹತ್ತಿರ ತಂದಿವೆ; ಇತರರು ಮಹಾ ಒಕ್ಕೂಟದ ನಮ್ಮ ವಿಚಾರದಲ್ಲಿ ಆಸಕ್ತಿ ಹೊಂದುವಂತೆ ಮಾಡಲು ಸಾಧ್ಯವಾಗಿದೆ. ಇತರರು ಈ ನಿಲುವನ್ನು ಒಪ್ಪಿಕೊಳ್ಳುವ ಹಂತಕ್ಕೆ ಬಂದಿರುವುದರೊಂದಿಗೇ ಅವರು ಕೆಳಗಿನ ಹಂತಗಳಲ್ಲಿ ಐಕ್ಯತೆಯ ಪ್ರಶ್ನೆಯನ್ನು ಎತ್ತಿದ್ದಾರೆ. ಅದು ಸರಿಯಾದ ಪ್ರಶ್ನೆ ಕೂಡಾ. ಅಂದರೆ ಕೈಗಾರಿಕಾ ಒಕ್ಕೂಟಗಳ ಮಟ್ಟದಲ್ಲಿ, ದೊಡ್ಡ ಕಾರ್ಖಾನೆಗಳ ಮಟ್ಟದಲ್ಲಿ ಕಾರ್ಮಿಕ ಸಂಘಗಳ ಚಟುವಟಿಕೆಗಳ ಯೋಜನೆಯ ಪ್ರಶ್ನೆ. ವಾಸ್ತವವಾಗಿ ಐಕ್ಯತೆಯ ನಮ್ಮ ವಿಚಾರದಲ್ಲೂ ಐಕ್ಯತೆಯೆಂದರೆ ಕೆಳಗಿನ ಮಟ್ಟದಿಂದ ಐಕ್ಯತೆ ಎಂದೇ ಅರ್ಥ. ಅಂದರೆ ಒಮ್ಮೆ ಒಂದು ಮಾರ್ಗವನ್ನು, ನಿಲುವನ್ನು ರೂಪಿಸಿದೆವೆಂದರೆ ನಂತರ ಎಲ್ಲಾ ಕಾರ್ಮಿಕ ಕೇಂದ್ರಗಳನ್ನು ಅನುಸರಿಸುವ ದುಡಿಯುವ ಜನಗಳ ಎಲ್ಲಾ ವಿಭಾಗಗಳಲ್ಲಿ ಒಟ್ಟು ಸೇರಿ ಐಕ್ಯತೆಯಿಂದ ಹೋರಾಟದಲ್ಲಿ ಸಕ್ರಿಯರಾಗುವಂತೆ ಕಾರ್ಯೋನ್ಮುಖರಾಗಬೇಕು ಎಂದು ಅರ್ಥ.

ಬೆಂಗಳೂರಿನ ಅನುಭವ

ಬೆಂಗಳೂರಿನ ಸಾರ್ವಜನಿಕ ವಲಯದ ಉದ್ದಿಮೆಗಳು ಇದಕ್ಕೊಂದು ಉದಾಹರಣೆ. 1970ರ ದಶಕದ ಉತ್ತರಾರ್ಧದಿಂದಲೇ ಬೆಂಗಳೂರು ಸಾರ್ವಜನಿಕ ವಲಯದಲ್ಲಿ ... ತೆಯ ಒಂದು ಸ್ವರೂಪವಿತ್ತು. 1980-81ರಲ್ಲಿ ... ಹೋರಾಟಕ್ಕೂ ನೇತೃತ್ವ ನೀಡಬೇಕಾಗಿ ಬಂದಿತ್ತು. ಆಗ ಸಾಧಿಸಿದ ಐಕ್ಯತೆಯ ಸ್ವರೂಪ ಹೇಗಿತ್ತೆಂದರೆ ಬೆಂಗಳೂರಿನ ಸಾರ್ವಜನಿಕ ವಲಯದ ಕಾರ್ಮಿಕರನ್ನು ಸಕ್ರಿಯ... ಸಲಾಗಲಿಲ್ಲ. ಸಿಐಟಿಯು ಈಗ ಜೆ.ಎ.ಎಫ್. ಪ್ರವೇ... ಆದರೆ ಇದೇ ಸರ್ವಸ್ವವೇನಲ್ಲ, ಇಷ್ಟೇ ಸಾಲದು. ಆರ್ಥಿಕ ನೀತಿಗಳ ದುಷ್ಪರಿಣಾಮಗಳನ್ನು ವಿರೋಧಿಸ... ಕೈಗಾರಿಕಾ ರೋಗಗ್ರಸ್ತತೆಯನ್ನು ಎದುರಿಸುವಲ್ಲಿ, ಕಾಂ... ಕ್ಯಾಷುವಲ್ ಕಾರ್ಮಿಕರ ಪ್ರಶ್ನೆಗಳನ್ನು ಎತ್ತಿಕೊಳ್ಳ...



ಸಿಐಟಿಯು ಸ್ಥಾಪಕ ಅಧ್ಯಕ್ಷ ಕಾಂ. ಬಿ.ಟಿ. ರಣದಿವೆ (ಬಲಗಡೆ) ಸ್ಥಾಪಕ ಪ್ರಧಾ...

ತಿಕೂಲ ಟಿಪ್ಪಣಿ ಮಾಡಬೇಕಾಗಿ ಬಂತು. ಇಂತಹ ಮ ಪ್ರಜಾಪ್ರಭುತ್ವ ವಿರೋಧಿ ವಿಧಾನದಲ್ಲಿ ಟಿಸಿನ ಸಮಿತಿಯಲ್ಲಿ ಕೆಲಸ ಮಾಡಲು ನಿರಾಕರಿಸು ದಲ್ಲದೆ ಪ್ರತಿಪಕ್ಷಗಳಿಗೆ ಬೇರೆ ದಾರಿಯಿಲ್ಲದಾ ತು.

ಈ ಇಡೀ ಘಟನೆ ಪುಕ್ಕಲೆಂದೆನಿಸಿಕೊಂಡಿರುವ ವ್ ಸರಕಾರ ದೇಶದ, ಜನತೆಯ ಹಿತಾಸಕ್ತಿಗಳನ್ನು ರಾಟ ಮಾಡಲು ಯಾವ ಮಟ್ಟಕ್ಕೂ ಇಳಿಯಬ ದು ಎಂಬುದನ್ನು ಸುಸ್ಪಷ್ಟಗೊಳಿಸಿತು.

ಕಾಶ್ಮೀರ ಪ್ರಶ್ನೆಯ ಬಗ್ಗೆ ಸರಕಾರದ ನಿಲುವು ಅಲ್ಲಿ ತ್ತೀಚೆಗೆ ನಡೆದ ಘಟನೆಗಳಿಂದ ಸಂಪೂರ್ಣ ತಪ್ಪು ದು ಸಿದ್ಧವಾದ ಮೇಲಷ್ಟೇ ಅಧಿವೇಶನದ ಅಂತ್ಯದ ಳಿಗೆ ಅಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಇನ್ನೂ ಆರು ಗಳು ವಿಸ್ತರಿಸಲು ಗೊತ್ತುವಳಿ ತಂದಿತು. ಈಗಲೂ ಡಿಫ ಮುಂದಿನ ಏಳು ತಿಂಗಳು ಈ ಸಮಸ್ಯೆಯ ಹಾರಕ್ಕೆ ಬಳಸಲು ಅದು ಪ್ರಮಾಣಿಕ ಪ್ರಯತ್ನ ಸುವುದೇ ಎಂಬ ಇಂಗಿತವೇನೂ ದೊರೆತಿಲ್ಲ.

'ಟಾಡಾ'ದಲ್ಲೂ ಕಾಂಗ್ರೆ ಇಕ್ಕಟ್ಟು

ಈ ಅಧಿವೇಶನದಲ್ಲಿ ಹಲವಾರು ವಿಸ್ತರಣೆಗಳನ್ನು ತೆದು ಹತ್ತು ವರ್ಷದಿಂದ ಇದ್ದ ಕರಾಳ 'ಟಾಡಾ' ಯಿದೆಯನ್ನು ಸಾರ್ವಜನಿಕ ಅಭಿಪ್ರಾಯದ ಒತ್ತ ಕ್ಕೆ ಮಣಿದು ಕೊನೆಗೂ ಮೇ 23 ರಂದು ಅದು ಗ್ದಾಗಲು ಬಿಟ್ಟಿತು.

ಆದರೆ ಸರಕಾರದ ಮಂದ ಬುದ್ಧಿ ಇಲ್ಲೂ ಟವಾಯಿತು. ಒಂದೆಡೆ ಗೃಹಮಂತ್ರಿಗಳು ಟಾಡಾದ ರ್ಬಳಕೆಯಾಗಿಲ್ಲವೆಂಬುದು ಸಮರ್ಥಿಸಿಕೊಂಡರೆ ಧಾನ ಮಂತ್ರಿಗಳು ಕೆಲವು ರಾಜ್ಯಗಳಲ್ಲಿ ದುರುಪ ಯೋಗ ಆಗಿದೆ ಎಂದು ಒಪ್ಪಿಕೊಂಡು ಅದರ ನದಲ್ಲಿ ಬೇರೊಂದು ಕಾನೂನು ತರಲಾಗುವುದು ದರು.

ಕೊನೆಗೂ ಈ ಇಕ್ಕಟ್ಟಿನಿಂದ ಪಾರಾಗಲು ಕ್ರಿಮಿ ಲ್ ಕಾನೂನಿನಲ್ಲಿ ತಿದ್ದುಪಡಿ ತಂದು ಅದರಲ್ಲಿ ಈ ಡಾದ ಕೆಲವು ಕರಾಳ ಅಂಶಗಳನ್ನು ಕಳ್ಳತನದಿಂದ ಸುವ ಪ್ರಯತ್ನ ನಡೆಸಿತು. ಆದರೆ ಬಿಜೆಪಿಯೇತರ ಪಕ್ಷಗಳು ಪ್ರತಿ ಹಂತದಲ್ಲಿ ಪ್ರತೀ ಕಲಮು ಗೂ ಪ್ರತಿ ಭಾಗ ಕುರಿತಂತೆ ಹೋರಾಡಿದ್ದರಿಂದ

ಈ ತಂತ್ರ ಸಾಗಲಿಲ್ಲ, ಎ.ಕೆ. ಆ್ಯಂಟನಿ, ದಿಗ್ವಿಜಯಸಿಂಗ್ ರಂತಹ ಕಾಂಗ್ರೆಸ್ (ಐ) ಮುಖ್ಯಮಂತ್ರಿಗಳೂ ಟಾಡಾ ಮುಂದುವರಿಕೆಯನ್ನು ವಿರೋಧಿಸಿದರೆ ದಿಲ್ಲಿ, ರಾಜ ಸ್ಥಾನ-ಗುಜರಾತ್ ಗಳ ಬಿಜೆಪಿ ಮುಖ್ಯಮಂತ್ರಿಗಳು ಹಾಗೂ ಮಹಾರಾಷ್ಟ್ರದ ಶಿವಸೇನಾ ಮುಖ್ಯಮಂತ್ರಿ ಮಾತ್ರ ಟಾಡಾದ ಮುಂದುವರಿಕೆ ಬಯಸಿದರು. ಆ ಬಗ್ಗೆ ಒತ್ತಡ ತರಲೂ ಯತ್ನಿಸಿದರು. 'ಟಾಡಾ' ಮುಂದುವರಿ ಕೆಯಿಂದ ಪ್ರಯೋಜನ ಪಡೆಯುವ ನಿರೀಕ್ಷೆ ಬಹು ಸಂಖ್ಯಾತ ಕೋಮುವಾದಿಗಳಿಗಿತ್ತು ಎಂದು ಸ್ಪಷ್ಟವಾಗು ತ್ತದೆ.

ಬಿಕ್ಕಟ್ಟನ್ನು ನಿವಾರಿಸಿಕೊಳ್ಳಲಾಗದ ಸ್ಥಿತಿಯಲ್ಲಿ

ವಿಚಿತ್ರವೆಂದರೆ ಸಂಸತ್ತಿನಲ್ಲಿ ಕ್ರಿಮಿನಲ್ ಕಾನೂನು (ತಿದ್ದುಪಡಿ) ಮಸೂದೆ ತಂದಾಗಲೂ ಸರಕಾರಕ್ಕೆ ಜನರ ಕ್ರೋಧದ ಆಳದ ಅರಿವಿದ್ದಂತಿರಲಿಲ್ಲ, ರಾಜ್ಯ ಸಭೆಯಲ್ಲಿ ಬಿಜೆಪಿ ಬೆಂಬಲದಿಂದ ಅದನ್ನು ಪಾಸು ಮಾಡಿಕೊಳ್ಳುವ ತಂತ್ರ ನಡೆಸಲು ಯತ್ನಿಸಿತು.

ಇದು ಆಳುವ ಪಕ್ಷದ ಹಲವು ಸದಸ್ಯರನ್ನೇ ರೊಚ್ಚಿಗೆಬ್ಬಿಸಿತು. ಇದನ್ನು ಕಂಡ ಆಳುವ ಪಕ್ಷ ತನ್ನ ತಂತ್ರ ಬದಲಿಸಿತು. ಮಸೂದೆ ಈ ಅಧಿವೇಶನದಲ್ಲಿ ಅಂಗೀಕಾ ರಗೊಳ್ಳುವುದು ಸಾಧ್ಯವಾಗಿರದಿದ್ದರೂ ಅದಿನ್ನೂ ಸಮಾ ಧಿಯಾಗಿಲ್ಲ. ಈಗಲೂ ಈ ವಿಷಯದಲ್ಲಿ ಗೃಹ ಇಲಾಖೆ ಅಧಿಕಾರಶಾಹಿಗಳ ಎದುರು ನೆಟ್ಟಗೆ ನಿಲ್ಲುವ ಧೈರ್ಯ ತೋರುತ್ತಿಲ್ಲ ಎಂಬುದು ಇನ್ನೊಂದು ಸಂಗತಿ.

ಒಟ್ಟಾರೆಯಾಗಿ ಸಂಸತ್ತಿನ ಈ ಬಾರಿಯ ಬಜೆಟ್ ಅಧಿವೇಶನ ಕಾಂಗ್ರೆಸ್(ಐ)ನ ಆಂತರಿಕ ಬಿಕ್ಕಟ್ಟು ಐ.ಎಂ.ಎಫ್.-ವಿಶ್ವಬ್ಯಾಂಕ್ ಕೂಟದ ಆದೇಶಕ್ಕನುಗುಣ ವಾಗಿ ದೇಶ-ವಿರೋಧಿ, ಜನ-ವಿರೋಧಿ ನೀತಿಗಳನ್ನು ಅನುಸರಿಸುವ ಹಠಮಾರಿತನದಿಂದಾಗಿ ಇನ್ನಷ್ಟು ತೀಕ್ಷ್ಣ ಗೊಂಡಿರುವುದನ್ನು ಕಂಡಿತು.

ಇಂತಹ ಸನ್ನಿವೇಶದಲ್ಲಿ ಕಾಂಗ್ರೆಸ್(ಐ) ತನ್ನ ಬಿಕ್ಕ ಟ್ಟನ್ನು ನಿವಾರಿಸಿಕೊಳ್ಳ ಬಲ್ಲುದು, ಮುಂದಿನ ಸಾರ್ವತ್ರಿಕ ಚುನಾವಣೆಗಳಲ್ಲಿ ಒಂದು ವಿಶ್ವಾಸಾರ್ಹ ಕಾರ್ಯಕ್ರಮ ವನ್ನು ಮುಂದಿಡಬಲ್ಲದು ಎಂದು ನಿರೀಕ್ಷಿಸುವುದು ಅಸಾಧ್ಯ. ಈ ಪರಿಸ್ಥಿತಿಯನ್ನು ಕೋಮುವಾದಿಗಳು ತಮ್ಮ ಪ್ರಯೋಜನಕ್ಕೆ ಬಳಸಿಕೊಳ್ಳದಂತೆ ಮಾಡಲು ಸಾಮೂ ಹಿಕ ಪ್ರಚಾರ-ಪ್ರಕ್ಷೋಭೆ ನಡೆಸಬೇಕಾದ ಹೊಣೆ ಈಗ ಎಡ, ಪ್ರಜಾಪ್ರಭುತ್ವ, ಜಾತ್ಯಾತೀತ ಶಕ್ತಿಗಳ ಮೇಲಿದೆ.

ರತೆಗಳನ್ನು ನೀಗಿಸುವಲ್ಲಿ, ಬೋನಸ್, ಪೆನ್ಶನ್, ತ್ತಿಭತ್ತೆ ಪಾಯಿಂಟು ಇತ್ಯಾದಿಗಳಲ್ಲಿ ಸರಕಾರದ ತಿಗಳನ್ನು ವಿರೋಧಿಸುವಲ್ಲಿ ಸಾರ್ವಜನಿಕ ವಲ ದ ಕಾರ್ಮಿಕರನ್ನು ಒಗ್ಗಟ್ಟಾಗಿಸಿ ಸಕ್ರಿಯಗೊಳಿಸಬೇ ದೆ. ಇದನ್ನು ಸಿಐಟಿಯು ಸಕ್ರಿಯ ಗುಂಪುಗಳನ್ನು ಘಟಿಸುವ ಹಾಗೂ ನಡೆಸುವ ಸತತ ಪ್ರಯತ್ನಗಳ ಲಕ ಮಾತ್ರವೇ ಸಾಧಿಸಬಹುದು. ಹೀಗಾಗಬೇ ದರೆ ಇನ್ನೂ ಉತ್ತಮ ಮಟ್ಟದ ಪ್ರಜಾಪ್ರಭುತ್ವೀಕ ಮತ್ತು ರಾಜಕೀಯ ಸಂಘಟನೆ ಅಗತ್ಯ. ಈ ಶಗಳಲ್ಲಿ ಯಶಸ್ಸು ಸಾಧಿಸಿದರೆ ಶಾಮೀಲು ನೀತಿ ಸರಿಸುವ, ಸುಧಾರಣಾವಾದಿ ಮಾರ್ಗ ಅನುಸರಿ ವವರನ್ನು ಮೂಲೆಗೊತ್ತಲು ಕಾರ್ಮಿಕ ಆಂದೋ ಕ್ಕೆ ಸಾಧ್ಯವಾಗುತ್ತದೆ. ಇದರಿಂದ ಪ್ರಜಾಪ್ರಭುತ್ವ ರ್ಯ ವಿಧಾನ ಹಾಗೂ ಸಾಮೂಹಿಕ ಬದಲಾವ ಬದ್ಧವಾದ ಶಕ್ತಿಗಳ ಬಲ ಹೆಚ್ಚುತ್ತದೆ. ಅಲ್ಲದೆ ು ಕಾರ್ಮಿಕ ಆಂದೋಲನ ಒಂದು ಮಹಾ ಕೂಟದ ರಚನೆಯ ಹಂತದಲ್ಲಿ ನಿಂತಿರುವಾಗ ರಿಕಾ ಒಕ್ಕೂಟಗಳು ಹಾಗೂ ದೊಡ್ಡ ಕಾರ್ಖಾನೆ ಘಗಳು ಹೇಗೆ ಕಾರ್ಯನಿರ್ವಹಿಸಬೇಕು ಎಂಬ ಗೆ ಉತ್ತರ ನೀಡುತ್ತದೆ. ರಾಜ್ಯಗಳ ಸಾರ್ವಜನಿಕ ದ್ದಿಮೆಗಳು, ಜವಳಿ, ಇಂಜಿನಿಯರಿಂಗ್ ಮತ್ತಿತರ ದ್ದಿಮೆಗಳಲ್ಲಿ ಇಂತಹ ಪ್ರಯತ್ನಗಳನ್ನು ಮಾಡಬೇ ದೆ. ಅಸಂಘಟಿತ ವಲಯದ ಕಾರ್ಯಕರ್ತರನ್ನು ಘಟಿಸುವ ಹಾಗೂ ಸರಕಾರದ ನೀತಿಗಳ ವಿರುದ್ಧ ದು ಬಲಿಷ್ಠ ಚಳುವಳಿ ಹರಿಯಬಿಡುವ ಅಗತ್ಯದ ಯಂತೂ ಪ್ರತ್ಯೇಕವಾಗಿ ಹೇಳಲೇಬೇಕಾಗಿಲ್ಲ.

ಕಾರ್ಮಿಕ ಸಂಘಟನೆಯ ಉಸಿರು

> ನಾವು ಕಾರ್ಮಿಕ ನ್ನು ಸರ್ವಸಾಮಾನ್ಯ ಹೋರಾಟಗಳಿಗೆ ತರಬಯು ವುದು ಕೇವಲ ಪ್ರೇಕ್ಷಕರಾ ಯಲ್ಲ, ಸಕ್ರಿಯವಾಗಿ ಭಾಗ ಹಿಸುವುದಕ್ಕಾಗಿ, ಸಕ್ರಿಯ ಮುಖಂಡರಾಗಿ ತರಬಯು ಸ್ತೇವೆ. ಆಗ ಮಾತ್ರವೇ ಮಿಕ ಆಂದೋಲನದ ಲೆಲಿರುವ ಸುಧಾರಣಾ ದಿ ಹಾಗೂ ಪರಿಷ್ಕರಣ ದಿ ಸಿದ್ಧಾಂತದ ಹಿಡಿತ ನ್ನು ಮುರಿಯಬಹುದು" ಳಿದ್ದರು ಬಿಟಿಆರ್.

ಮೂರನೆಯ ಅಂಶವೆಂದರೆ ಪ್ರಜಾಸತ್ತಾತ್ಮಕ ಕಾರ್ಯವಿಧಾನ. ಸಿಐಟಿಯು ಪ್ರಜಾ ಪ್ರಭುತ್ವಕ್ಕೆ ಬದ್ಧ ವಾಗಿದೆ. ಏಕೆಂ ದರೆ ಅದು ಪ್ರತಿ ಯೊಂದು ಜೀವಿಗೆ ಅತ್ಯಗತ್ಯವಾದ ಉಸಿರಾಟದಂತೆ. ಪ್ರಜಾಪ್ರಭುತ್ವದ

ಉಸಿರಾಟವಿಲ್ಲದೆ ಕಾರ್ಮಿಕ ಸಂಘಗಳಲ್ಲಿ ಜೀವಂತಿಕೆ ಇರಲಾರದು. ಬೆಳವಣಿಗೆಗಳಿಗೆ ಅಡ್ಡಿಯಾಗುವ ವಿಚಾರ ಗಳಿಂದ, ಆಚರಣೆಗಳಿಂದ ವ್ಯವಸ್ಥೆಯನ್ನು ಸ್ವಚ್ಛಗೊಳಿಸದೆ ಬೆಳವಣಿಗೆಗೆ ನೆರವಾಗುವ ವಿಚಾರಗಳು ಹಾಗೂ ಆಚರಣೆಗಳನ್ನು ಅಳವಡಿಸಿಕೊಳ್ಳದೆ ಕಾರ್ಮಿಕ ಸಂಘಟ ನೆಯೆಂಬುದು ತನ್ನನ್ನು ಉಳಿಸಿಕೊಳ್ಳಲಾರದು, ಬೆಳೆಯ ಲಾರದು.

ಇಷ್ಟೇ ಅಲ್ಲ, ಉಸಿರಾಟವೆಂದರೆ ಅದು ಕೃತಕ ಉಸಿರಾಟವೂ ಆಗಬಾರದು. ಕೇವಲ ಮುಖಂಡರು ಮಾತ್ರ ಚಿಂತನೆ, ಆಚರಣೆ ನಡೆಸಿದರೆ ಸಾಲದು. ಇಡೀ ದೇಹವೇ ಉಸಿರಾಡಬೇಕು, ಪ್ರತಿಯೊಂದು ಜೀವಾಣು ಈ ಪ್ರಕ್ರಿಯೆಯಲ್ಲಿ ಭಾಗವಹಿಸಲೇಬೇಕು ತಾನೇ!

ಈಗೀಗ ಒಂದು ಆಚರಣೆಗೆ ಮುಂದಾಳು ಹಾಗೂ ಅನುಯಾಯಿ ಸಂಬಂಧ ಎಂಬ ಸಿದ್ಧಾಂತದ ರೂಪ ಕೊಡುವ ಪ್ರಯತ್ನ ನಡೆದಿದೆ. ಅನುಯಾಯಿಗಳು ಮುಖಂಡನನ್ನು ಅನುಸರಿಸಬೇಕೇ ಹೊರತು ಮುಖಂಡ ಅನುಯಾಯಿಗಳು ಬಯಸುವ ದಿಕ್ಕನ್ನು ಅನುಸರಿಸಬಾ ರದು ಎಂದು. ಈ ವಾದ ಸಿಐಟಿಯುನ ಮೂಲಭೂತ ನೀತಿಗಳಿಗೇ, ಅದರ ಸ್ಥಾಪನೆಯ ಉದ್ದೇಶಕ್ಕೆ ವಿರುದ್ಧವಾ ದದ್ದು. ಈ ಬಗ್ಗೆ ಬಿಟಿಆರ್ ಏನು ಹೇಳುತ್ತಾರೆ ಕೇಳೋಣ(ಇದು ಅವರು ಸಿಐಟಿಯು ಸ್ಥಾಪನಾ ಸಮ್ಮೇ ಳನದ ಸಮಾರೋಪ ಭಾಷಣದಲ್ಲಿ ಹೇಳಿದ ಮಾತು) -

"ಯೂನಿಯನ್ ಕೇವಲ ಕೆಲವು ಮುಂದಾಳುಗಳಿಗೇ ಸೇರಿದ್ದು ಎಂಬಂತಹ ಪ್ರವೃತ್ತಿಯೊಂದಿದೆ. ....(ಕಾರ್ಮಿಕರು) ಮುಷ್ಕರ ಹೋರಾಟಗಳಲ್ಲಿ ಅವರು ಭಾಗವಹಿಸುತ್ತಾರೆ, ಯೂನಿಯನ್ ವಂತಿಕೆ ಕೊಡುತ್ತಾರೆ, ಆದರೆ ನಿರ್ಣಯ ತಗೊಳ್ಳುವುದನ್ನೆಲ್ಲಾ ಮುಂದಾಳುಗಳಿಗೆ ಬಿಟ್ಟು ಬಿಡುತ್ತಾರೆ. ನಾವು ನಿರ್ಮಿಸಿದ ಪ್ರಜ್ಞೆ ಹೇಗಿದೆಯೆಂದರೆ ಒಬ್ಬನೇ ಒಬ್ಬ ಕಾರ್ಮಿಕ ಕೂಡಾ ನೀವು ಅಪ್ರಜಾಸತ್ತಾತ್ಮಕವಾಗಿ ಕೆಲಸ ಮಾಡುತ್ತಿದ್ದೀರಿ ಎಂದು ಪ್ರತಿಭಟಿಸುವುದಿಲ್ಲ. ಯೂನಿಯನ್‌ಗಳು ಹೀಗೆಯೇ ನಡೆ ಯುವುದು ಎಂದು ಅವರು ಭಾವಿಸಿದ್ದಾರೆ. ಯೂನಿಯನ್ ನಡೆಸಿಕೊಂಡು ಹೋಗುವುದು ಮುಂದಾಳುಗಳ ಕೆಲಸ. ಕೆಲವೊಮ್ಮೆ ವಿಶೇಷವಾಗಿ ಮುಷ್ಕರಗಳಿದ್ದಾಗ ನಾವು ಬಂದು ಸೇರಿಕೊಳ್ಳುತ್ತೇವೆ ಎನ್ನುವಂತೆ ಯೂನಿಯನ್‌ಗಳನ್ನು ನಡೆಸಿ ದರೆ ನಮಗೂ ಸುಧಾರಣಾವಾದಿಗಳಿಗೂ ವ್ಯತ್ಯಾಸವೇನುಳಿ ಯುತ್ತದೆ? ನಾವು ಕಾರ್ಮಿಕ ವರ್ಗವನ್ನು ಒಗ್ಗಟ್ಟಾಗಿಸಬೇಕು ಎನ್ನುತ್ತೇವೆ. ಕಾರ್ಮಿಕ ವರ್ಗದ ಪ್ರತಿರೋಧ ಸಂಘಟಿಸು ತ್ತೇವೆ ಎಂದು ಹೇಳುವಾಗ ಮೊತ್ತಮೊದಲನೆಯದಾಗಿ ಈ ಚಾವುಟದ ಸುತ್ತ ಆವರಿಸುವ ಪ್ರತಿಯೊಬ್ಬ ಕಾರ್ಮಿಕನಲ್ಲಿ

ಪುಟ 7 ನೋಡಿ

ಎನ್ರೋನ್ ಬಗ್ಗೆ ಉಸಿರೆತ್ತೀರಾ ಹುಷಾರ್!!

ಇದು ಬ್ರಿಟಿಷ್ ಖಜಾನೆಯ ಮುಖ್ಯಸ್ಥ ಕೆನ್ನೆಟ್ ಕ್ಲಾರ್ಕ್ ಮಹಾಶಯ ಭಾರತಕ್ಕೆ ನೀಡಿರುವ ಎಚ್ಚರಿಕೆ. ದೇಶ ದಾದ್ಯಂತ ಎನ್ರೋನ್ ವಿದ್ಯುತ್ ಒಪ್ಪಂ ದದ ಬಗ್ಗೆ ವಿವಾದದ ಬಿರುಗಾಳಿ ಎದ್ದಿದೆ. ಇಲ್ಲಿ ಸಾಮ್ರಾಜ್ಯಶಾಹಿಗಳ ನಿಜ ಬಣ್ಣ ಬಯಲಿಗೆ ಬಂದಿದೆ. ಈಗವರು ಈ ಬಣ್ಣದ ಕೆಳಗಿನ ನಿಜ ಗುಣವನ್ನು ತೋರುತ್ತಿದ್ದಾರೆ. ಯಾರು ಏನೇ ಹೇಳಿದರೂ ನಾವು ಹೇಳಿದ್ದೇ ನಡೆಯಬೇಕು. ನಮ್ಮ ಲಾಭವೇ ಜಗ ತ್ತಿಗೆ ಹಿತ. ನಮ್ಮ ಲಾಭಕ್ಕೆ ಅಡ್ಡಿ ಬರುವ ಯಾರನ್ನೂ ಸಹಿಸಲಾರೆವು ಎಂಬುದು ಅವರ ನಿಲವು.

ಅಮೇರಿಕ ಸರ್ಕಾರದ ವಿದ್ಯುತ್ ಇಲಾಖೆ ಆಗಲೇ ಎನ್ರೋನ್ ಪರವಾಗಿ ಮಾತನಾಡಿದೆ. ಎಲ್ಲರಿಗೂ ಎಚ್ಚರಿಕೆ ನೀಡಿದ್ದೆ. ಈ ಹೇಳಿಕೆಗೆ ಬೆಂಬಲವಾಗಿ ಕ್ಲಾರ್ಕ್ ಮಹಾಶಯನ ಹೇಳಿಕೆ ಬಂದಿದೆ.

ಇಷ್ಟೊಂದು ಮೋಸಗಳಿರುವಾಗ ಎನ್ರೋನ್ ಒಪ್ಪಂದವನ್ನು ಯಾಕೆ ಒಪ್ಪಿ ಕೊಳ್ಳಬೇಕು ಎಂದು ಕೇಳಿ. ಈಗ ಒಪ್ಪಂದವನ್ನು ಮುರಿದರೆ ಅದು ಜಾಗ ತಿಕವಾಗಿ ತಪ್ಪು ಚಿಹ್ನೆ ನೀಡುತ್ತದೆ. ಆಗ ಭಾರತಕ್ಕೆ ಯಾರೂ ಹೂಡಿಕೆದಾರರು ಬರುವುದಿಲ್ಲ ಎಂಬುದು ಅವರ ಉತ್ತರ.

ಆದರೆ ಈಗಿರುವಂತೆ ಎನ್ರೋನ್ ನ ಹುಳುಕುಗಳನ್ನೆಲ್ಲ ಮುಚ್ಚಿಟ್ಟುಕೊಂಡು ಒಪ್ಪಂದ ಮುಂದುವರಿಸಿದರೆ ಅದ ರಿಂದ ಇನ್ನೂ ಹೆಚ್ಚಿನ ತಪ್ಪು ಚಿಹ್ನೆ ಸಂಕೇತವನ್ನು (ಭಾರತದಲ್ಲಿ ಏನು ಮಾಡಿ ದರೂ ನಡೆಯುತ್ತದೆ -ದಕ್ಕಿಸಿಕೊಳ್ಳಬ ಹುದು) ಜಾಗತಿಕ ಹೂಡಿಕೆದಾರರಿಗೆ ನೀಡಿದಂತಾಗುವುದಿಲ್ಲವೇ? ಇದು ಸ್ವಲ್ಪ ವಿಚಾರ ಮಾಡಬಲ್ಲವರ್ಯಾರಾದರೂ ಕೇಳುವ ಪ್ರಶ್ನೆ.

ಕೇಂದ್ರದ ನರಸಿಂಹರಾಯರ ಸರ ಕಾರ ಆಗಲೇ ತನಗೆ ಈ ವಿಷಯದಲ್ಲಿ ಆಗುತ್ತಿರುವ ನಡುಕವನ್ನು ತೋರಿಸಿಕೊಂ ಡಿದೆ. ಪ್ರಧಾನ ಮಂತ್ರಿಗಳ ಕಛೇರಿ ಎನ್ರೋನ್ ಒಪ್ಪಂದ ಮುಂದುವರಿಯು ತ್ತದೆ. ಅದಕ್ಕೆ ಯಾವುದೇ ಅಡೆತಡೆ ಬರುವ ಸಾಧ್ಯತೆ ಇಲ್ಲ ಎಂಬ ಹೇಳಿಕೆ ನೀಡಿ ಸಾಮ್ರಾಜ್ಯಶಾಹಿಗಳಿಗೆ ನೆಮ್ಮದಿ ಯುಂಟುಮಾಡಿದೆ.

ಆದರೆ ಈಗ ಬೂರ್ಜ್ವಾ ಪತ್ರಿಕೆ ಗಳೂ ಒಪ್ಪಂದದಲ್ಲಿ ಇರುವ ಅನರ್ಥ ಕಾರಿ ಅಂಶಗಳನ್ನು ಟೀಕಿಸತೊಡಗಿವೆ. ಅಮೇರಿಕದ ಮತ್ತು ಭಾರತದಲ್ಲಿನ ಪಟ್ಟ ಭದ್ರ ಹಿತಾಸಕ್ತಿಗಳು ಈ ಒಪ್ಪಂದದ ಪರವಾಗಿ ಕೆಲಸ ಮಾಡುತ್ತಿವೆ ಎಂದು ಅವು ಬರೆದಿವೆ.

ಈ ದೇಶದ ಜನ, ಅವರ ಸ್ವಾಭಿ ಮಾನ, ಸ್ವಾತಂತ್ರ್ಯ ಇತ್ಯಾದಿಗಳ ಬಗ್ಗೆ ಕಿಂಚಿತ್ತಾದರೂ ಕಾಳಜಿ ಗೌರವ ಇದ್ದಿದ್ದರೆ ನರಸಿಂಹರಾಯರ ಸರ್ಕಾರ ಆಗಲೇ ಈ ಒಪ್ಪಂದವನ್ನು ಪುನರ್ವಿಮರ್ಶಿಸಿ ಅನ್ಯಾ ಯಗಳನ್ನು ಪ್ರತಿಭಟಿಸಬೇಕಾಗಿತ್ತು. ಆದರೆ ಈ ಸರ್ಕಾರದಿಂದ ಇದನ್ನೆಲ್ಲ ನಿರೀಕ್ಷಿಸು ವಷ್ಟು ಘನತೆ ಅದಕ್ಕೆ ಇಲ್ಲ.

ಆದರೆ ಮುಕ್ತ ಮಾರುಕಟ್ಟೆ ಪದ್ಧತಿ ಸ್ವರ್ಗವೆನ್ನುವವರು ಈ ಎನ್ರೋನ್ ಒಪ್ಪಂ ದದಲ್ಲಿ ಇಷ್ಟೊಂದು ಮೋಸ ಯಾಕೆ ಎಂಬುದನ್ನು ವಿವರಿಸಿಯಾರೆ?

ಆಮದು ರಫ್ತುಗಳ ಲಾಭ ದಾಯಕ ವ್ಯವಹಾರ

ಎರಡು ಸುದ್ದಿಗಳು! ಒಂದನೆ ಯದು ಭಾರತ ಚಹ ಆಮದು ಮಾಡಿ ಕೊಳ್ಳಬೇಕು ಎನ್ನುವುದು ಇದಕ್ಕೆ ಬಹು ರಾಷ್ಟ್ರೀಯ ಕಂಪನಿಗಳು ಒತ್ತಡ ಹೇರು ತ್ತಿವೆ. ಎರಡನೇಯದು ಸಕ್ಕರೆ ಉದ್ದಿಮೆ ಗಳು ಸಕ್ಕರೆ ರಫ್ತು ಮಾಡಲು ಅನುಮತಿ ನೀಡಬೇಕೆಂದು ಸರ್ಕಾರವನ್ನು ಕೇಳುತ್ತಿ ರುವುದು.

ಉದಾರೀಕರಣದಡಿ ಆರ್ಥಿಕದ ಮೇಲೆ ಯಾವುದೇ ನಿರ್ಬಂಧಗಳು ಇರಬಾರದು ಎನ್ನುತ್ತಾರೆ.

ಭಾರತ ಜಗತ್ತಿನಲ್ಲೇ ದೊಡ್ಡ ಪ್ರಮಾ ಣದಲ್ಲಿ ಚಹ ಉತ್ಪಾದಿಸುವ ದೇಶ. ಜಗತ್ತಿನ ಅತ್ಯುತ್ತಮ ಗುಣಮಟ್ಟದ ಚಹವನ್ನು ಭಾರತ ರಫ್ತು ಮಾಡುತ್ತದೆ. ಆದರೆ ಈಗ ಇಂತಹ ದೇಶ ಚಹ ಆಮದು ಮಾಡಿಕೊಳ್ಳಬೇಕು.

ಬಹುರಾಷ್ಟ್ರೀಯ ಕಂಪನಿಗಳ ಪ್ರಕಾರ ಈ ಸಾರಿ ದೇಶದೊಳಗಿನ ಉತ್ಪಾದನೆ ಕಡಿಮೆಯಿರುವುದರಿಂದ ಇಲ್ಲಿನ ಉತ್ಪಾ ದನೆ ನಮ್ಮ ಜನರಿಗೆ ಸಾಕಾಗಲಾರದು. ಆದ್ದರಿಂದ ಆಮದು ಮಾಡಿಕೊಳ್ಳ ಬೇಕು. ಈಗಾಗಲೇ ಇರಾನ್ ನಂತಹ ದೇಶಗಳಿಗೆ ಚಹ ಪೂರೈಸಲು ದೇಶ ಒಪ್ಪಂದ ಮಾಡಿಕೊಂಡಿದೆ. ಈ ಒಪ್ಪಂ ದಗಳನ್ನು ಉಳಿಸಿಕೊಂಡು ನಮ್ಮ ಅವ ಶ್ಯಕತೆಗಳನ್ನು ಪೂರೈಸಿಕೊಳ್ಳಲು ನಾವು ಆಮದು ಮಾಡಿಕೊಳ್ಳಬೇಕಾಗುತ್ತದೆ.


ಹೀಗೆಯೇ ಸಕ್ಕರೆಯ ರಫ್ತು. ಕಳೆದ ವರ್ಷ ಸಕ್ಕರೆ ಅಭಾವದಿಂದ ಜನ ಕಂಗಾಲಾಗಿ ಹೋಗಬೇಕಾಯಿತು. ಆದರೆ ಈಗ ರಫ್ತಿನ ಪ್ರಸ್ತಾಪ. ಇವೆಲ್ಲ ಮುಕ್ತ ಮಾರುಕಟ್ಟೆಯ ದುಷ್ಪರಿಣಾಮಗಳು. ಯೋಜಿತ ಆರ್ಥಿಕದಲ್ಲಿ ನಮ್ಮ ದೇಶದ ಅವಶ್ಯಕತೆಗಳನ್ನು ಗಣನೆಗೆ ತೆಗೆದು ಕೊಂಡು ಆನಂತರ ರಫ್ತಿನ ವಿಚಾರ ಮಾಡಲಾಗುತ್ತದೆ. ಆದರೆ ಮುಕ್ತ ಮಾರು ಕಟ್ಟೆ ಇರುವಲ್ಲಿ ಇಂತಹ ವಿಚಾರಗಳಿಗೆ ಆದ್ಯತೆಯಿಲ್ಲ, ಎಲ್ಲಿ ಬೆಲೆ ಜಾಸ್ತಿಯಿ ದೆಯೋ ಅಲ್ಲಿ ಮಾರುವುದು. ಎಲ್ಲಿ ಬೆಲೆ ಕಡಿಮೆಯಿದೆಯೊ ಅಲ್ಲಿ ಕೊಳ್ಳು ವುದು. ಈ ಮೂಲಕ ಲಾಭದ ಪ್ರಮಾಣ ಹೆಚ್ಚಿಸುವುದು. ಬಂಡವಾಳ ಜನರನ್ನು ಹಿಂಡತೊಡಗುವುದು ಹೀಗೆ.

ಇದು ಒಂದೆರಡು ಸರಕುಗಳ ವಿಷ ಯದಲ್ಲಿ ಆದಾಗ ಪರಿಣಾಮವಿನ್ನೂ ಕಡಿಮೆ ಪ್ರಮಾಣದ್ದಿರುತ್ತದೆ. ಆದರೆ ಹತ್ತಾರು ಸರಕುಗಳ ವಿಷಯದಲ್ಲಿ ಹೀಗೇ ಆದಾಗ ದೇಶದ ಜನರ ಬದುಕೇ ಕಷ್ಟದಾಯಕವಾಗುತ್ತದೆ.

ಉದಾರೀಕರಣ ಮೂಡಿಸಿರುವ ಭಂಡತನ

ಇದು ಉದಾರೀಕರಣವೇ ಮೂಡಿ ಸಿರುವ ಭಂಡತನ. ಉದಾರೀಕರಣದ ಮೊದಲು ವ್ಯಾಪಾರಿಗಳು ಬಂಡವಾಳಿ ಗರು ಇಂತಹ ಬೇಡಿಕೆ/ಒತ್ತಡವನ್ನು ಬಹಿರಂಗವಾಗಿ ಇಡುತ್ತಿರಲಿಲ್ಲ.

ಅವರು ಅವಶ್ಯಕ ಸಾಮಗ್ರಿಗಳ ಕಾಯಿದೆಯನ್ನೇ ಹಿಂತೆಗೆದುಕೊಳ್ಳಿರೆಂದು ಸರ್ಕಾರವನ್ನು ಒತ್ತಾಯಿಸಿದ್ದಾರೆ. ಕಾಳ ಸಂತೆಕೋರರು ಅವಶ್ಯಕ ಸಾಮಗ್ರಿಗ ಳನ್ನು ಅಕ್ರಮ ದಾಸ್ತಾನು ಮಾಡಿ, ಮಾರುಕಟ್ಟೆಯಲ್ಲಿ ಅದು ಸಿಗದಂತೆ ಮಾಡಿ ಬೆಲೆಗಳನ್ನು ಏರಿಸಿ ಲಾಭ ಹೊಡೆಯುವ, ಜನರ ಹೊಟ್ಟೆಯ



ಮೇಲೆ ಹೊಡೆಯುವ ಸಂದರ್ಭ ಬರ ಬಾರದು, ಬಂದರೆ ಇವರ ಮೇಲೆ ತಕ್ಕ ಕ್ರಮ ಕೈಗೊಳ್ಳುವಂತಿರಬೇಕೆಂದೇ ಈ ಕಾಯಿದೆಯನ್ನು ಮಾಡಿರುವುದು.

ಇದರಿಂದಲೇ ಈ ಲಾಭಪಿಪಾಸುಗ ಳಿಗೆ ತೊಂದರೆ ಬಂದಿರುವುದು. ಹಾಗೆ ಅಕ್ರಮಗಳು ನಡೆಯುತ್ತಲೇ ಇಲ್ಲವೆಂ ದಲ್ಲ. ಬೇಕಾದಷ್ಟು ನಡೆಯುತ್ತಿವೆ. ಆದರೆ ಅದಕ್ಕೆ ಅಡೆತಡೆಗಳು ಇದೆ. ಈ ಅಡೆ ತಡೆಗಳನ್ನೇ ತೆರವು ಮಾಡಿಸಿಕೊಳ್ಳುವ ಹುನ್ನಾರ ಇವರದು.

ಹಾಗೊಮ್ಮೆ ಈ ಕಾಯಿದೆ ತೆಗೆದರೆ ಅವರಿಗೆ ಯಾವುದೇ ಲಂಗು ಲಗಾಮು ಇರುವುದಿಲ್ಲ. ಉದಾರೀಕರಣ ಇಂತಹ ದಿನಗಳನ್ನೇ ತರಲಿ ಎಂಬುದು ಇವರ ಬಯಕೆ. ಆದ್ದರಿಂದಲೇ ಸರ್ಕಾರದ ಮೇಲೆ ಇಂತಹ ಒತ್ತಡ.

ನೀರು, ಹಾಲು ಎರಡೂ ತುಟ್ಟಿ!!

ಇಡೀ ಕರ್ನಾಟಕದಲ್ಲಿ ಹಾಲಿನ ದರ ಏರಿದರೆ, ಬೆಂಗಳೂರಿನಲ್ಲಿ ನೀರಿನ ದರ ತುಟ್ಟಿಯಾಗಿದೆ. ನೀರನ್ನು ಹಾಲಿಗೆ ಬೆರೆ ಸುತ್ತಾರಲ್ಲ, ಆದ್ದರಿಂದ ನೀರಿನ ದರ ವನ್ನು ಏರಿಸಬೇಕಾಯಿತು ಎಂದು ಯಾರೂ ಹೇಳಿಕೆ ನೀಡಿಲ್ಲ, ಬಹುಶಃ ನೀರಿನ ಬೆಲೆ ಏರಿಸಿದವರಿಗೆ ಇದು ಹೊಳೆದಿರಲಿಕ್ಕಿಲ್ಲ.

ಕರ್ನಾಟಕದಲ್ಲಿ ಜನತಾದಳದ ಸರ್ಕಾರ ಬಂದಿದ್ದರೂ ಕೇಂದ್ರ ಸರ್ಕಾ ರದ ಉದಾರೀಕರಣ ನೀತಿಯ ದುಷ್ಪ ರಿಣಾಮಗಳು ಜನತೆಗೆ ಬಿಸಿ ತರಿಸು ತ್ತಿವೆ. ಹಾಗೆ ರಾಜ್ಯ ಸರ್ಕಾರಗಳಿಗೆ ಈ ವಿಷಯದಲ್ಲಿ ಇರುವ ಅಧಿಕಾರ ಅಲ್ಪ ಎಂಬುದು ಎಲ್ಲರಿಗೂ ಗೊತ್ತಿದೆ. ಆದರೆ ದೇವೇಗೌಡರ ಸರ್ಕಾರ ಉದಾರೀಕರ ಣದ ಝಳ ರಾಜ್ಯದ ಜನತೆಗೆ ತಾಕ ದಂತೆ ತಡೆವ ಪ್ರಯತ್ನವನ್ನೂ ಮಾಡು ವಂತೆ ಕಾಣುತ್ತಿಲ್ಲ.

ಬೆಲೆಗಳನ್ನು ಏರಿಸುವಾಗ ಆ ವಸ್ತು ವನ್ನು ಯಾರು ಉಪಯೋಗಿಸುತ್ತಾರೆ ಎಂಬುದನ್ನು ನೋಡಿ ಅದಕ್ಕೆ ತಕ್ಕಂತ ಮಾಡುವ ಏರಿಕೆ ಸಮಾಜದ ಮೇಲ್ವ ರ್ಗಗಳಿಗೆ ಮಾತ್ರ ತಾಕುವಂತೆ ಮಾಡಿ ದರೆ ಅದು ಸಮಂಜಸ. ಬಡವ ಶ್ರೀಮಂತರೆಂದು ನೋಡದೆ ಏಕಪ್ರಕಾ ರವಾಗಿ ಹೊರೆ ಹೇರಿದರೆ ಬಡವ ಹೊರೆ ಹೊರಲಾರದೆ ತತ್ತರಿಸುತ್ತಾನೆ ಎಂಬುದು ಮರೆಯಬಾರದು. ಜನತಾ ದಳ ಇತ್ತ ಗಮನ ನೀಡಿದಂತಿಲ್ಲ.

ಕೊಜೆಂಟ್ರಿಕ್ಸ್ ಜೊತೆಗಿನ ಒಪ್ಪಂ ದಕ್ಕೂ ಸರ್ಕಾರ ಅತೀವ ಆಸಕ್ತಿ ತೋರುತ್ತಿರುವಂತಿದೆ. ರಾಜ್ಯದ ವಿದ್ಯುತ್ ಪರಿಸ್ಥಿತಿ ಗಂಭೀರವಾಗಿರುವುದು, ಅದ ರಿಂದಾಗಿ ರಾಜ್ಯದ ಬೆಳವಣಿಗೆಗಳು ಕುಂಠಿತವಾಗಿರುವುದು ನಿಜ. ಆದರೆ ಇಂತಹ ಒಪ್ಪಂದಗಳಲ್ಲಿ ತಪ್ಪುಗಳಾದರೆ ಅದು ರಾಜ್ಯದ ಪರಿಸ್ಥಿತಿಯನ್ನು ಇನ್ನೂ ಹದಗೆಡಿಸುತ್ತದೆ.

ದೇಶದೊಳಗೆ



ವಿಶ್ವ

ಭೂ ಹೋರಾಟಕ್ಕೆ ಬೆಂಬಲವಾಗಿ ಮಹಿಳೆಯರ ರ‍್ಯಾಲಿ "ಭೂಮಿ ವಾರಾಣಸಿಯ ರಾಜನದಲ್ಲ, ಭೂಮಿ ನಮ್ಮದು"

ಈ ಘೋಷಣೆ ಮೇ 29 ರಂದು ವಾರಾಣಸಿಯಲ್ಲಿ ಮುಗಿಲು ಮುಟ್ಟಿತು.

"ಔರತೇಂ ಕರೇಂ ಖೇತ್ ಮೇ ಕಾಮ್
ಪಟ್ಟಾ ಲಿಖನ್ ಉನ್ಕೇ ನಾಮ್"

(ಮಹಿಳೆಯರು ಗದ್ದೆಗಳಲ್ಲಿ ದುಡಿಯುತ್ತಾರೆ, ಅವರ ಹೆಸರಲ್ಲಿ ಪಟ್ಟಾ ಬರೆಯಿರಿ) "ಭೂಮಿ ನಮ್ಮದು, ಬೆಳೆ ನಮ್ಮದು" ಇತ್ಯಾದಿ ಘೋಷಣೆಗಳ ನಡುವೆ ನಡೆದ ಉತ್ತರ ಪ್ರದೇಶದ ವಾರಾಣಸಿಯ ಜಿಲ್ಲೆಯ ಚಕಿಯಾದ ಒಂದು ಸಾವಿರಕ್ಕೂ ಹೆಚ್ಚು ಮಹಿಳೆಯರ ಈ ರ‍್ಯಾಲಿ ಒಂದು ವಿಶಿಷ್ಟ ರ‍್ಯಾಲಿ. ವಾರಾಣಸಿಯ ಮಾಜಿ ರಾಜ ಹಾಗೂ ಈಗ ಬನಾರಸ್ ಹಿಂದು ವಿಶ್ವವಿದ್ಯಾಲಯದ ಉಪಕುಲಪತಿಯಾಗಿರುವಾತ. 30 ಬಡ ದಲಿತ ಕುಟುಂಬಗಳು ಕಷ್ಟಪಟ್ಟು ಬೆಳೆಸಿದ ಬೆಳೆ ತನ್ನದು ಎಂದು ಕಾನೂನುಬಾಹಿರವಾಗಿ ಕಿತ್ತುಕೊಳ್ಳುವುದರ ವಿರುದ್ಧ ಕೃಷಿ ಕೂಲಿಕಾರರ ಹೋರಾಟಕ್ಕೆ ಬೆಂಬಲವಾಗಿ ಜನವಾದಿ ಮಹಿಳಾ ಸಂಘಟನೆಯ ಚಕಿಯಾ ಘಟಕ ಈ ರ‍್ಯಾಲಿಯನ್ನು ಸಂಘಟಿಸಿತ್ತು.

ಈ ಅತ್ಯಂತ ದಲಿತ ಮುಸಹರ್ ಜಾತಿಯ 100 ಕುಟುಂಬಗಳು ಮೂರು ತಲೆಮಾರಿನಿಂದ ಹಿಂದೆ ಬೆಂಗಾಡಾಗಿದ್ದ ಭೂಮಿಯನ್ನು ಸಾಗುವಳಿ ಯೋಗ್ಯ ಜಮೀನಾಗಿ ಪರಿವರ್ತಿಸಿದರು. ಆದರೆ ರಾಜ ಬಂದ, ಈ ಭೂಮಿ ನನ್ನದು ಎಂದ. ನಮಗೆ ಆರೇಳು ಬಿಘಾ ಜಮೀನು ಕೊಡಿ ಸಾಕು ಎಂದರು ಕೃಷಿ ಕೂಲಿಕಾರರು ಆತ ನಿರಾಕರಿಸಿದ. ಅಷ್ಟೇ ಅಲ್ಲ ಅವರು ಬೆಳೆದ ಬೆಳೆಯನ್ನು ಕೊಂಡೊಯ್ದ. ನಿರ್ವಾಹವಿಲ್ಲದೆ ಕೃಷಿ ಕೂಲಿಕಾರರು ಹೋರಾಟಕ್ಕಿಳಿದರು. ಸದ್ಯದಲ್ಲೇ ಅಖಿಲ ಭಾರತ ಕೃಷಿಕೂಲಿಕಾರರ ಸಂಘದ ನೇತೃತ್ವದಲ್ಲಿ ಈ ಮಾಜಿರಾಜ ತನ್ನದೆನ್ನುವ ಹೆಚ್ಚುವರಿ ಭೂಮಿಯನ್ನು ವಶಪಡಿಸಿಕೊಳ್ಳಲು ಒಂದು, ಭೂ ಹೋರಾಟ ನಡೆಸುವುದಾಗಿ ಈಗಾಗಲೇ ಘೋಷಿಸಿದೆ.

ಈ ಹಿನ್ನೆಲೆಯಲ್ಲಿ ಈ ದಲಿತ ಕುಟುಂಬಗಳ ಮಹಿಳೆಯರೊಂದಿಗೆ ಅಂಗನವಾಡಿ ಕಾರ್ಯಕರ್ತೆಯರು, ಶಾಲಾ ಅಧ್ಯಾಪಕಿಯರು, ಗೃಹಿಣಿಯರು, ರೈತ ಮಹಿಳೆಯರು, ಕಲ್ಲುಗಣಿಗಳಲ್ಲಿ ದುಡಿಯುವ ಮಹಿಳಾ ಕಾರ್ಮಿಕರು, ವಿದ್ಯಾರ್ಥಿನಿಯರು ಹೆಗಲಿಗೆ ಹೆಗಲು ಕೊಟ್ಟು ಭಾಗವಹಿಸಿದ್ದ ರ‍್ಯಾಲಿ ಒಂದು ಮಹತ್ವಪೂರ್ಣ ಹೆಜ್ಜೆಯಾಗಿತ್ತು. ಎ.ಐ.ಡಿ.ಡಬ್ಲ್ಯು.ಎ.ನ ವಾರಾಣಸಿ ಜಿಲ್ಲಾ ಕಾರ್ಯದರ್ಶಿ ಡಾ. ಹೌಸ್ಲಾ ಸಿಂಗ್ ಹಾಗೂ ಇತ್ತೀಚೆಗೆ ಬಿ.ಎಸ್.ಪಿ. ಅಭ್ಯರ್ಥಿಯನ್ನು ಸೋಲಿಸಿ ಜಿಲ್ಲಾ ಪರಿಷತ್ ಗೆ ಆಯ್ಕೆಯಾದ ಎ.ಐ.ಡಿ.ಡಬ್ಲ್ಯು.ಎ. ಜಿಲ್ಲಾ ಘಟಕದ ಜಂಟಿ ಕಾರ್ಯದರ್ಶಿ ನಿರ್ಮಲಾ ರವರ ಪ್ರಯತ್ನದಿಂದ ನಡೆದ ಈ ರ‍್ಯಾಲಿಯನ್ನುದ್ದೇಶಿಸಿ ಎ.ಐ.ಡಿ.ಡಬ್ಲ್ಯು.ಎ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಬೃಂದಾ ಕಾರಟ್ ಮಾತನಾಡಿದರು. ಎ.ಐ.ಡಿ.ಡಬ್ಲ್ಯು.ಎ. ನಿಯೋಗವೊಂದು ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಒಂದು ಮನವಿಯನ್ನು ಅರ್ಪಿಸಿತು.

ಉತ್ತರ ಪ್ರದೇಶದ ನಾಲ್ಕು ಜಿಲ್ಲೆಗಳಲ್ಲಿ ಕೃಷಿ ಕೂಲಿಕಾರರ ಕೂಲಿ ಹೋರಾಟ

ಉತ್ತರ ಪ್ರದೇಶದ ಫೈಜಾಬಾದ್ ಜಿಲ್ಲೆಯ ಅಕ್ಬರ್ ಪುರದಲ್ಲಿ ಮೇ 21ರಂದು ಸುತ್ತಲಿನ ನಾಲ್ಕು ಜಿಲ್ಲೆಗಳ (ಫೈಜಾಬಾದ್, ಜಾನ್ ಪುರ್, ಬಸ್ತಿ ಮತ್ತು ಸುಲ್ತಾನ್ ಪುರ) ಕೃಷಿ ಕೂಲಿಕಾರ್ಮಿಕ ಸಂಘದ 50 ಕಾರ್ಯಕರ್ತರ ಒಂದು ಸಮಾವೇಶ ನಡೆದು ಈ ಜಿಲ್ಲೆಗಳಲ್ಲಿ ಕೂಲಿ ಹೆಚ್ಚಳಕ್ಕೆ ಒಂದು ಹೋರಾಟ ಆರಂಭಿಸಲು ನಿರ್ಧರಿಸಿತು. ಈ ಪ್ರಕಾರ ಈಗಾಗಲೇ ರೈತ ಸಂಘ ಹಾಗೂ ಮಹಿಳಾ ಸಂಘಟನೆಗಳೊಡಗೂಡಿ ನಡೆಯುತ್ತಿರುವ ಭೂ ಹೋರಾಟದೊಂದಿಗೆ ಕೂಲಿ ಹೋರಾಟವೂ ಆರಂಭವಾಗಿದೆ.

ಜೂನ್ 2-3ರಂದು ಫೈಜಾಬಾದ್ ನಲ್ಲಿ, ಜೂನ್ 4 ರಂದು ಬಸ್ತಿಯಲ್ಲಿ ನಂತರ ಉಳಿದೆರಡು ಜಿಲ್ಲೆಗಳಲ್ಲಿ ಕೂಲಿ ಹೆಚ್ಚಳಕ್ಕಾಗಿ ಹೋರಾಟ ಆರಂಭವಾಗಿದೆ. ಉತ್ತರ ಪ್ರದೇಶ ಸರಕಾರ 33 ರೂ. ಕನಿಷ್ಠ ಕೂಲಿ ನಿಗದಿಪಡಿಸಿದ್ದರೂ 15-20ರೂ. ಮಾತ್ರ ಕೊಟ್ಟು 33 ರೂ. [illegible] ಹಾಕಿಸಿಕೊಳ್ಳಲಾಗುತ್ತಿದ್ದು ಇದರ ವಿರುದ್ಧ ಪ್ರತಿಭಟನೆಯಾಗಿದೆ. ಹೋರಾಟ ಆರಂಭವಾಗಿದೆ. ಈ ಹೋರಾಟಕ್ಕೆ ನೆರವಾಗಲು ಗ್ರಾಮಮಟ್ಟದ ಧಾನ್ಯ ಸಂಗ್ರಹ ಕಾರ್ಯಕ್ರಮ, ಕಾರ್ಯಕರ್ತರು, ತಮ್ಮ ಪತ್ನಿಯರ ಹೋರಾಟದಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಬೇಕೆಂದು ಕರೆ ನೀಡಲು ಕೂಡ ಹಳ್ಳಿ ಹಳ್ಳಿಗೆ ಕನಿಷ್ಠ ಕೂಲಿ ಜ್ಯಾಥಿಯ ಸಂದೇಶ ಒಯ್ಯಬೇಕೆಂದೂ ಮೇ 28ರ ಸಮಾವೇಶ ನಿರ್ಧರಿಸಿತು. ಈ ಹೋರಾಟ ಗ್ರಾಮೀಣ ಪ್ರದೇಶದಲ್ಲಿನ ಅತ್ಯಂತ ವರ್ಗ ಹೋರಾಟ ಎರಡು ಸಮಾವೇಶವನ್ನುದ್ದೇಶಿಸಿ ಮಾತನಾಡುತ್ತಾ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಉತ್ತರ ಪ್ರದೇಶ ಘಟಕದ ಅಧ್ಯಕ್ಷ ಹಾಗೂ ಹಿಂದೆ ಅಕ್ಬರ್ ಪುರದಿಂದ ಎಂ.ಎಲ್.ಎ. ಆಗಿ ಆರಿಸಿ ಬಂದಿದ್ದ ಅಕ್ಬರ್ ಹುಸೇನ್ ಬಾಬರ್ ಎಚ್ಚರಿಸುತ್ತಾ ಇದು ರಾಜ್ಯದಲ್ಲಿ ಜಾತಿಯ ಹೆಸರಲ್ಲಿ, ಕೋಮಿನ ಹೆಸರಲ್ಲಿ ನಡೆಯುತ್ತಿರುವ ವಿಭಜನೆಯನ್ನು ಎದುರಿಸುವ ಅತ್ಯುತ್ತಮ ದಾರಿ ಕೂಡಾ ಎಂದರು. ಕೃಷಿ ಕಾರ್ಮಿಕರ ಸಂಘದ ಅಖಿಲ ಭಾರತ ಜಂಟಿ ಕಾರ್ಯದರ್ಶಿ ಸುನಿಲ್ ಚೋಪ್ರರವರ ಸಲಹೆಯ ಮೇರೆಗೆ ಈ ನಾಲ್ಕು ಜಿಲ್ಲೆಗಳ ನಾಲ್ಕು ಸಂಯೋಜಕರಿರುವ ಒಂದು ಹೋರಾಟ ಸಮಿತಿಯನ್ನು ರಚಿಸಲಾಯಿತು. ಇದೇ ರೀತಿ ಪ್ರತಿ ಜಿಲ್ಲೆಯಲ್ಲಿ ಹೋರಾಟ ಸಮಿತಿಗಳನ್ನು ರಚಿಸಲಾಯಿತು.

ಖಾಸಗೀಕರಣ ನೀತಿಯ ವಿರುದ್ಧ ಬಲಿಷ್ಠ ಆಂದೋಲನ: ಆಂಧ್ರ ರೈತರ ನಿರ್ಧಾರ

ಜೂನ್ 5 ರಂದು ಹೈದರಾಬಾದಿನಲ್ಲಿ ಆಂಧ್ರಪ್ರದೇಶ ಕಿಸಾನ್ ಸಭಾ ನಡೆಸಿದ ರಾಜ್ಯ ಮಟ್ಟದ ರೈತರ ಒಂದು ಸಮಾವೇಶ ಸಹಕಾರ ವಲಯವನ್ನು ರಕ್ಷಿಸಿ, ಖಾಸಗೀಕರಣದ ಅನಿಷ್ಟದ ವಿರುದ್ಧ ಹೋರಾಡಲು, ಕೇಂದ್ರ ಹಾಗೂ ರಾಜ್ಯದ ಖಾಸಗೀಕರಣದ ನೀತಿಯ ವಿರುದ್ಧ ರೈತರ, ಮಹಿಳೆಯರ, ಕಾರ್ಮಿಕರ ಹಾಗೂ ನೌಕರರ ಸಂಘಟನೆಗಳನ್ನೊಳಗೊಂಡ ಒಂದು ಬಲಿಷ್ಠ ಆಂದೋಲನ ಬೆಳೆಸಲು ಕರೆ ನೀಡಿದೆ.

ಇದರ ಅಂಗವಾಗಿ ಜಿಲ್ಲೆ, ಯೂನಿಯನ್ ಹಾಗೂ ಕಾರ್ಖಾನೆ ಮಟ್ಟಗಳಲ್ಲಿ ಹಾಗೂ ಪ್ರತಿಯೊಂದು ಹಳ್ಳಿಯಲ್ಲಿ ಸಮಾವೇಶಗಳನ್ನು ನಡೆಸಲು ನಿರ್ಧರಿಸಲಾಯಿತು. ಜುಲೈಯಿಂದ ಈ ಕಾರ್ಯಕ್ರಮ ಆರಂಭವಾಗುವುದು. ರೈತರ, ಕಾರ್ಮಿಕರ, ವಿದ್ಯಾರ್ಥಿಗಳ, ಮಹಿಳೆಯರ ಹಾಗೂ ಬುದ್ಧಿಜೀವಿಗಳ ಪ್ರಾತಿನಿಧ್ಯವಿರುವ ಒಂದು ಸಮಗ್ರ ಐಕ್ಯ ವೇದಿಕೆ ರಚಿಸಿ ಆಗಸ್ಟ್‌ನಲ್ಲಿ ವಿಧಾನಸಭೆಯ ಮುಂದೆ ಒಂದು ಬೃಹತ್ ರ‍್ಯಾಲಿ ನಡೆಸಲಾಗುವುದು ಅದರ ಮೊದಲು ಸರಕಾರದ ಖಾಸಗೀಕರಣ ಪ್ರಯತ್ನಗಳ ವಿರುದ್ಧ ಲಕ್ಷಾಂತರ ರೈತರ ಸಹಿ ಸಂಗ್ರಹ ಚಳವಳಿ ನಡೆಸಲಾಗುವುದು.

ಸಮಾವೇಶ ಒಂದು ನಿರ್ಣಯ ಅಂಗೀಕರಿಸಿ ಕೃಷಿಯಲ್ಲಿ ಸಹಕಾರಿ ವಲಯ ಪ್ರಮುಖ ಪಾತ್ರ ವಹಿಸುತ್ತಿದೆ. ಆದರೆ ಸರಕಾರ ಈ ವಲಯದ ಕಾರ್ಯದಲ್ಲಿ ಪದೇ ಪದೇ ಮಧ್ಯ ಪ್ರವೇಶಿಸಿದುದರಿಂದ ಅದು ಗಮನಾರ್ಹವಾಗಿ ದುರ್ಬಲಗೊಂಡಿದೆ ಎಂದು ಖೇದ ವ್ಯಕ್ತಪಡಿಸಿತು.

ಇನ್ನೊಂದು ನಿರ್ಣಯ ಅಧಿಕಾರಿಗಳಲ್ಲಿ ಅಧಿಕಾರಶಾಹೀ ಪ್ರಾಬಲ್ಯ, ರಾಜಕೀಯ ಹಸ್ತಕ್ಷೇಪ ಮತ್ತು ಭ್ರಷ್ಟಾಚಾರಗಳಾಗಿ ಹಲವು ಸಂಸ್ಥೆಗಳಲ್ಲಿ ನಷ್ಟಗಳಾಗಿವೆ, ಇಂತಹ ನಷ್ಟಗಳಿಗೆ ಸರಕಾರ ನೀತಿಗಳು ಹಾಗೂ ಅಧಿಕಾರಿಗಳ ವರ್ತನೆಗಳೇ ಹೊಣೆ ಎಂದು ಹೇಳಿದೆ.

ಮತ್ತೊಂದು ನಿರ್ಣಯ ತೆಲುಗು ದೇಶಂ ಸರಕಾರದ ಖಾಸಗೀಕರಣ ಪ್ರಯತ್ನಗಳನ್ನು ಟೀಕಿಸಿತು. ಚುನಾವಣೆಯ ಮೊದಲು ತೆಲುಗು ದೇಶಂ ಪಕ್ಷಕೇಂದ್ರ-ರಾಜ್ಯ ಸರಕಾರಗಳ ಖಾಸಗೀಕರಣ ಪ್ರಯತ್ನಗಳನ್ನು ವಿರೋಧಿಸಿದ್ದರೂ ಅಧಿಕಾರಕ್ಕೆ ಬಂದರು. ಹಿಂದಿನ ಕಾಂಗ್ರೆಸ್ ಸರಕಾರಕ್ಕಿಂಲೂ ಜೋರಾಗಿ ಖಾಸಗೀಕರಣದ ಪ್ರಕ್ರಿಯೆಯನ್ನು ತೀವ್ರಗೊಳಿಸುತ್ತಿ ಇದು ಖಂಡನೀಯ ಎಂದಿದೆ.

(ಐ.ಎನ್.ಎನ್.)

ಬಳ್ಳಾರಿ ಜಿಲ್ಲಾ ಮಹಿಳಾ ಸಮಾವೇಶ

ಹಗರಿಬೊಮ್ಮನಹಳ್ಳಿ: ಪುರುಷ ಪ್ರಧಾನವಾದ ಭಾರತ ದೇಶದಲ್ಲಿ ಮಹಿಳೆಯರು ಸಮಾನತೆಯನ್ನು ಸಾಧಿಸಲು ಸಂಘಟಿತರಾಗಬೇಕಾಗಿದೆ. ಮಹಿಳೆಯರು ಸಂಘಟಿತರಾಗಿ ಆತ್ಮಸ್ಥೈರ್ಯ ಬೆಳೆಸಿಕೊಳ್ಳಿ ಎಂದು ಜನವಾದಿ ಮಹಿಳಾ ಸಂಘದ ರಾಜ್ಯ ಅಧ್ಯಕ್ಷನಾದ ಕೆ. ನೀಲಾ ಅವರು ಮಹಿಳೆಯರಿಗೆ ಕರೆ ನೀಡಿದರು. ಅವರು ಬಳ್ಳಾರಿ ಜಿಲ್ಲಾ ಮಟ್ಟದ ಮಹಿಳಾ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ, ಶೋಷಣೆಯ ವಿರುದ್ಧ ಜನವಾದಿ ಮಹಿಳಾ ಸಂಘಟನೆ ಹೋರಾಟ ಮಾಡಿದೆ. ಭಾರತ ದೇಶದಲ್ಲಿ ಅತಿ ದೊಡ್ಡ ಮಹಿಳಾ ಶಕ್ತಿಯಾಗಿ, ಅತಿ ಹೆಚ್ಚು ಮಹಿಳಾ ಸದಸ್ಯತ್ವವನ್ನು ಹೊಂದಿರುವ ಕೀರ್ತಿ ಜನವಾದಿ ಮಹಿಳಾ ಸಂಘಟನೆಗೆ ಸೇರುತ್ತದೆ ಎಂದರು.

ದೇಶದಲ್ಲಿ ಎಲ್ಲಾ ರೀತಿಯ ಮಹಿಳಾ ಸಂಘಗಳು ತಲೆ ಎತ್ತಿವೆ. ಆದರೆ ಮನೆ-ಮನೆಗೂ ತೆರಳಿ ಮಹಿಳೆಯರ ಸಮಸ್ಯೆಗಳನ್ನು ತಮ್ಮ ಸಮಸ್ಯೆಯೆಂದೇ ಪರಿಗಣಿಸಿ ಕೆಲಸ ಮಾಡುತ್ತಿರುವುದು ಜನವಾದಿ ಮಹಿಳಾ ಸಂಘಟನೆಯಿಂದ ಮಾತ್ರ ಸಾಧ್ಯವಾಗಿದೆ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಸಿಐಟಿಯುನ ಜಿಲ್ಲಾ ಕಾರ್ಯದರ್ಶಿ ಎಸ್. ಪ್ರಸನ್ನಕುಮಾರ್ ಮಾತನಾಡಿ ಹೊಸ ಆರ್ಥಿಕ ನೀತಿಗಳು ಮಹಿಳೆಯರ ಮೇಲೆ ಯಾವ ರೀತಿ ಪ್ರಭಾವ ಬೀರಲಿವೆ ಎಂದು ವಿವರಿಸಿದರು.

ಈ ಸಮಾವೇಶಕ್ಕೆ ಶುಭಕೋರಿ ಕೆ.ಪಿ.ಆರ್.ಎಸ್. ಜಿಲ್ಲಾ ಅಧ್ಯಕ್ಷನಾದ ಜೆ.ವಾ. ವೀರಸಂಗಯ್ಯ ಎಸ್.ಎಫ್.ಐ. ತಾಲೂಕು ಅಧ್ಯಕ್ಷನಾದ ರಂಗಪ್ಪದಾಸರ, ಡಿ.ವೈ.ಎಫ್.ಐ. ಮುಖಂಡರಾದ ಅನ್ವರ್ ಬಾಷ, ಬಿ. ಗಣೇಶ, ಕಲೀಫ್, ಎಸ್.ಎಫ್.ಎಂ. ಕೊಟ್ರೇಶ್ ಇವರುಗಳು ಮಾತನಾಡಿದರು.

ಸುಮಾರು 600ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದರು. ಪ್ರತಿಭಟನೋ ಮೆರವಣಿಗೆಯೊಂದಿಗೆ ತಾಲೂಕು ಕಚೇರಿಗೆ ತೆರಳಿ ಸಮಾವೇಶದ ನಿರ್ಣಯಗಳನ್ನು ತಹಸಿಲ್ದಾರರಿಗೆ ತಲುಪಿಸಿದರು.

ಈ ಸಮಾವೇಶದ ಅಧ್ಯಕ್ಷತೆಯನ್ನು ಎಸ್. ಗೋಣಿಬಸಮ್ಮ ವಹಿಸಿದ್ದರು. ತಾಲೂಕು ಕಾರ್ಯದರ್ಶಿ ಜೆ.ಶ್ರೀಮತಿ ಸಮಾವೇಶದ ಕಾರ್ಯಕ್ರಮವನ್ನು ನಿರೂಪಿಸಿದರು.



ಸಿಐಟಿಯು ಬೆಳ್ಳಿ ಹಬ್ಬ

ಹುಬ್ಬಳ್ಳಿ: 1970 ಮೇ 30 ರಂದು ಸ್ಥಾಪನೆಯಾಗಿದ ಸಿಐಟಿಯು ಈ ವರ್ಷ ತನ್ನ ಬೆಳ್ಳಿ ಹಬ್ಬವನ್ನು ಆಚರಿಸುತ್ತಿದೆ. ಇದರ ಅಂಗವಾಗಿ ಜೂನ್ 1 ರಂದು ಹುಬ್ಬಳ್ಳಿಯಲ್ಲಿ ಸಭೆಯೊಂದನ್ನು ಏರ್ಪಡಿಸಲಾಗಿತ್ತು. ಖ್ಯಾತ ನ್ಯಾಯವಾದಿ ಮತ್ತು ಜನತಾದಳದ ಮುಖಂಡರಾದ ಶ್ರೀ ವಿ.ಬಿ. ಹೊಂಬಳ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಗಳಲ್ಲಿ ಒಬ್ಬರಾದ ಸಿಐಟಿಯು ರಾಜ್ಯ ಕಾರ್ಯದರ್ಶಿ ನಿತ್ಯಾನಂದ ಸ್ವಾಮಿ ಅವರು ಮಾತನಾಡುತ್ತಾ ಐಕ್ಯತೆ ಮತ್ತು ಐಕ್ಯ ಹೋರಾಟದ ಘೋಷಣೆಯೊಂದಿಗೆ ಹುಟ್ಟಿದ ಸಿಐಟಿಯು ಕಳೆದ 25 ವರ್ಷಗಳ ಅಲ್ಪ ಅವಧಿಯಲ್ಲಿ ಬಂಡವಾಳಶಾಹಿಗಳ ಮತ್ತು ಕಾಂಗ್ರೆಸ್ ಸರ್ಕಾರದ ದಮನಕಾರಿ ಕ್ರಮಗಳನ್ನು ಎದುರಿಸುತ್ತಾ ದೇಶದ ಕಾರ್ಮಿಕರನ್ನು ಮತ್ತು ಕಾರ್ಮಿಕ ಸಂಘಗಳನ್ನು ಸಾಮಾನ್ಯ ಸಮಸ್ಯೆಗಳಿಗಾಗಿ ಒಂದು ಗೂಡಿಸುವಲ್ಲಿ ಮಾಡಿದ ಸಾಧನೆ ಪ್ರಶಂಸನೀಯವಾಗಿದೆ ಎಂದು ಹೇಳಿದರು. ಇತ್ತೀಚಿನ ವರ್ಷಗಳಲ್ಲಿ ಕೇಂದ್ರ ಸರ್ಕಾರದ ಖಾಸಗೀಕರಣ, ಉದಾರೀಕರಣ, ಮತ್ತು ವಿದೇಶೀ ಕಂಪೆನಿಗಳಿಗೆ ದೇಶವನ್ನು ಲೂಟಿ ಮಾಡಲು ಅವಕಾಶ ನೀಡುವ ಅರ್ಥ ನೀತಿಯ ವಿರುದ್ಧ ದೇಶದ ಕಾರ್ಮಿಕರನ್ನು ನೌಕರರನ್ನು, ಅಧಿಕಾರ ವರ್ಗದವರನ್ನು, ಕಲಾವಿದರನ್ನು ಬುದ್ಧಿಜೀವಿಗಳನ್ನು ಮಾತ್ರವಲ್ಲ ಗ್ರಾಮೀಣ ರೈತ ಹಾಗೂ ಕೃಷಿ ಕೂಲಿಕಾರರನ್ನು ಒಂದೇ ವೇದಿಕೆ ಅಡಿಯಲ್ಲಿ ತಂದು ಹೋರಾಟಕ್ಕೆ ಇಳಿಸುವಲ್ಲಿ ಸಿಐಟಿಯು ಮುಂಚೂಣಿಯ ಪಾತ್ರವನ್ನು ನಿರ್ವಹಿಸಿದೆ" ಎಂದರು.

ಟೆಲಿಕಾಂ ನೌಕರರ ಸಂಘದ ಮುಖಂಡರಾದ ಎಂ. ಸದಾನಂದ ಅವರು ಮಾತನಾಡುತ್ತಾ 1970ರಲ್ಲಿ ಕಲ್ಕತ್ತಾದಲ್ಲಿ ನಡೆದ ಸಿಐಟಿಯು ಸ್ಥಾಪನಾ ಸಮ್ಮೇಳನದಲ್ಲಿ ಹುಬ್ಬಳ್ಳಿಯ ಕಾರ್ಮಿಕ ಸಂಘಗಳ ಪ್ರತಿನಿಧಿಯಾಗಿ ತಾವು ಭಾಗವಹಿಸಿದ್ದನ್ನು ಹೆಮ್ಮೆಯಿಂದ ಸ್ಮರಿಸಿದರು.

ಜೀವ ವಿಮಾ ನೌಕರರ ಸಂಘದ ಅಧ್ಯಕ್ಷ ಆರ್.ಹೆಚ್. ಆಯ ಮಾತನಾಡುತ್ತಾ ಕೇಂದ್ರ ಸರ್ಕಾರದ ಹೊಸ ಆರ್ಥಿಕ ನೀತಿಯ ಹಿನ್ನೆಲೆಯಲ್ಲಿ ಕಾರ್ಮಿಕ ವರ್ಗದ ಹಕ್ಕುಗಳನ್ನು ಮಾತ್ರವಲ್ಲ ದೇಶದ ಆರ್ಥಿಕ ಸ್ವಾತಂತ್ರ್ಯವನ್ನು ಕಾಪಾಡುವ ಹೋರಾಟದಲ್ಲಿ ಸಿಐಟಿಯು ಜವಾಬ್ದಾರಿ ಹೆಚ್ಚಾಗಿದೆ" ಎಂದು ಹೇಳಿದರು.

ಧಾರವಾಡ ತಾಲು ಒಕ್ಕೂಟದ ಅಧಿಕಾರಿಗಳ ಸಂಘದ ಅಧ್ಯಕ್ಷರಾದ ಸಿ.ಆರ್. ಭಟ್ ಅವರು ಮಾತನಾಡುತ್ತಾ ಅಂದು ಎಸ್.ಎ. ಡಾಂಗೆಯವರ ತಪ್ಪು ನೀತಿಯಿಂದಾದ ಧಕ್ಕೆಯಿಂದ ಮಹಾರಾಷ್ಟ್ರದ ಎಡ ಚಳುವಳಿಗೆ ಇನ್ನೂ ಚೇತರಿಸಿಕೊಳ್ಳಲಾಗದೆ ಶಿವಸೇನೆಯಂತಹ ಪ್ರತಿಗಾಮಿ ಶಕ್ತಿಗಳ ಬೆಳವಣಿಗೆಗೆ ಕೋಮುವಾದಿ ಶಕ್ತಿಗಳ ಆತಂಕಕಾರಿ ಬೆಳವಣಿಗೆಯನ್ನು ಸಮರ್ಪಕವಾಗಿ ಎದುರಿಸಿ ಹಿಮ್ಮೆಟ್ಟಿಸುವುದು ಸಿಐಟಿಯು ಸಂಘಟನೆಯ ಮುಂದೆ ಇರುವ ಅತ್ಯಂತ ಗಂಭೀರ ಸವಾಲು" ಎಂದರು.

ಧಾರವಾಡ ಜಿಲ್ಲಾ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರಾದ ಫಕೀರಪ್ಪ ಹೋತನಹಳ್ಳಿರವರು ಸಭೆಯಲ್ಲಿ ಹಾಜರಿದ್ದು ಮಾತನಾಡಿರು.

ಆರಂಭದಲ್ಲಿ ಸಿಐಟಿಯು ಧಾರವಾಡ ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಡಿ.ಜೆ. ಗೋಂದಕರ ಸ್ವಾಗತಿಸಿದರು. ಕೊನೆಯಲ್ಲಿ ಸಮಿತಿಯ ಉಪಾಧ್ಯಕ್ಷ ಎಂ.ಎಚ್. ಮುಲ್ಲಾ ವಂದಿಸಿದರು.

ಭಟ್ಕಳ

ಭಟ್ಕಳ ತಾಲೂಕಿನ ವಿವಿಧ ಹೆಂಚು ಮತ್ತು ಇತರ ಕೈಗಾರಿಕಾ ಘಟಕಗಳಲ್ಲಿ ಸಿಐಟಿಯು ಸ್ಥಾಪನೆಯಾದ 25 ವರ್ಷದ ಹಿನ್ನೆಲೆಯಲ್ಲಿ ಮೇ 30 ರಂದು ಬೆಳ್ಳಿ ಹಬ್ಬವನ್ನು ಧ್ವಜಾರೋಹಣದೊಂದಿಗೆ ಆಚರಿಸಲಾಯಿತು.

ಕಾರ್ಖಾನೆಗಳಲ್ಲಿ ನಡೆದ ಸಭೆಗಳನ್ನುದ್ದೇಶಿಸಿ ಸಿಐಟಿಯು ಮುಖಂಡರುಗಳಾದ ಕಾಂ.ತಿಲಕಗೌಡ, ಕಾಂ. ಸುರೇಶ್ ತಾಂಡೇಲ, ಸಿಪಿಐ(ಎಂ) ಭಟ್ಕಳ ಶಾಖೆಯ ಕಾರ್ಯದರ್ಶಿ ಸುಭಾಷ್ ಕೊಪ್ಪಿಕರ ಮಾತನಾಡಿದರು. ಈ ಸಂದರ್ಭದಲ್ಲಿ ಬಿಟಿಆರ್ ಸ್ಮಾರಕ ನಿಧಿ ಸಂಗ್ರಹಕ್ಕೆ ಕರೆ ನೀಡಲಾಯಿತು.

.ಮುರ್ಡೇಶ್ವರ ಹೆಂಚು ಕಾರ್ಖಾನೆಯ ಹೋರಾಟಕ್ಕೆ ವಿವಿಧ ಕಾರ್ಖಾನೆಯ ಕಾರ್ಮಿಕರು ಮತ್ತು ತಾಲೂಕಿನ ನಾಗರೀಕರು ನೀಡಿದ ಸಹಕಾರವನ್ನು ಸ್ಮರಿಸಿ ಅಭಿನಂದನೆ ಸಲ್ಲಿಸಲಾಯಿತು.

ಮೈಸೂರು

ಸಿಐಟಿಯು ಸಂಯೋಜಿತ ವಿಕ್ರಾಂತ್ ಟೈರ್ಸ್ ಕಾರ್ಮಿಕರು ಮೇ 30ರಂದು ಕಾರ್ಖಾನೆಯ ಮುಖ್ಯದ್ವಾರದಲ್ಲಿ ಸಿಐಟಿಯು ಬೆಳ್ಳಿ ಹಬ್ಬದ ಆಚರಣೆಯನ್ನು ಧ್ವಜಾರೋಹಣದ ಮೂಲಕ ನೇರವಿಸಿದರು. ಈ ಸಂದರ್ಭದಲ್ಲಿ ಹಾಜರಿದ್ದ ಹಿರಿಯ ಕಾರ್ಮಿಕರಾದ ಎಂ.ಸಿ. ಮಲ್ಲಯ್ಯ ನವರು ಧ್ವಜಾರೋಹಣ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ವಿಕ್ರಾಂತ್ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಎಸ್. ರಾಮುರವರು ಸ್ವಾಗತಿಸಿದರು. ಸಂಘದ ಅಧ್ಯಕ್ಷ ಜಿ. ಜಯರಾಂ ರವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಮೈಸೂರು ಜಿಲ್ಲಾ ಸಿಐಟಿಯು ಅಧ್ಯಕ್ಷರಾದ ಕಾಂ. ಉಗ್ರಪ್ಪನವರು ಮುಖ್ಯ ಅತಿಥಿಗಳಾಗಿ ಮಾತನಾಡುತ್ತಾ ಸಿಐಟಿಯು ಕಾರ್ಮಿಕರು ದುಡಿಯುವ ವರ್ಗದ ಜನರು ಸಂಘಟನೆಯ ಹಾದಿಯನ್ನು ತುಳಿದು ಸಂಘಟನೆಯನ್ನು ಬೆಳೆಸಬೇಕೆಂದರು. ಹಾಗೂ ಬೆಳ್ಳಿ ಹಬ್ಬದ ಮಹತ್ವದ ಬಗ್ಗೆ ವಿವರಿಸಿದರು. ಈ ಸಂದರ್ಭದಲ್ಲಿ ವಿಕ್ರಾಂತ್ ಕಾರ್ಮಿಕ ಮುಖಂಡರುಗಳಾದ ಕೃಷ್ಣ ಕುಮಾರ್, ಬಿ. ಲಿಂಗರಾಜು, ಮರಿಸ್ವಾಮಿ, ಹೆಚ್.ಸಿ. ಚಂದ್ರೇಗೌಡ ಹಾಗೂ ಶ್ರೀಕಾಂತ್ ರವರು. ಹಾಜರಿದ್ದರು.

ಪಾಕಿಸ್ತಾನದ ಬುಡವನ್ನೇ ಅಲುಗಾಡಿಸುತ್ತಿರುವ ಮೊಹಜಿರ್ ಸಮಸ್ಯೆ

ಕರಾಚಿಯಲ್ಲಿ ಮತ್ತೆ ಹಿಂಸಾಚಾರ

ಪಾಕಿಸ್ತಾನದ ಮೊಹಜೀರ್ ಜನಾಂಗೀಯ ಸಮಸ್ಯೆ ಪುನಃ ಉಲ್ಬಣಗೊಂಡಿದೆ. ಕರಾಚಿ ಹಾಗೂ ಸಿಂಧ್ ಪ್ರಾಂತ್ಯದ ಹಲವು ಪ್ರಮುಖ ನಗರಗಳಲ್ಲಿ ತೀವ್ರ ಹಿಂಸಾಚಾರದಲ್ಲಿ ಹತ್ತಾರು ಜನರು ಸತ್ತಿದ್ದಾರೆ. ಸೈನ್ಯ ಹಾಗೂ MQM (ಮೊಹಜೀರ್ ಕೌಮಿ ಚಳುವಳಿ)ಯ ಕಾರ್ಯಕರ್ತರು ಹಲವಾರು ಕಡೆ ಗೋಳೀಬಾರು ನಡೆಸಿದರು. ಇದಕ್ಕಿಂತ ಮೊದಲು ಪ್ರಧಾನಿ ಬೆನಜೀರ್ ಭುಟ್ಟೋ ಹಾಗೂ MQM ನಾಯಕರ ನಡುವೆ ತೀವ್ರ ಆಪಾದನೆಗಳ ಯುದ್ಧವೇ ನಡೆದಿತ್ತು. MQMನ್ನು ಮಿಲಿಟರಿಯ ಸಹಾಯದಿಂದ ಮುಗಿಸುಬಿಡುತ್ತೇವೆ ಎಂಬ ಬೆನಜೀರ್ ಅಬ್ಬರಕ್ಕೆ MQM ಕಾರ್ಯಕರ್ತರು ಬಂದೂಕದಿಂದ ಉತ್ತರ ನೀಡುತ್ತಿರುವಂತಿದೆ. ಸೈನ್ಯ MQM ಕಾರ್ಯಕರ್ತರನ್ನು ಹುಡುಕಿ ಬೇಟೆಯಾಡುತ್ತಿದೆ. MQM ಕರಾಚಿಯ ಆರ್ಥಿಕ ಚಟುವಟಿಕೆಯನ್ನು ಸ್ತಬ್ಧಗೊಳಿಸುವಲ್ಲಿ ಯಶಸ್ವಿಯಾಗಿದೆ. MQM ಜತೆ ರಾಜಕೀಯ ಮಾತುಕತೆ ಆರಂಭಿಸುವಂತೆ ವಿರೋಧಿ ಪತ್ರಕ್ಷದ ನಾಯಕರ ಕರೆಯನ್ನು ಬೆನಜೀರ್ ಭಯೋತ್ಪಾದಕರೊಡನೆ ಮಾತನಾಡಲು ತಯಾರಿಲ್ಲ ಎಂದು ತಿರಸ್ಕರಿಸಿದ್ದಾರೆ. ಆದರೆ MQM ಜತೆ ಮಾತುಕತೆ ನಡೆಸದೆ ಈ ಸಮಸ್ಯೆ ಬಗೆಹರಿಯುವಂತೆ ಕಾಣುವುದಿಲ್ಲ.

ಮೊಹಜೀರ್ ಅಂದರೆ ಭಾರತ ವಿಭಜನೆಯಾದಾಗ ಉತ್ತರಪ್ರದೇಶ, ಬಿಹಾರ ಮುಂತಾದ ಕಡೆಯಿಂದ ಪಾಕಿಸ್ತಾನಕ್ಕೆ ವಲಸೆ ಹೋದವರ ಜನಾಂಗ. ಉರ್ದು ಮಾತನಾಡುವವರು. ಪಾಕಿಸ್ತಾನ ಆಗಿನ ಭಾರತ ಎಲ್ಲಾ ಮುಸ್ಲಿಮರ ಧರ್ಮದ ಆಧಾರದ ಮೇಲೆ ಸ್ಥಾಪಿಸಲಾದ ದೇಶ ಎಂದಿದ್ದರೂ, ಮೊಹಜೀರ್ ಮೊದಲಿನಿಂದಲೂ ಎರಡನೇ ದರ್ಜೆಯ ಪ್ರಜೆಗಳಂತೆ ಕಾಣುತ್ತಿದ್ದರು. ಮೊಹಜೀರರು ಕರಾಚಿ ಸೇರಿದಂತೆ ಹಲವಾರು ನಗರಗಳಲ್ಲಿ ಬಹುಸಂಖ್ಯಾತರು. ಆದರೆ ಎಲ್ಲದರಲ್ಲೂ ಅವರಿಗೆ ಕೊನೆಯ ಸ್ಥಾನ. ಅವರ ಭಾಷೆಗೆ ಮಾನ್ಯತೆ ಇಲ್ಲ. ಸರಕಾರಿ ನೌಕರಿಗಳಲ್ಲಿ ಅವರಿಗೆ ಪ್ರವೇಶವಿಲ್ಲ. ಎಲ್ಲಾ ಕಡೆಯೂ ಅವರ ವಿರುದ್ಧ ಮಲತಾಯಿ ಧೋರಣೆ. ಪಾಕಿಸ್ತಾನದ ಮಿಲಿಟರಿ ಅಧಿಕಾರಿಗಳು, ಅಧಿಕಾರಶಾಹಿ, ಆಳುವ ವರ್ಗಕ್ಕೆ ಮೊಹಜೀರ್ ಕಂಡರೆ ಎಲ್ಲಿಲ್ಲದ ಕೋಪ. ಹಿಂದಿನ ನವಾಜ್ ಷರೀಫ್ ಸರಕಾರದ ಸಮಯದಲ್ಲಿ 1992ರಲ್ಲಿ MQM ವಿರುದ್ಧ ಭಾರೀ ಮಿಲಿಟರಿ ಕಾರ್ಯಚರಣೆ ಆರಂಭಿಸಿತ್ತು. ಅದರ ಫಲವೇ ಈಗಿನ ಉಲ್ಬಣವಾಗಿರುವ ಮೊಹಜೀರ್ ಸಮಸ್ಯೆ. ಎಂ.ಕ್ಯು.ಎಂ. ಬೆನಜೀರ್‌ಗೆ ನುಂಗಲಾರದ ತುತ್ತಾಗಿದೆ.

MQM ಪದೇ ಪದೇ ಚುನಾವಣೆಗಳಲ್ಲಿ ತನ್ನ ಸ್ಥಾನವನ್ನು ಉಳಿಸಿಕೊಂಡು ಬರುತ್ತಿದೆ. ಪಾಕಿಸ್ತಾನದ ದುರ್ಬಲ ಪ್ರಜಾಪ್ರಭುತ್ವದಲ್ಲಿ MQM ಎಷ್ಟೋ ಬಾರಿ ಅದು ಗಳಿಸಿದ ಸೀಟುಗಳಿಗಿಂತ ಹೆಚ್ಚಿನ ಪ್ರಭಾವ ಸರಕಾರ ರಚನೆ ಮೇಲೆ ಹೊಂದಿದೆ. ಮೊದಲು ಬೆನಜೀರ್‌ರ PPPಯ ಮಿತ್ರ ಪಕ್ಷವಾಗಿ ಅದು ಚುನಾವಣೆಯಲ್ಲಿ ಸ್ಪರ್ಧಿಸಿತ್ತು. ಉಳಿದೆಲ್ಲಾ ಪಕ್ಷಗಳು ನಿಜವಾದ ಸಮಸ್ಯೆಯನ್ನು ಗಾಳಿಗೆ ತೂರಿ, ಬರಿಯ ಇಸ್ಲಾಂ ಹಾಗೂ ಕಾಶ್ಮೀರದಂತಹ ಭಾವುಕ ವಿಷಯಗಳ ಮೇಲೆ ರಾಜಕೀಯ ನಡೆಸಿದರೆ, MQM ಇವರೆಡರ ಆಧಾರವಿಲ್ಲದೆ ಮೊಹಜೀರ್ ಸಮಸ್ಯೆಯ ನೆಲೆಯಲ್ಲಿ ಭದ್ರ ನೆಲೆ ಹೊಂದಿದೆ. ಇದೇ ಬೆನಜೀರ್ ಸರಕಾರಕ್ಕೂ ಪಾಕಿಸ್ತಾನದ ಅಧಿಕಾರಾರೂಢ ತ್ರಿವಳಿಗೂ - ಅಧ್ಯಕ್ಷರು, ಸೈನ್ಯ, ಅಧಿಕಾರಶಾಹಿ- ನುಂಗಲಾರದ ತುತ್ತು. MQMನ ನಾಯಕತ್ವ ಸರ್ವಾಧಿಕಾರಿ ಹಾಗೂ ಭಯೋತ್ಪಾದಕತೆ ಬಳಸುತ್ತಿದೆ ಎಂಬುದು ಪೂರ್ಣ ಸುಳ್ಳಲ್ಲ. ಆದರೂ MQMನ್ನು ಮಿಲಿಟರಿಯಿಂದ ಮಣಿಸುವುದು ಅದನ್ನು ಮುರಿಯುವುದು ಸರಕಾರಕ್ಕೆ ಸಾಧ್ಯವಾಗಿಲ್ಲ. MQMನ ನೆಲೆಗೆ ಮಾನ್ಯತೆ ಕೊಟ್ಟು, ಅದರ ಜತೆ ರಾಜಕೀಯ ಮಾತುಕತೆ ನಡೆಸುವುದೊಂದೇ ಬೆನಜೀರ್‌ಗೆ ಉಳಿದಿರುವ ಮಾರ್ಗ. ಇಲ್ಲದಿದ್ದರೆ ಪಾಕಿಸ್ತಾನದ ಬುಡವೇ ಅಲುಗಾಡೀತು.

ಬೋಸ್ನಿಯಾದ ಶಾಂತಿಪಾಲಕರ ರಕ್ಷಣೆಗೆ ಬ್ರಿಟಿಶ್-ಫ್ರೆಂಚ್ ಪಡೆಗಳು

ಮಾಜಿ ಯುಗೋಸ್ಲಾವಿಯಾದಲ್ಲಿ ಜನಾಂಗೀಯ ಕಲಹ, ಅದರಲ್ಲಿ ಶಾಂತಿಪಾಲನೆಗೆ ವಿಶ್ವಸಂಸ್ಥೆಯ ಮಧ್ಯಪ್ರವೇಶ ಇನ್ನಷ್ಟು ಹಾಸ್ಯಾಸ್ಪದ ದುರಂತವಾಗುತ್ತಿದೆ. ಬೋಸ್ನಿಯಾದ ಸಬ್ರಿಯನ್ನರ ವಶದಲ್ಲಿ ಬಂದಿಯಾಳುಗಳಾಗಿರುವ ಸುಮಾರು 150ರಷ್ಟು ವಿಶ್ವಸಂಸ್ಥೆ ಶಾಂತಿಪಾಲಕ ಪಡೆಗಳ ಸೈನಿಕರ ರಕ್ಷಣೆಗೆ ಬ್ರಿಟನ್ ಹಾಗೂ ಫ್ರಾನ್ಸ್ ಹತ್ತು ಸಾವಿರ ಸೈನಿಕರ ಹೊಸ ಪಡೆ ಕಳಿಸಲು ಮುಂದಾಗಿದೆ.

ಈಗಿನ ಹಾಸ್ಯಾಸ್ಪದ ದುರಂತ ನಾಟಕದ [illegible] ಆರಂಭವಾಗಿದ್ದು, ಕೆಲವು ತಿಂಗಳುಗಳ ಹಿಂದೆ ಮೂರು ವರ್ಷಗಳ ಹಿಂದೆ ಬೋಸ್ನಿಯಾದ ಸರ್ಬಿಯನ್ನರು ಕ್ರೋಟದಿಂದ ಹಾಗೂ ಮುಸ್ಲಿಮರಿಂದ ಗೆದ್ದ ಪ್ರದೇಶಗಳನ್ನು, ಅವರು ವಾಪಸು ಗೆದ್ದುಕೊಳ್ಳಲು ಆರಂಬಿಸಿದಾಗಿನಿಂದ ಸಬ್ರಿಯನ್ನರು ಹತಾಶರಾಗಿ ಈವರೆಗೆ ಪಾಲಿಸಿಕೊಂಡು ಬಂದಿದ್ದ ವಿಶ್ವಸಂಸ್ಥೆ ಶಾಂತಿಪಾಲನಾ ನಿಯಮಗಳನ್ನು ಗಾಳಿಗೆ ತೂರಲು ಆರಂಭಿಸಿದ್ದರು. ಭಾರಿ ಶಸ್ತ್ರಾಸ್ತ್ರಗಳನ್ನು ವಿಶಿಷ್ಟ ಪ್ರದೇಶಗಳಿಂದ ದೂರವಿಡಲು ವಿಶ್ವಸಂಸ್ಥೆಯ ನಿಯಮಗಳನ್ನು ಉಲ್ಲಂಘಿಸಲಾರಂಭಿಸಿದರು. ಇದನ್ನು ಪ್ರತಿಬಂಧಿಸಿ ನಾಟೋ ವಿಮಾನಗಳು ಸಬ್ರಿಯನ್ ಶಸ್ತ್ರಾಸ್ತ್ರಗಳರ ಮೇಲೆ ಬಾಂಬ್ ದಾಳಿ ನಡೆಸಿದರು. ಇದರಿಂದ ಕ್ಷುದ್ರರಾದ ಬೋಸ್ನಿಯಾದ ಸಬ್ರಿಯನ್ನ ಗೆರಿಲ್ಲಾ ಪಡೆಗಳು ಮೂರು ನೂರು ಶಾಂತಿಪಾಲಕರನ್ನು ಒತ್ತೆಯಾಳುಗಳನ್ನಾಗಿ ತೆಗೆದುಕೊಂಡು ನಾಟೋ ವಿಮಾನ ಧಾಳಿಗೆ ತುತ್ತಾದ ಶಸ್ತ್ರಾಗಾರಗಳಲ್ಲಿ ಇಟ್ಟರು. ಇದರಿಂದ ನಾಟೋ ವಿಮಾನ ದಾಳಿ ನಿಲ್ಲಿಸಬೇಕಾಯಿತು. ವಿಶ್ವಸಂಸ್ಥೆ ಮತ್ತು ನಾಟೋ ಪಡೆಗಳಿಗೆ ಇದು ತೀರಾ ಅವಮಾನಕರವಾಗಿತ್ತು. ಸಬ್ರಿಯಾದ ಸರಕಾರದ ಮಧ್ಯಸ್ಥಿಕೆಯಿಂದ 300 ಶಾಂತಿಪಾಲಕರಲ್ಲಿ ಸುಮಾರು 150 ಸೈನಿಕರನ್ನು ಬಿಡುಗಡೆ ಮಾಡಲಾಗಿದೆ. ಉಳಿದವರ ಬಿಡುಗಡೆಗೆ ಸಬ್ರಿಯಾದ ಸೋಶಲಿಸ್ಟ್ ಸರಕಾರ ಪ್ರಯತ್ನಿಸುತ್ತಿದೆ. ಆಗಲೆ ತೀರಾ ಅವಮಾನಿತರಾದ ವಿಶ್ವ ಸಂಸ್ಥೆ ಹಾಗೂ ನಾಟೋ ಶಾಂತಿಪಾಲಕರ ರಕ್ಷಣೆಗೆ ಭಾರಿ ಪಡೆಗಳನ್ನು ಕಳಿಸುವ ನಿರ್ಧಾರ ಮಾಡಿದೆ. ಆದರೆ ಯಾರು ಎಷ್ಟು ಪಡೆಗಳನ್ನು ಕಳಿಸಬೇಕು ಎಂಬ ಪ್ರಶ್ನೆ ಬಂದಾಗ ವಿಸ್ವ ಸಂಸ್ಥೆಯ ಗುತ್ತೆ ಪಡೆದಂತೆ ವರ್ತಿಸುತ್ತಿರುವ ಈ ದೇಶಗಳ ನಡೆ ತೀರಾ ಹಾಸ್ಯಾಸ್ಪದವಾಗಿತ್ತು. ಯಾವ ದೇಶವೂ ಆರಂಭದಲ್ಲಿ ಭೂ ಪಡೆಗಳನ್ನು ಕಳಿಸಲು ತಯಾರಿರಲಿಲ್ಲ. ಕೊನೆಗೆ ಬ್ರಿಟನ್ ಹಾಗೂ ಫ್ರಾನ್ಸ್ ಇದಕ್ಕೆ ಸಿದ್ಧವಾಗಿವೆ. ಅಮೇರಿಕಾ ಕೆನಡಾ ಮುಂತಾದವುಗಳು ವಿಮಾನ ಪಡೆ, ಇತರ ಯುದ್ಧೋಪಕರಣಗಳನ್ನು ಕೊಡಲು ಮುಂದೆ ಬಂದಿದೆ. ಬ್ರಿಟನ್, ಫ್ರಾನ್ಸ್ ಮುಂದೆ ಬರಲು ಕಾರಣವೇನೆಂದರೆ ಬಂದಿಯಾಗಿರುವ ಸೈನಿಕರಲ್ಲಿ ಹೆಚ್ಚಿನವರು ಈ ದೇಶಕ್ಕೆ ಸೇರಿದವರು.

ಆದ್ದರಿಂದ ವಿಶ್ವಸಂಸ್ಥೆಯ(ಅಥವಾ ನಾಟೋ ಎನ್ನೋಣವೇ ?) ಈ ಹೊಸ ಕ್ರಮ ಶಾಂತಿಪಾಲಕರ ರಕ್ಷಣೆಗೆ ಬೋಸ್ನಿಯಾದಲ್ಲಿ ಶಾಂತಿಪಾಲನೆಗಲ್ಲ. ಸೋಶಲಿಸ್ಟ್ ಯುಗೋಸ್ಲಾವಿಯಾವನ್ನು ಒಡೆಯಲು ಸಾಮ್ರಾಜ್ಯಶಾಹಿ ದೇಶಗಳೇ ಕುಮ್ಮಕ್ಕು ಕೊಟ್ಟು ಬಳಸಿದ ಅಂಥ ರಾಷ್ಟ್ರೀಯತಾವಾದಿ ಕಿತ್ತಾಟಗಳೇ ಇಂದಿನ ದುರಂತಕ್ಕೆ ಮೂಲ ಕಾರಣ. ವಿಶ್ವಸಂಸ್ಥೆಯಿಂದ ಶಾಂತಿಪಾಲನೆ ಹೆಸರಿನಲ್ಲಿ ಮಿಲಿಟರಿ ಮಧ್ಯಪ್ರವೇಶ ಮಾಡಿದಾಗ, ಸಾಮ್ರಾಜ್ಯಶಾಹಿ ದೇಶಗಳಿಗೆ ಶಾಂತಿ ತರುವುದು ಉದ್ದೇಶವಾಗಿರಲಿಲ್ಲ, ಉರಿಯುತ್ತಿರುವ ಯುಗೋಸ್ಲಾವಿಯಾದಲ್ಲಿ ತಮ್ಮ ಬೇಳೆ ಬೇಯಿಸಿ ಕೊಳ್ಳುವುದಾಗಿತ್ತು. ಜರ್ಮನಿಯಂತೂ ಕೆಲವು ಪ್ರಾಂತ್ಯಗಳನ್ನು ಜರ್ಮನಿಯ ಹಿತ್ತಲು ಮಾಡುವ ಹವಣಿಕೆಯಲ್ಲಿತ್ತು. ಇಂತಹ ಧೋರಣೆ ಶಾಂತಿಪಾಲನೆಯ ನಾಟಕ ಎಷ್ಟು ದಿನ ನಡೆದೀತು? ಬ್ರಿಟಿಷ್-ಫ್ರೆಂಚ್ ಪಡೆಗಳ ಆಗಮನ, ವಿಶ್ವ ಸಂಸ್ಥೆ ಶಾಂತಿಪಾಲನಾ ಪಡೆಯ ಪೂರ್ಣ ನಿರ್ಗಮನಕ್ಕೆ ನಾಂದಿ ಇರಬಹುದು. ಈ ಪಡೆಗಳು ತಮ್ಮನ್ನು ರಕ್ಷಿಸಿಕೊಂಡದ್ದು ವಿನಃ ಶಾಂತಿಗೆ ಏನೂ ಮಾಡಿಲ್ಲ. ಆಗಾಗ ಈ ರೀತಿಯ ಅವಮಾನ ಸಹಿಸುವುದು ಅಥವಾ ಸೋಮಾಲಿಯಾದಂತೆ ಮಧ್ಯಪ್ರವೇಶ ಮಾಡಲು ಹೋಗಿ ಅದರಲ್ಲಿ ಸಿಕ್ಕಿಹಾಕಿಕೊಳ್ಳುವುದು ಇದು ಬಿಟ್ಟರೆ ಕೊನೆಯ ಮಾರ್ಗವೆಂದರೆ ಮರ್ಯಾದೆಯಿಂದ ಜಾಗ ಖಾಲಿ ಮಾಡುವುದು. ಇದರಿಂದ ಸಾಮ್ರಾಜ್ಯಶಾಹಿ ಒತ್ತೆಯಾಳಾಗಿ ವಿಶ್ವ ಸಂಸ್ಥೆ ತನ್ನ 'ಶಾಂತಿಪಾಲಕ ಪಾತ್ರ'ದ ಬಗ್ಗೆ ತೀವ್ರವಾಗಿ ಪುನರಾಲೋಚನೆ ಮಾಡುವ ಸಂದರ್ಭ ಒದಗಿ ಬಂದೀತೇ?

ಬ್ರೆಜಿಲ್‌ನಲ್ಲಿ 'ತೈಲ ನಮ್ಮದು' ಕಾರ್ಮಿಕರ ಚಳುವಳಿ

ಬ್ರಿಜಿಲ್‌ನ ಅಧ್ಯಕ್ಷ ಫರ್ನಾಂಡೋ ಕಾರ್ಡೋಸೊರವರ ಐಎಂಎಫ್ ಆಧಾರಿತ ಆರ್ಥಿಕ ನೀತಿಗೆ ಸರಕಾರಿ ತೈಲ ಕಂಪನಿ ಪೆಟ್ರೋಬ್ರಾಸ್‌ನ ಕಾರ್ಮಿಕರು ತೀವ್ರ ಪ್ರತಿರೋಧ ಒಡ್ಡಿದ್ದಾರೆ. ಪೆಟ್ರೋಬ್ರಾಸ್‌ನ 47,500 ಕಾರ್ಮಿಕರು ತೈಲ ಕ್ಷೇತ್ರದಲ್ಲಿ ವಿದೇಶೀ ಕಂಪನಿಗಲಿಗೆ ಅವಕಾಶ ಕೊಡುವ ಅಧ್ಯಕ್ಷರ ಕ್ರಮವನ್ನು ವಿರೋಧಿಸಿ ಅನಿರ್ದಿಷ್ಟ ಮುಷ್ಕರಹೂಡಿದ್ದಾರೆ. ಮುಷ್ಕರ ಮೂರು ವಾರಗಳಿಗಿಂತ ಹೆಚ್ಚಿಗೆ ನಡೆದಿದ್ದು, ತೀವ್ರ ಆರ್ಥಿಕ ರಾಜಕೀಯ ಬಿಕ್ಕಟ್ಟಿಗೆ ಕಾರಣವಾಗಿದೆ. 1953ರಲ್ಲಿ ಪೆಟ್ರೋಬ್ರಾಸ್ ಸ್ಥಾಪಿತವಾದದ್ದು, ಒಂದು ಭಾರೀ ಚಳುವಳಿಯ ಫಲವಾಗಿ ಸುಮಾರು ಐವತ್ತು ವರ್ಷಗಳ ಹಿಂದೆ ಆರಂಭವಾದ ಈ ಚಳುವಳಿ ಬ್ರಿಜಿಲ್ ತೈಲವನ್ನು ತಮ್ಮ ಸೊತ್ತಾಗಿಸಿದ್ದ ಅಮೇರಿಕಾದ ಬಹುರಾಷ್ಟ್ರೀಯ ಕಂಪನಿಗಳನ್ನು ಓಡಿಸಿ, ರಾಷ್ಟ್ರೀಕರಿಸುವ ಒತ್ತಾಯ ಮಾಡಿತ್ತು. ತಮಾಷೆಯೆಂದರೆ ಈಗಿನ ಅಧ್ಯಕ್ಷ ಕಾರ್ಡೋಸ್‌ರವರ ತಂದೆ ಈ ಚಳುವಳಿಯ ನಾಯಕರಾಗಿದ್ದರು. ಆ ಚಳುವಳಿಯ ಹೆಸರು 'ತೈಲ ನಮ್ಮದು' ಎಂದಾಗಿತ್ತು. ಈ ಚಳುವಳಿಯ ಫಲವಾಗಿ 1953ರಲ್ಲಿ ಪೆಟ್ರೋಬ್ರಾಸ್ ದೇಶದ ತೈಲ ನಿಕ್ಷೇಪ ಪತ್ತೆ, ತೆಗೆಯುವುದು ಹಾಗೂ ಸಂಸ್ಕರಣದ ಜವಾಬ್ದಾರಿ ಹಾಗೂ ಹಕ್ಕು ಹೊಂದಿದೆ. ಇದನ್ನು ಸಂವಿಧಾನದಲ್ಲಿ ಸೇರಿಸಲಾಗಿದೆ. ಅಧ್ಯಕ್ಷರ ಪ್ರಸ್ತಾಪದ ಪ್ರಕಾರ ಪೆಟ್ರೋಬಾಸ್‌ನ ಖಾಸಗೀಕರಣ ವಿದೇಶೀ ಕಂಪನಿಗಳಿಗೆ ಅವಕಾಶ ಕೊಡಬೇಕಾದರೆ ಸಂವಿಧಾನ ತಿದ್ದುಪಡಿಯನ್ನು ಪಾರ್ಲಿಮೆಂಟು ಮಂಜೂರು ಮಾಡಬೇಕು. ಇದೇ ರೀತಿ ವಿದ್ಯುತ್, ಟೆಲಿ ಸಂಪರ್ಕಗಳನ್ನು ಖಾಸಗೀಕರಿಸುವ, ವಿದೇಶೀ ಕಂಪನಿಗಲಿಗೆ ತೆರೆಯುವ ಅಧ್ಯಕ್ಷರ ಪ್ರಸ್ತಾಪಗಳಿಗೆ ತೀವ್ರ ವಿರೋಧವಿದೆ. ಅತ್ಯಂತ ಪ್ರಬಲ ಟ್ರೇಡ್ ಯೂನಿಯನ್ ಹೊಂದಿರುವ ತೈಲ ಕಾರ್ಮಿಕರ ಮುಷ್ಕರ ಅಧ್ಯಕ್ಷರ ಪ್ರಸ್ತಾಪಗಳ ಹಣೆಬರಹ ನಿರ್ಧರಿಸಲಿದೆ.

ಲೋಕ ಸಂಚಾರ

ಶರತ್ಚಂದ್ರ

ಚರಾರ್-ಎ-ಫರೀಫ್ ವರದಿಯಲ್ಲಿ ಬಿಬಿಸಿ ಕಿಡಿಗೇಡಿತನ - ಕ್ಷಮಾಪಣೆ

ಚರಾರ್-ಎ-ಫರೀಫ್ ಪೂಜಾಸ್ಥಾನವನ್ನು ಸುಟ್ಟ ಬಗ್ಗೆ ತನ್ನ ವರದಿ ತಪ್ಪು ಅಭಿಪ್ರಾಯ ನೀಡುವಂತಾಗಿತ್ತು ಎಂದು ಒಪ್ಪಿಕೊಂಡು, ಬಿಬಿಸಿ ಕ್ಷಮಾಪಣೆ ಕೋರಿದೆ. ಬಿಬಿಸಿ ವರದಿಯಲ್ಲಿ ಚರಾರ್-ಎ-ಫರೀಫ್‌ನ್ನು ಭಾರತೀಯ ಸೇನಾ ಪಡೆಗಳು ಪ್ರವೇಶಿಸಿ ಸುಟ್ಟು ಹಾಕಿದವು ಎಂದು ಹೇಳಿ, ರಶ್ಯನ್ ಪಡೆಗಳು ಚೆಚೆನ್ಯಾದಲ್ಲಿ ತೊಡಗಿರುವ ಘರ್ಷಣೆಯ ದೃಶ್ಯ ತೋರಿಸಲಾಗಿತ್ತು. ಇದು 'ಕಣ್ತಪ್ಪಿ'ನಿಂದ ಆದ ದೋಷ ಎಂದು ಬಿಬಿಸಿ ತನ್ನ ಕ್ಷಮಾಪಣೆಯಲ್ಲಿ ಹೇಳಿ, ಇದು ನೋಡುಗರಿಗೆ ಆಘಾತವುಂಟು ಮಾಡಿದ್ದರೆ ಕ್ಷಮಾಪಣೆ ಕೇಳಿದೆ. ಆದರೆ ಬಿಬಿಸಿ ಭಾರತ ಸರಕಾರಕ್ಕೆ ಅಧಿಕೃತವಾಗಿ ಈ ಕ್ಷಮಾಪಣೆ ಕಳಿಸಿಲ್ಲ, ಈ ಬಗ್ಗೆ ಕೇಳಿದಾಗ ಭಾರತ ಸರಕಾರ ಅಧಿಕೃತ ದೂರು ಬಂದಿಲ್ಲ ಎಂದು ಹೇಳಿದೆ.

ಆದರೆ ಭಾರತ ಸರಕಾರದ ಗೃಹಖಾತೆಯ ಕಾರ್ಯದರ್ಶಿಗಳು ಬಿಬಿಸಿ ವರದಿಯಲ್ಲಿ ತಪ್ಪುಗಳನ್ನು ಭಾರತದಲ್ಲಿ ಬಿಬಿಸಿಯ ಪ್ರತಿನಿಧಿಗೆ ತಿಳಿಸಿ, ಈ ಬಗ್ಗೆ ಗೃಹಖಾತೆಯ ಹೇಳಿಕೆ ಬಿಬಿಸಿಯಲ್ಲಿ ಬಿತ್ತರಿಸಲು ಹೇಳಿದ್ದರಿಂದ ಬಿಬಿಸಿ ಕ್ಷಮಾಪಣೆ ಕೇಳಬೇಕಾಗಿ ಬಂತು ಎಂದು ಹೇಳಲಾಗಿದೆ. ಕಾಶ್ಮೀರದ ಬಗ್ಗೆ ಬಿಬಿಸಿಯ ವರದಿಯಲ್ಲಿ ತಪ್ಪುಗಳನ್ನು ಮಾಡುತ್ತಿರುವ ಬಗ್ಗೆ ಗೃಹಖಾತೆ ಪ್ರತಿನಿಧಿಯ ಗಮನಕ್ಕೆ ತಂದಿತ್ತು. ಹಜರತ್ ಬಲ್ ಬಿಕ್ಕಟ್ಟಿನಲ್ಲಿ, ಬಿಬಿಸಿ ಭಾರತದ ಪಡೆಗಳು ಪೂಜಾಸ್ಥಳದೊಳಗೆ ನುಗ್ಗಿವೆ ಎಂದು ತಪ್ಪು ವರದಿ ಮಾಡಿತ್ತು.

ಹಿಂದೆ ಎಷ್ಟೋ ಬಾರಿ ಈ ತರಹದ 'ಕಣ್ತಪ್ಪಿ'ನಿಂದ ಮಾಡುವ ತಪ್ಪು ವರದಿ ಬಿಬಿಸಿಗೆ ಅಭ್ಯಾಸವಾಗಿ ಹೋಗಿದೆ. ಇಂತಹ ತಪ್ಪು ವರದಿ ಸಾಮ್ರಾಜ್ಯಶಾಹಿ ಮಾಧ್ಯಮಕ್ಕೆ ಮಾಮೂಲು. ಈ 'ಕಿಡಿಗೇಡಿತನ'ಕ್ಕೆ ಕಡಿವಾಣ ಹಾಕುವ ಬದಲು ಉಪಗ್ರಹ ಟೀವಿ ಚಾನಲ್‌ಗಳಿಗೆ ವಿಸ್ತರಿಸಲು ಎಲ್ಲಾ ಅವಕಾಶಗಳನ್ನು ಆದೇ ಸರಕಾರ ಮಾಡಿಕೊಡುತ್ತಿದೆ.

ಸಿಐಟಿಯು ಮಾರ್ಗದಲ್ಲಿ ಸಾಗುವುದು ಹೇಗೆ?

ಪುಟ 5 ರಿಂದ

ಯೂನಿಯನ್ ಒಂದು ನಿಜವಾದ ಜೀವಂತ ಸಂಗತಿಯಾಗಬೇಕು. ನನ್ನನ್ನು ಕೋಟೆ ಇಲ್ಲಿದೆಯೆಂದು ಪ್ರತಿಯೊಬ್ಬ ಕಾರ್ಮಿಕ ಭಾವಿಸುವಂತಾಗಬೇಕೇ ಹೊರತು ಮುಂದಾಳುವಿನ ಕೋಟೆ, ಆತನ ಮನೆ ಎಂದಲ್ಲ, ಇದು ನಮ್ಮ ದಾರಿಯಾಗಬೇಕು(ಚಪ್ಪಾಳೆ) ಇಲ್ಲವಾದರೆ ನಮಗೂ ಸುಧಾರಣಾವಾದಿಗಳಿಗೂ ವ್ಯತ್ಯಾಸವೇ ಇಲ್ಲ......

"..... ನಾವು ಯೂನಿಯನ್ ಗಳಲ್ಲಿ ಪ್ರಜಾಪ್ರಭುತ್ವ ಕಾರ್ಯವಿಧಾನ ಇರಬೇಕು ಎನ್ನುತ್ತೇವೆ - ಮುಷ್ಕರದಲ್ಲೂ, ಎಲ್ಲೆಲ್ಲೂ, ಏಕೆಂದರೆ ನಾವು ಕಾರ್ಮಿಕರನ್ನು ಸರ್ವಸಾಮಾನ್ಯ ಹೋರಾಟಗಳಿಗೆ ತರಬಯಸುವುದು ಕೇವಲ ಪ್ರೇಕ್ಷಕರಾಗಿಯಲ್ಲ, ಸಕ್ರಿಯವಾಗಿ ಭಾಗವಹಿಸುವುದಕ್ಕಾಗಿ, ಸಕ್ರಿಯ ಮುಖಂಡರಾಗಿ ತರಬಯಸುತ್ತೇವೆ. ಆಗ ಮಾತ್ರವೇ ಕಾರ್ಮಿಕ ಆಂದೋಲನದ ಮೇಲಿರುವ ಸುಧಾರಣಾವಾದಿ ಹಾಗೂ ಪರಿಷ್ಕರಣವಾದಿ ಸಿದ್ಧಾಂತದ ಹಿಡಿತವನ್ನು ಮುರಿಯಬಹುದು" ಎಂದಿದ್ದರು ಬಿಟಿಆರ್.

ಸಂಘಟನೆಯ ಆಚರಣೆ

ಪ್ರಜಾಪ್ರಭುತ್ವ ಕಾರ್ಯವಿಧಾನದಿಂದ ಕಾರ್ಮಿಕರು ಮುಖಂಡರಾಗಿ ಬೆಳೆಯುವಂತಾಗಬೇಕು. ಒಂದು ಸರಿಯಾದ ಸಂಘಟನಾ ಆಚರಣೆಯಿಂದ ಮಾತ್ರವೇ ಇದು ಸಾಧ್ಯ. ಅದೇ ಸಿಐಟಿಯು ಸ್ಥಾಪನಾ ಸಮ್ಮೇಳನದ ಸಮಾರೋಪ ಭಾಷಣದಲ್ಲಿ ಬಿಟಿಆರ್ ಹೇಳಿದ ಮಾತುಗಳಿಗೆ ಮತ್ತೊಮ್ಮೆ ಕಿವಿಗೊಡೋಣ - "ನಮ್ಮ ಸತತ ರಾಜಕೀಯ ಮತ್ತು ಕಾರ್ಮಿಕ ಸಂಘದ ಕೆಲಸ, ಸಾಮಾನ್ಯವಾಗಿ ಕಾರ್ಖಾನೆಯ ಹೊರಗೆ ನಡೆಯುತ್ತದೆ. ಕಾರ್ಮಿಕ ಸಂಘದ ಕೆಲಸದ ಭಾಗವಾದ ರಾಜಕೀಯ ಕೆಲಸ, ಕಾರ್ಖಾನೆಯೊಳಗಿನ ನಿರಂತರ ಕೆಲಸ ಕೆಲವೆಡೆ ಮಾತ್ರ ಕಾರ್ಖಾನೆಯೊಳಗೆ ನಡೆಯುತ್ತಿದೆ. ಆದರೆ ಅದು ಅಪರೂಪ. ಇದರ ಅರ್ಥ ಏನು? ಏಕೆ ಎಲ್ಲೆಡೆಯೂ ಕಾರ್ಮಿಕ ಸಂಘದ ರಾಜಕೀಯ, ಆರ್ಥಿಕ ಕೆಲಸಕ್ಕೆ ಮೂಲ ಅಂಶ ಕಾರ್ಖಾನೆಯೇ ಎಂಬುದನ್ನು ಎಲ್ಲೆಡೆ ಕ್ರಾಂತಿಕಾರಿ ಅನುಭವ ಒತ್ತಿ ಹೇಳುತ್ತದೆ? ಏಕೆಂದರೆ ಕಾರ್ಮಿಕ ಸಂಘಕ್ಕೆ ಸೇರಿದ, ಹಿಂದುಳಿದ ಕಾರ್ಮಿಕನನ್ನು, ಕಾರ್ಮಿಕ ಸಂಘದ ವಂತಿಗೆಯನ್ನು ಕೊಡದ ಕಾರ್ಮಿಕನನ್ನು ನೀವು ಹಿಡಿಯಲು ಸಾಧ್ಯವಾಗುವುದು ಕಾರ್ಖಾನೆಯಲ್ಲಿ ಮಾತ್ರ. ಆತನೊಂದಿಗೆ ಸಂಯುಕ್ತರಂಗ ಸಾಧಿಸಬೇಕಾದರೆ, ಅತ್ಯಂತ ಹಿಂದುಳಿದ ಕಾರ್ಮಿಕರೊಂದಿಗೆ ಸಂಯುಕ್ತ ರಂಗ ಮಾಡಿಕೊಳ್ಳಬೇಕಾದರೆ ಆತ ಎಲ್ಲಿ ಸಿಗುತ್ತಾನೋ ಅಲ್ಲಿ ಹಿಡಿಯಬೇಕು. ಆತ ನಿಮ್ಮ ಕಾರ್ಖಾನೆಯ ಗೇಟ್ ಮೀಟಿಂಗ್‌ಗೂ ಬರುವುದಿಲ್ಲ. ನಿಮ್ಮ ಬೀದಿ ಸಭೆಗಳಿಗೂ ಬರುವುದಿಲ್ಲ. ಆದರೆ ಬಂಡವಾಳಶಾಹಿ ಆತನನ್ನು ಕಾರ್ಖಾನೆಯ ಒಳಗೇ ತರುವುದರಿಂದ ನಾವು ಆತನನ್ನು ಅಲ್ಲೇ ಹಿಡಿಯಬೇಕು. ಕಾರ್ಮಿಕ ಸಂಘಕ್ಕೆ ಸೇರಿದ ಕಾರ್ಮಿಕರೊಂದಿಗೆ ಸಂಯುಕ್ತ ರಂಗದ ವಿಧಾನಗಳಿವು. ಇವುಗಳ ಮೂಲಕ ನಾವು ಐಕ್ಯತೆಯನ್ನು ಕಟ್ಟಬೇಕು, ಬೆಸೆಯಬೇಕು. ಕಾರ್ಖಾನೆಯೊಳಗೆ ಮೂರು ಯೂನಿಯನ್ ಗಳಿರಬಹುದು, ಹಲವು ಯೂನಿಯನ್‌ಗಳಿರಬಹುದು. ಆದರೆ ಕೆಳಗಿನಿಂದ ಐಕ್ಯತೆ ಬೆಸೆಯುವುದು, ಕಾರ್ಖಾನೆಯ ಆಧಾರದಲ್ಲಿ ಮಾತ್ರ ಸಾಧ್ಯ. ಆಗ ಮೇಲಿನ ಮುಖಂಡರ ಪ್ರತಿರೋಧ ಕುಸಿದು ಬೀಳುತ್ತದೆ. ಆದ್ದರಿಂದಲೇ ಈಗಿನ ಅವಧಿಯಲ್ಲಿ ಹಳೆಯ ಕಾರ್ಯವಿಧಾನಗಳನ್ನೆಲ್ಲಾ ಬದಲಿಸದೆ, ಮೂಲಭೂತ ಕಾರ್ಮಿಕ ವರ್ಗದ ಕಾರ್ಯವಿಧಾನಗಳಿಗೆ, ಪ್ರಜಾಪ್ರಭುತ್ವ ಕಾರ್ಯವಿಧಾನಗಳಿಗೆ ಬರದೆ ಕಾರ್ಮಿಕರನ್ನು ಒಂದುಗೂಡಿಸಲು ಸಾಧ್ಯವಿಲ್ಲ, ವ್ಯಾಪಕ ಪ್ರತಿರೋಧ ಸಂಘಟಿಸಲು ಸಾಧ್ಯವಿಲ್ಲ ಎಂದು ನಾವು ಹೇಳುತ್ತೇವೆ. ಒಳ್ಳೆಯ ದಾರಿ ಹಿಡಿಯಬೇಕೆನ್ನುವಾಗ ಒಳ್ಳೆಯ ಉದ್ದೇಶವಿದ್ದರಷ್ಟೇ ಸಾಲದು. ಸರಿಯಾದ ಸಂಘಟನಾ ಕಾರ್ಯ ವಿಧಾನ ಇರುವುದೂ ಅತ್ಯಗತ್ಯ. ಆಗ ಮಾತ್ರ ಒಳ್ಳೆಯ ದಾರಿಯಿಂದ ಒಳ್ಳೆಯ ಫಲಿತಾಂಶ ಸಿಗಬಲ್ಲದು(ಐಕ್ಯತೆ ಮತ್ತು ಹೋರಾಟದತ್ತ ಮುನ್ನಡೆಯಿರಿ - ಮೇ 28-30, 1970ರಲ್ಲಿ ಕಲ್ಕತ್ತೆಯಲ್ಲಿ ನಡೆದ ಅಖಿಲ ಭಾರತ ಕಾರ್ಮಿಕ ಸಂಘ ಸಮ್ಮೇಳನದ ಕಲಾಪಗಳು ಮತ್ತು ದಸ್ತಾವೇಜುಗಳು - ಸಿಐಟಿಯು ವಿನ ಈ ಪ್ರಕಟಣೆಯ ಪುಟ 151-192ರಲ್ಲಿ ಆಯ್ದ ಭಾಗಗಳಿಂದ)

ನಮ್ಮ ನಿಲುವು ಅಥವಾ ಮಾರ್ಗ ಮತ್ತು ಆಚರಣೆ ಎರಡೂ ಸರಿಯಾಗಿರಬೇಕೆಂದು ಬಿಟಿಆರ್‌ರವರ ಈ ಭಾಷಣದಿಂದ ಸ್ಪಷ್ಟವಾಗುತ್ತದೆ.

ಆದ್ದರಿಂದ ನಾವು ಈ ಮಾರ್ಗಕ್ಕೆ ನಮ್ಮನ್ನು ಮತ್ತೆ ಸಮರ್ಪಿಸಿಕೊಂಡು ಹಿಂದಿನ ವರ್ಷಗಳಲ್ಲಿ ವಿಕಾಸಗೊಳಿಸಿದ ಸಿಐಟಿಯು ಮಾರ್ಗವನ್ನು ಅನುಷ್ಠಾನಕ್ಕೆ ತರಲು, ಸರಿಯಾದ ರೀತಿಯಲ್ಲಿ ಆಚರಣೆಗೆ ತರಲು ಹೋರಾಟ ನಡೆಸಬೇಕು. ನಮ್ಮನ್ನು ಇದಕ್ಕೆ ಸಮರ್ಪಿಸಿಕೊಳ್ಳಬೇಕು. ಇದು ಸಿಐಟಿಯು ಮಾರ್ಗದ ಅನುಷ್ಠಾನದ ಹೋರಾಟ ಕೆಳಗಿನ ಹಂತದವರೆಗೆ ಒಯ್ಯುವ ಸಂದೇಶವಾಗಲಿ. ಇದರಿಂದ ಮಾತ್ರವೇ ಸಿಐಟಿಯು ಚೈತನ್ಯಶಾಲಿಯಾಗಿ ಮುನ್ನಡೆದು ತನ್ನ ಗುರಿ ಸಾಧಿಸಿಕೊಳ್ಳುವುದು ಸಾಧ್ಯ.

KRNM/BGS-405 MAG (2) PRB DECR 319-78/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ವಿ.ರಾಮಚಂದ್ರರಾವ್. ಸಂಪಾದಕರು: ವಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462 ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

ಜೂನ್ 24ರ ದಿಲ್ಲಿ ಕಾರ್ಮಿಕರ ಪ್ರತಿಭಟನೆಗೆ ಕರ್ನಾಟಕ ಸಿಐಟಿಯು ಬೆಂಬಲ

ದೆಹಲಿ ರಾಜ್ಯದ ಕಾರ್ಮಿಕರಿಗೆ ಅನ್ವಯವಾಗುವ ಕನಿಷ್ಟ ಕೂಲಿ ತಿಂಗಳಿಗೆ ರೂ. 1547/- ಆಗಿರಬೇಕಾದಾಗ ಅಲ್ಲಿನ ಬಿಜೆಪಿ ಮುಖ್ಯಮಂತ್ರಿಗಳು ಆದೇಶ ನೀಡಿ ತುಟ್ಟಿಭತ್ತೆಯ ಹೆಚ್ಚಳವನ್ನು ರೂ. 52ರಷ್ಟು ಕಡಿಮೆ ಮಾಡಿ ತಿಂಗಳ ವೇತನವನ್ನು ರೂ. 1495 ಇಳಿಸಿದ್ದಾರೆ. ಇದನ್ನು ಪ್ರತಿಭಟಿಸುವುದಲ್ಲದೆ ಕನಿಷ್ಟ ವೇತನ ತಿಂಗಳಿಗೆ ರೂ. 1750/- ಆಗಬೇಕೆಂದು ದೆಹಲಿ, ಹರಿಯಾಣ, ಉತ್ತರ ಪ್ರದೇಶದ ಸಿಐಟಿಯು ಸಮಿತಿಗಳು ನಿರ್ಧಾರ ತೆಗೆದುಕೊಂಡಿವೆ. ಈ ರಾಜ್ಯಗಳ ಕಾರ್ಮಿಕರ ಸಂಘಟಿತ ಮುಷ್ಕರ ಜೂನ್ ೨೪ರಿಂದ ನಡೆಯಲಿದೆ. ಆ ದಿನ ಕರ್ನಾಟಕದ ಕಾರ್ಮಿಕರು ಮತ ಪ್ರದರ್ಶನ, ಪತ್ರಿಕಾ ಹೇಳಿಕೆ, ಕರಪತ್ರ ಹೊರಡಿಸುವುದು ಮತ್ತು ಆ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಟೆಲಿಗ್ರಾಂ ಕಳಿಸುವ ಮೂಲಕ ಈ ಹೋರಾಟವನ್ನು ಬೆಂಬಲಿಸಬೇಕೆಂದು ಸಿಐಟಿಯು ಪದಾಧಿಕಾರಿಗಳ ಸಭೆ ಕರೆ ನೀಡಿದೆ.

ಜುಲೈ 5ರ ಬೇಡಿಕೆ ದಿನಾಚರಣೆ

ಸಿಐಟಿಯು ಅಖಿಲ ಭಾರತ ಜನರಲ್ ಕೌನ್ಸಿಲ್ ದೇಶದ ಕಾರ್ಮಿಕ ವರ್ಗ ತುರ್ತಾಗಿ ಎದುರಿಸಬೇಕಾದ ಸಮಸ್ಯೆಗಳ ಕುರಿತು ಚರ್ಚಿಸಿ ಬೋನಸ್ ಕಾಯ್ದೆಗೆ ಇರುವ ಎಲ್ಲಾ ಮಿತಿಗಳನ್ನು ರದ್ದುಗೊಳಿಸಬೇಕು, ಕೂಡಲೇ ಪೆನ್ಶನ್ ಪದ್ಧತಿ ಎಲ್ಲಾ ಕಾರ್ಮಿಕರಿಗೂ ಜಾರಿ ಮಾಡಬೇಕು, ಜೀವನಾವಶ್ಯಕ ಮಟ್ಟದ ಕನಿಷ್ಟ ಕೂಲಿ ಎಲ್ಲಾ ಕಾರ್ಮಿಕರಿಗೂ ನೀಡಬೇಕು ಹಾಗೂ ಬೆಲೆ ಏರಿಕೆಗನುಗುಣವಾದ ತುಟ್ಟಿಭತ್ತೆ ಎಲ್ಲಾ ಕಾರ್ಮಿಕರಿಗೂ ನೀಡಬೇಕು ಎಂಬ ಬೇಡಿಕೆಗಳನ್ನು ಒತ್ತಾಯಿಸಿ ಅಖಿಲ ಭಾರತ ಮಟ್ಟದಲ್ಲಿ ಜುಲೈ 5ರಂದು ಬೇಡಿಕೆ ದಿನ ಆಚರಿಸಲು ಕರೆ ನೀಡಿದೆ.

ಈ ಬೇಡಿಕೆಗಳ ಈಡೇರಿಕೆಗಾಗಿ ಕೇಂದ್ರ ಸರಕಾರವನ್ನು ಮತ್ತು ರಾಜ್ಯ ಸರಕಾರವನ್ನು ಒತ್ತಾಯಿಸಲು ಸಂಘಟಿತ ಮತ್ತು ಅಸಂಘಟಿತ ವಲಯದ ಎಲ್ಲಾ(ಸಿಐಟಿಯು ಸೇರ್ಪಡೆಯಾದ ಮತ್ತು ಸಿಐಟಿಯು ನಾಯಕತ್ವದಲ್ಲಿರುವ ಸಂಘಗಳ) ಕಾರ್ಮಿಕರ ಜಂಟಿ ಸಭೆ ಕರೆದು ವಿವರವಾದ ಕರಪತ್ರ ಹೊರಡಿಸಿ ಸಿದ್ಧತೆ ಮಾಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ನಿರ್ಧರಿಸಲಾಗಿದೆ.

ಹೊಸ ಆರ್ಥಿಕ ನೀತಿಯ ವಿರುದ್ಧ ಮತ್ತೊಂದು ಚಳುವಳಿ

ಈ ವಿಷಯದ ಕುರಿತು ಸೂಕ್ತ ತೀರ್ಮಾನ ತೆಗೆದುಕೊಳ್ಳಲು ಅಖಿಲ ಭಾರತ ಸಾಮೂಹಿಕ ಸಂಘಟನೆಗಳ ವೇದಿಕೆಯ ಅಖಿಲ ಭಾರತ ಸಮ್ಮೇಳನ ತಾ. 16.7.1995ರಂದು ನವದೆಹಲಿಯ ರಫಿ ಮಾರ್ಗದಲ್ಲಿರುವ ಮಾವಳಂಕರ್ ಸಭಾಂಗಣದಲ್ಲಿ ಸೇರಲಿದೆ. ಈ ಸಮಾವೇಶದಲ್ಲಿ ಕರ್ನಾಟಕ ರಾಜ್ಯದಿಂದ 15 ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಅಖಿಲ ಭಾರತ ಜವಳಿ ಕಾರ್ಮಿಕರ ಜಂಟಿ ಸಮಾವೇಶ

ಕಲ್ಕತೆಯಲ್ಲಿ ಜುಲೈ 21ರಂದು ನಡೆಯಲಿದೆ. ಭಾರತ ಸರಕಾರದ ಜವಳಿ ನೀತಿಯ ವಿರುದ್ಧ ಐಎನ್.ಟಿಯುಸಿ, ಎಐಟಿಯುಸಿ, ಸಿಐಟಿಯು, ಎಚ್.ಎಂ.ಎಸ್, ಬಿಎಂಎಸ್ ಮತ್ತು ಎನ್‌ಎಲ್‌ಒ ಒಟ್ಟಾಗಿ ನಡೆಸುವ ಈ ಅಖಿಲ ಭಾರತ ಸಮಾವೇಶದಲ್ಲಿ ಕರ್ನಾಟಕದ 15 ಸಿಐಟಿಯು ಸಂಗಾತಿಗಳು ಭಾಗವಹಿಸಲಿದ್ದಾರೆ.

ಜುಲೈ 27: ರಾಜ್ಯ ಸರಕಾರಿ ನೌಕರರ ಅಖಿಲ ಭಾರತ ಪ್ರತಿಭಟನಾ ದಿನಾಚರಣೆ

ಕೇಂದ್ರ ಸರಕಾರದ ಹೊಸ ಆರ್ಥಿಕ ಮತ್ತು ಕೈಗಾರಿಕಾ ನೀತಿಗಳನ್ನು ಪ್ರತಿಭಟಿಸಲು ಜುಲೈ 27 ರಂದು ದೇಶಾದ್ಯಂತ ಎಲ್ಲಾ ಹಂತಗಳಲ್ಲೂ ಸಭೆ ಮತ್ತು ಮತಪ್ರದರ್ಶನಗಳನ್ನು ನಡೆಸುವುದರ ಮೂಲಕ "ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟ ದೇಶದ 80 ಲಕ್ಷ ರಾಜ್ಯ ಸರಕಾರಿ ನೌಕರರು ಮತ್ತು ಶಿಕ್ಷಕರಿಗೆ ಕರೆ ನೀಡಿದೆ.

ಮೇ 21 ಮತ್ತು 22 ರಂದು ಪಾಟ್ನಾದಲ್ಲಿ ನಡೆದ ಒಕ್ಕೂಟದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಈ ತೀರ್ಮಾನವನ್ನು ಕೈಗೊಳ್ಳಲಾಯಿತು.

ಪ್ರತಿಭಟನಾ ದಿನಾಚರಣೆಯ ಪೂರ್ವಭಾವಿಯಾಗಿ ಜೂನ್ ತಿಂಗಳ ಮಧ್ಯಭಾಗದಿಂದ ಜುಲೈ ತಿಂಗಳ ಮಧ್ಯ ಭಾಗದವರೆಗೆ ಎಲ್ಲಾ ರಾಜ್ಯಗಳಲ್ಲೂ ರಾಜ್ಯ ಮಟ್ಟದ ಸಮಾವೇಶಗಳು/ವಿಚಾರ ಸಂಕಿರಣಗಳನ್ನು ಏರ್ಪಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಜೂನ್ 23: ಹೊಸ ಬಸ್ ಪಾಸ್ ವಿರುದ್ಧ ಪ್ರತಿಭಟನೆಗೆ ಕರೆ

ಕರ್ನಾಟಕ ರಾಜ್ಯ ಸರಕಾರವು ಈ ಶೈಕ್ಷಣಿಕ ವರ್ಷದಿಂದ ವಿದ್ಯಾರ್ಥಿಗಳಿಗೆ ನೀಡುವ ರಿಯಾಯಿತಿ ಬಸ್ ಪಾಸ್ ಪದ್ಧತಿಯಲ್ಲಿ ಬದಲಾವಣೆಯನ್ನು ತಂದು ದರದಲ್ಲಿ ದೊಡ್ಡ ರೀತಿಯ ಏರಿಕೆಯನ್ನು ಮಾಡಿದೆ.

ಈ ಶಿಕ್ಷಣ ವಿರೋಧಿ ನೀತಿಯ ವಿರುದ್ಧ ಕೆಎಸ್‌ಆರ್ ಟಿಸಿಯು ವಿದ್ಯಾರ್ಥಿಗಳಿಗೆ ನೀಡುವ ರಿಯಾಯಿತಿಯನ್ನು ಸರಕಾರವೇ ತುಂಬಿಕೊಡಬೇಕೆಂದು ಒತ್ತಾಯಿಸಿ ಹಾಗೂ ಇನ್ನಿತರ ಸ್ಥಳೀಯ ಸಮಸ್ಯೆಗಳ ಆಧಾರದಲ್ಲಿ ಜೂನ್ 23ರಂದು ರಾಜ್ಯಾದ್ಯಂತ ವ್ಯಾಪಕವಾಗಿ ತರಗತಿ ಬಹಿಷ್ಕಾರ, ಪ್ರತಿಭಟನಾ ಪ್ರದರ್ಶನ, ಮೆರವಣಿಗೆ, ಭೂತ ದಹನದಂತಹ ಪ್ರತಿಭಟನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಕೋಲಾರದಲ್ಲಿ ಜೂನ್ 12 ರಿಂದ 15ರವರೆಗೆ ನಡೆದ ಎಸ್‌ಎಫ್‌ಐನ ರಾಜ್ಯಮಟ್ಟದ ಶಿಬಿರವು ತೀರ್ಮಾನಿಸಿದೆ.

ಡಿ.ವೈ.ಎಫ್.ಐ.: ಧರಣಿ ಸತ್ಯಾಗ್ರಹ

ಗೌರಿಬಿದನೂರು: ಗೌರಿ ಬಿದನೂರು ತಾಲೂಕಿನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿ ಡಿ.ವೈ.ಎಫ್.ಐ. ಗೌರಿಬಿದನೂರು ತಾಲೂಕ ಸಮಿತಿಯ ಜೂನ್ ೮ ರಂದು ತಾಲೂಕು ಕಛೇರಿ ಎದುರು ಧರಣಿ ಸತ್ಯಾಗ್ರಹವನ್ನು ನಡೆಸಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಿ.ವೈ.ಎಫ್.ಐ. ತಾಲೂಕು ಸಮಿತಿ ಕಾರ್ಯದರ್ಶಿಯಾದ ಕಾಂ. ನಲ್ಲಪ್ಪನವರು ಭಾಗವಹಿಸಿದ್ದರು.

ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ವಿ. ಶ್ರೀನಿವಾಸಕರ್ಣರವರು ತಾಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದ್ದು ಸೂಕ್ತ ಕ್ರಮಕೈಗೊಳ್ಳಬೇಕೆಂದು ಒತ್ತಾಯಿಸಿದರೂ ಇನ್ನೂ ಹಲವು ತಾಲೂಕು ಸಮಸ್ಯೆಗಳನ್ನೊಳಗೊಂಡ ಮನವಿ ಪತ್ರವನ್ನು ಕಾಂ. ನಲ್ಲಪ್ಪನವರು ತಹಶೀಲ್ದಾರರಿಗೆ ಅರ್ಪಿಸಿದರು. ತಹಶೀಲ್ದಾರರು ಬೇಡಿಕೆಗಳನ್ನು ಪರಿಶೀಲಿಸಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರುವುದಾಗಿ ಭರವಸೆ ನೀಡಿದರು.

ಗ್ರಾಮಾಭಿವೃದ್ಧಿಗೆ ಒತ್ತಾಯ

ಉಳ್ಳಾಲ: ಉಳ್ಳಾಲ ಗ್ರಾಮದ ಅಭಿವೃದ್ಧಿ ಕಾರ್ಯಗಳನ್ನು ಒತ್ತಾಯಿಸಿ ಪ್ರಾದೇಶಿಕ ಶಾಖೆಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಪತ್ರಕೊಟ್ಟು ಚರ್ಚಿಸಿತು.

ಉಳ್ಳಾಲ ಗ್ರಾಮಕ್ಕೆ ಸಮರ್ಪಕ ನೀರಿನ ವ್ಯವಸ್ಥೆ ದಾರಿ ದೀಪದ ವ್ಯವಸ್ಥೆ, ರಸ್ತೆ ಕಾಮಗಾರಿಗಳ ನಿರ್ಮಾಣ ಹಾಗೂ ಇನ್ನೂ ಹಲವು ಅಭಿವೃದ್ಧಿ ಕಾರ್ಯಗಳಿಗೆ ಮನವಿ ಪತ್ರದಲ್ಲಿ ಒತ್ತಾಯಿಸಲಾಗಿದೆ.

ನಿಯೋಗದಲ್ಲಿ ಸಿಪಿಐ(ಎಂ) ಮುಖಂಡರುಗಳಾದ ಕಾಂ. ಜನಾರ್ಧನ ನಾಯಕ್, ರಾಜೀವ್ ಮಿಂಡನ್, ವಿಠಲ ಶ್ರೀಯಾನ್, ಫಾಲ್ ಡಿಸೋಜ ಮತ್ತು ಶ್ರೀನಿವಾಸ್ ಕಾಟಿಕಾಡು ಇದ್ದರು.

ಸೋಮೇಶ್ವರ

ಸೋಮೇಶ್ವರ ಗ್ರಾಮದ ಅಭಿವೃದ್ಧಿ ಕಾರ್ಯಗಳನ್ನು ಒತ್ತಾಯಿಸಿ ಸಿಪಿಐ(ಎಂ) ಸೋಮೇಶ್ವರ ಗ್ರಾಮ ಶಾಖೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಪತ್ರ ನೀಡಿ ಚರ್ಚಿಸಿತು.

ಸೋಮೇಶ್ವರ ಗ್ರಾಮವನ್ನು ಅಧಿಸೂಚಿತ ಪ್ರದೇಶ ಎಂದು ಘೋಷಿಸಿ, ಗ್ರಾಮದ ಅಭಿವೃದ್ಧಿ ಕಾರ್ಯಗಳನ್ನು ಅಧಿಕಾರಿಗಳು ಕೈ ಬಿಟ್ಟಿದ್ದಾರೆಂದು ಸಿಪಿಐ(ಎಂ) ಗ್ರಾಮ ಸಮಿತಿ ಮನವಿ ಪತ್ರದಲ್ಲಿ ಆಪಾದಿಸಿದೆ.

ಸಿಪಿಐ(ಎಂ) ಉಳ್ಳಾಲ ಘಟಕದ ಕಾರ್ಯದರ್ಶಿ ಕಾಂ.ರಾಮಚಂದ್ರ ಉಚ್ಚಿಲ್ ಸ್ಥಳೀಯ ಮುಖಂಡರುಗಳಾದ ಪಿ. ಪರಮೇಶ್ವರ ಶೆಟ್ಟಿ ಪಿ. ಗಂಗಯ್ಯ ಗಟ್ಟಿ ಮೊದಲಾದವರು ನಿಯೋಗದಲ್ಲಿದ್ದರು.

ರೇಶನ್ ಪದಾರ್ಥಗಳ ಬೆಲೆಯಲ್ಲಿ ಇಳಿಕೆಯಾಗಲೇ ಬೇಕು

ಪುಟ ಒಂದರಿಂದ

ರಾಜ್ಯಗಳಿಗೆ ಹೆಚ್ಚು ಆಹಾರ ಧಾನ್ಯಗಳ-ಸಕ್ಕರೆ ಒದಗಿಸಬೇಕೆಂಬ ಬೇಡಿಕೆಗಳಿಗೆ ಮಂಜೂರಾತಿ ಸಿಗಬೇಕಾದರೆ ವಿಶ್ವ ಬ್ಯಾಂಕ್ ಮತ್ತು ಐಎಂಎಫ್ ದೊರೆಗಳ ಒಪ್ಪಿಗೆ ಪಡೆಯಬೇಕಾಗಬಹುದಾದ್ದರಿಂದ ರಾಜ್ಯಗಳ ಬೇಡಿಕೆಗೆ ನೀರೆರಚಿದಂತಾದರೆ ಆಶ್ಚರ್ಯ ಪಡಬೇಕಾಗಿಲ್ಲ.

ಪಶ್ಚಿಮ ಬಂಗಾಳ, ಕರ್ನಾಟಕ, ಆಂಧ್ರ ಮೊದಲಾದ ರಾಜ್ಯಗಳು ಬಡವರಿಗೆ ಹಂಚಲು ಇನ್ನೂ ಹೆಚ್ಚು ಆಹಾರ ಧಾನ್ಯ-ಸಕ್ಕರೆ ಬೇಕೆಂಬ ಬೇಡಿಕೆಯನ್ನು ಮಂಡಿಸುತ್ತಲೇ ಬಂದಿವೆ. ಆದರೆ ಕೇಂದ್ರ ಸರಕಾರ ಅದರತ್ತ ಗಮನ ಹರಿಸಿಲ್ಲ.

ದೇಶದಲ್ಲಿ ಈಗ ಸಕ್ಕರೆ ಮತ್ತು ಆಹಾರ ಧಾನ್ಯದ ಕೊರತೆ ಎಂಬುದಿಲ್ಲವೆಂಬುದಕ್ಕೆ ಕೇಂದ್ರ ನಾಗರೀಕ ಪೂರೈಕೆ ಮಂತ್ರಿ ಬೂಟಾಸಿಂಗ್ ಅವರ ಹೇಳಿಕೆಯೇ ಸಾಕ್ಷಿಯಾಗಿದೆ. ಸರಕಾರದ ಹೇಳಿಕೆ ಪ್ರಕಾರ ಇತ್ತೀಚಿಗಿನ ಅಂದಾಜಿನಂತೆ ಸಕ್ಕರೆಯ ಉತ್ಪಾದನೆ 143 ಲಕ್ಷ ಟನ್ ಆಗಲಿದೆ: ಅಂದರೆ ಕಳೆದ ವರ್ಷಕ್ಕಿಂತ ಈ ವರ್ಷ 45 ಲಕ್ಷ ಟನ್ ಹೆಚ್ಚು ಸಕ್ಕರೆ ಲಭ್ಯವಾಗಲಿದೆ. ಹಾಗೆಯೇ ಆಹಾರ ಧಾನ್ಯಗಳ ಉತ್ಪಾದನೆ 186 ದಶಲಕ್ಷ ಟನ್‌ಗಳಷ್ಟಾಗಲಿದೆ. ಈಗ ಸರಕಾರ ಹತ್ತಿರ 30 ದಶಲಕ್ಷ ಟನ್ ಆಹಾರ ಧಾನ್ಯ ಇಲಿ ಹೆಗ್ಗಣಗಳಿಗೆ ಆಹಾರವಾಗುಳಿದಿದೆ.

1991-92ರಲ್ಲಿ ವಿತರಣೆ 18.72 ಮಿಲಿಯ ಟನ್, 16.99 ಮಿಲಿಯ ಟನ್ ರೈತರಿಂದ ವಸೂಲಿ, ಸರಕಾರದ ಗೋದಾಮುಗಳಲ್ಲಿ 13.91 ಮಿಲಿಯ ಟನ್ ಬಾಕಿ ಉಳಿದಿದೆ. 1992-93ರಲ್ಲಿ 16.72 ಮಿಲಿಯ ಟನ್ ವಿತರಣೆಗೆ, 18.18 ಮಿಲಿಯ ಟನ್ ಸರಕಾರಿ ಗೋದಾಮುಗಳಲ್ಲಿ, 1993-94ರಲ್ಲಿ ವಿತರಣೆಗೆ 14.74 ಮಿಲಿಯ ಟನ್. ರೈತರಿಂದ ವಸೂಲಿ 26.48 ಮಿಲಿಯ ಟನ್ 1994.95ರಲ್ಲಿ ವಿತರಣೆಗೆ 12.08 ಮಿಲಿಯ ಟನ್, ರೈತರಿಂದ ವಸೂಲಿ 21.54 ಮಿಲಿಯ ಟನ್. ಸರಕಾರಿ ಗೋದಾಮುಗಳಲ್ಲಿ 30.30 ಮಿಲಿಯ ಟನ್‌ಗಳು.

ಏಕೆ ಈ ಗೋಸುಂಬೆತನ?

ಈ ರೀತಿಯಲ್ಲಿ ನಮ್ಮ ದೇಶದಲ್ಲಿ ಸಾಕಷ್ಟು ಸಕ್ಕರೆ, ಅಕ್ಕಿ ಗೋಧಿ, ಜೋಳ ಮೊದಲಾದ ಆಹಾರ ಧಾನ್ಯಗಳಿದ್ದರೂ ಕೂಡಾ ಬಡ ಜನರ, ಮಧ್ಯಮ ವರ್ಗದವರ ಕೈಗೆ ಮಾತ್ರ ಅದು ಎಟಕುತ್ತಿಲ್ಲ, ಹಣದುಬ್ಬರದ ಪ್ರಮಾಣ ಕಡಿಮೆಯಾಗುತ್ತಿದೆಂದು ಮನಮೋಹನ ಸಿಂಗ್ ಪ್ರಚಾರ ಗಿಟ್ಟಿಸುತ್ತಿದ್ದರೂ, ಅದರ ಪರಿಣಾಮ ಮಾತ್ರ ಬೆಲೆಯೇರಿಕೆಯನ್ನು ಪಡೆಯುವ ಕಿಂಚಿತ್ತೂ ಇಲ್ಲ.

ರಿಸರ್ವ್ ಬ್ಯಾಂಕಿನ ವರದಿ ಪ್ರಕಾರ 5000ಕ್ಕೂ ಹೆಚ್ಚು ವ್ಯಕ್ತಿಗಳು ಮತ್ತು ಕಂಪನಿಗಳು ಬ್ಯಾಂಕುಗಳಿಂದ ಸಾಲ ಪಡೆದು ಅದನ್ನು ವಾಪಸ್ ಕೊಡಲು ತಪ್ಪಿದ್ದಾರೆ. ಕೇಂದ್ರ ಸರಕಾರ ಅದನ್ನು "ಹಿಂತಿರುಗಿಸಲು ಸಾಧ್ಯವಿಲ್ಲದ ಸಾಲ"(ಬ್ಯಾಡ್ ಡೆಟ್) ಎಂದು ಪರಿಗಣಿಸಿದೆಯಂತೆ. ಈ ರೀತಿಯ ಬ್ಯಾಡ್ ಡೆಟ್ ರಖಮು ಒಟ್ಟು ರೂ. 30,000 ಕೋಟಿಗೂ ಮೀರಿದೆಯಂತೆ. ಬಡಜನರಿಗೆ ಪಡಿತರ ಅಂಗಡಿಗಳಲ್ಲಿ ವಿತರಣೆ ಮಾಡುವ ಸಕ್ಕರೆ ಮತ್ತು ಆಹಾರ ಧಾನ್ಯಗಳ ಬೆಲೆಯನ್ನು ಶೇ. 25ರಷ್ಟು ಕಡಿಮೆ ಮಾಡಲು ರೂ. 800 ಕೋಟಿ ಬೇಕಾಗಿದ್ದು ಅದು ದೇಶದ ಆರ್ಥಿಕತೆಯ ಮೇಲೆ ಕೆಟ್ಟ ಪರಿಣಾಮ ಬೀರಬಹುದೆಂಬ ಮನಮೋಹನಸಿಂಗರ ಮೊಸಳೆ ಕಣ್ಣೀರು ಎಷ್ಟು ಬೆಚ್ಚಗಿರಬೇಕೆಂದು ಊಹಿಸುವುದೂ ಕಷ್ಟ ಅಲ್ಲವೇ?

ಇದಕ್ಕೆಲ್ಲ ಮುಖ್ಯಕಾರಣ ನರಸಿಂಹರಾವ್ ಸರಕಾರ ಅನುಸರಿಸುತ್ತಿರುವ ಆರ್ಥಿಕ ನೀತಿ, -ಸಬ್ಸಿಡಿ ರದ್ದು ಮಾಡಬೇಕು. ಸ್ವತಂತ್ರ ಮಾರುಕಟ್ಟೆಗೆ ಅವಕಾಶ ನೀಡಬೇಕೆಂಬ ಐಎಂಎಫ್, ವಿಶ್ವ ಬ್ಯಾಂಕುಗಳ ಒತ್ತಡ ಇದಕ್ಕೆಲ್ಲಾ ಮುಖ್ಯ ಕಾರಣ.

ಜನಸಾಮಾನ್ಯರಿಗೆ ದಿನನಿತ್ಯ ಬೇಕಾಗುವ 14 ವಸ್ತುಗಳನ್ನು ಪಡಿತರ ಅಂಗಡಿಗಳ ಮೂಲಕ ಕಡಿಮೆ ದರದಲ್ಲಿ ಜನಸಾಮಾನ್ಯರಿಗೆ ಒದಗಿಸಬೇಕೆಂದು ಸಿಪಿಐ(ಎಂ) ನೇತೃತ್ವದ ಪಶ್ಚಿಮ ಬಂಗಾಲ ಸರಕಾರ ಕೇಂದ್ರ ಸರಕಾರದ ಮೇಲೆ ಒತ್ತಡ ತರುತ್ತಲೇ ಬಂದಿದೆ. ಹೆಚ್ಚು ಆಹಾರ ಧಾನ್ಯ ಒದಗಿಸಬೇಕೆಂದೂ ಕೇಳುತ್ತಾ ಬಂದಿದೆ. ಈಗ ರಾಜ್ಯ ಸರಕಾರಗಳು ಹೆಚ್ಚು ಸಕ್ಕರೆ-ಆಹಾರ ಧಾನ್ಯ ಒದಗಿಸಬೇಕು, ಶೇ. 25ರಷ್ಟು ಅವುಗಳ ಬೆಲೆ ಕಡಿಮೆ ಮಾಡಬೇಕೆಂಬ ಒತ್ತಾಯ ತಂದಿವೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಸಂಘಟಿತ ಕಾರ್ಮಿಕ ವರ್ಗ ರಾಜ್ಯಗಳ ಈ ಬೇಡಿಕೆಗಳಿಗೆ ಸಂಪೂರ್ಣ ಬೆಂಬಲ ನೀಡುತ್ತದೆ. ರಾಜ್ಯ ಸರಕಾರಗಳ ಬೇಡಿಕೆಗಳನ್ನು ಮಂಜೂರು ಮಾಡಬೇಕೆಂದು ಕೇಂದ್ರ ಸರಕಾರದ ಮೇಲೆ ಒತ್ತಾಯ ತರುತ್ತದೆ.